Shimoga, Gauribidanur, Kampli and Pandavapura, etc.;

(*b*) whether there is any proposal for starting one more Sugar Factory in Tarikere Taluk;

(*c*) when these factories are expected to go into production;

(*d*) what are the steps taken to raise sugarcane for these factories?

A.—Sri H. M. CHANNABASAPPA (Minister for Industries).—

(*a*) In the case of the Shimoga Factory construction work is reported to be progressing. In the case of the others, construction work has not yet been taken up.

(*b*) Yes.

(*c*) Except in the case of the Gauribidanur Factory, the other factories are expected to go into production within the period stipulated by the Licensing Committee of the Government of India.

(*d*) Government have no information.

Tank at Bichapur, Gauribidanur Taluk (Third Sluice).

Q.—453. Sri A. MUNIYAPPA (Sidlaghatta - Chikballapur—Scheduled Castes).—

Will the Government be pleased to state:—

(*a*) whether it has come to their notice that two sluices were first sanctioned by them to the tank at Bichapur in Gauribidanur Taluk;

(*b*) the reason for having a third sluice to the said tank (details to be given)?

A.—Sri H. M. CHANNABASAPPA (Minister for Industries).—

(*a*) Yes.

(*b*) It was found that owing to a change in the alignment of the bund during the execution of the work, a third sluice was necessary for the purpose of irrigating certain lands entitled to water supply.

Tanks in Chikmagalur District.

Q.—479. Srimathi B. L. SUBBAMMA (Chikmagalur-Mudigere).—

Will the Government be pleased to state:—

(*a*) the number of tanks in Chikmagalur District;

(*b*) the steps taken by them in regard to their repairs for the last two years;

(*c*) whether they contemplate desilting also in addition to repairing the sluices and bunds in the case of repairing malnad tanks?

A.—Sri H. M. CHANNABASAPPA (Minister for Industries).—

(*a*) 2,321.

(*b*) Action was taken to effect repairs to 177 tanks during 1953-54 and to 171 tanks during 1954-55, after getting up necessary estimates.

(*c*) Desilting also will be done wherever necessary and feasible.

Sarvajanika Hostels.

Q.—627. Sri K. PRABHAKAR (Nelamangala—Scheduled Castes).—

Will the Government be pleased to state:—

(*a*) how many hostels have been so far built as Sarvajanika Hostels;

(*b*) what is the Government quota of help given in each case?

A.—Sri A. G. RAMACHANDRA RAO (Minister for Law and Education).—

(*a*) Nil.

(*b*) *Vide* Statement appended.

---

1 P.M.

Business of the House.

*Sri Mulka GOVINDA REDDY (Chitaldrug).—Mr. Speaker, Sir, according to the Provisional Programme that was given to us, Government had made provision for discussing the Second Five-Year Plan and some other Bills. According to the revised programme, we find that the session might come to

(SRI MULKA GOVINDA REDDY.)

an end after the discussion of the S.R. Bill. I would like to know whether the Government intend placing the Five-Year Plan before this House and whether the Government would intend placing the University Bill after it emerges from the Joint Select Committee and the Second Amendment Bill to the Tenancy legislation in Mysore which was half discussed and also other Bills so that the House may have a definite programme and the members might adjust their time according to that programme.

Mr. SPEAKER.—I will give a revised programme in consultation with the Government to-day afternoon or to-morrow morning.

Sri V. M. MASCARENHAS (St. John's Hill).—Last year, the Government was pleased to declare a holiday on Good Friday. May I request once-again to declare a holiday on Good Friday? If this is, however, impossible, will the Government atleast consider the desirability of having a morning session on that day, Sir?

Sri K. HANUMANTHAIYA (Chief Minister and Leader of the House).—Sir, the pressure of work during this session is so great that Good Friday has to remain as good. So far as the other suggestions are concerned, we may think over, Sir.

Mr. SPEAKER.—That will be considered.

To-day we have got demands Nos. 31, 32, 32A, 34, 43A and 44. I have allotted the time in this manner.

I will move Demand No. 31, but Demands Nos. 32, 32A and 43A can all be taken up together and discussed up to 3 P.M. The next Demand No. 34 (Miscellaneous) can be discussed for half an hour. Demand No. 44 *re.* Schemes connected with State Trading can be discussed from 4 to 5 P.M. Now I will move Demand No. 31.

DEMAND No. 31—TERRITORIAL AND POLITICAL PENSIONS.

54-A. TERRITORIAL AND POLITICAL PENSIONS.

Mr. SPEAKER.—Motion moved:

"That a sum not exceeding Rs. 2,31,000 be granted to the Government to defray the charges which will come in course of payment during the year ending 31st day of March 1957, in respect of 'Territorial and Political Pensions'."

*Sri MULKA GOVINDA REDDY (Chitaldrug).—I oppose the demand under Territorial and Political Pensions for Rs. 2,31,000.

Sir, since 1952, incessant demands have been made on the Government that this archaic system of paying pensions for political and other reasons should be done away with. In the new set up we talk of equality of persons and democratic way of life and socialist system of society. I fail to understand how these professions along with these practices can go together. The Finance Minister, when a cut motion was moved that this demand should be reduced by Rs. 100 disapproving of the Government policy, was pleased to say that the Government would pursue a policy of converting those people that were drawing these political pensions to voluntarily forego these pensions. Year after year the same pious promises are made but are not kept up. I would earnestly urge upon the Government that they should take serious steps to put an end to these archaisms and do away with this payment.

Regarding the second Demand, Sir, I oppose this Demand. Government have no set policy in giving extensions, in making re-employment of officers who have retired. For well-known reasons, Government have fixed up the retiring age at 55. We know, Sir, that many people, after they reach the age of 55, will not be able to discharge their duties properly, fairly and efficiently. For 30 to 35 long years they will have put in sufficient service; they will have engaged themselves in active life. So much so, they will have exhausted themselves and they will not be fit for any positive work that is entrusted to them. When such is the position, the Government are giving extensions indiscriminately and unnecessarily.

Especially in the Education Department, I know, there is dearth for trained teachers, but that should not be the criterion for giving extensions for three years, though they do it year after year. The problem of unemployment is deepening. When there are so many unemployed graduates who are finding it very difficult to find some appointment or other to eke out their livelihood and when they are asked to take up to other avocations or otherwise directed for purposes which may not be of any benefit to the State, the Government should seriously think of absorbing them in some Government job or other instead of giving extensions to those people who have already served their term in Government service. They have also given extensions in some other departments. In the Public Works Department they have appointed persons after their retirement to the same job ; they have also appointed a retired professor for the post of the Director of Cultural Education. I know that that department is going to be abolished as 58 members of this august Assembly have tabled a special resolution; it is but natural that the Government should give due respect, to the wishes of this House otherwise there is no democracy in Mysore State. Apart from that, Sir, the very policy of giving extensions is bad and when they are giving extensions, they make discriminatory treatment. This method of showing preference to some persons and others being discriminated does not do any good, does not bring any credit to the Government. I therefore oppose this Demand. Under no circumstances, should extensions be given and no person who is retired should be re-employed to that place.

*Sri H. C. LINGA REDDY (Malur).—Sir, I wish to support these Demands. While so doing, I would like to say a word or two. With regard to the Demand for Territorial and Political Pensions for an amount of Rs. 2,31,000, time and again, it has been urged on the Government to see that this payment of Rs. 2,31,000 be discontinued. I remember, Sir, that our Leader was good enough to tell us one or two years back that the Government would consider the representation sympathetically and see how best this could be done away with. But year after year, we have been seeing the payment of this amount. I think the payment of this amount of Rs. 2,31,000 towards Territorial and Political Pensions the details of which are given on page 124 of the Budget is something which is not in keeping with the times. We are living in a democratic age. We have declared our country a Democratic republic. After all, if these amounts were being paid for something done in the military or in the political struggle, it would have been understandable. But merely because certain persons happen to be born in a certain family these payments are made. About 4 names are given on page 124 of the Budget to each of whom payment of Rs. 40,000 is made every year, and to the three sons of a particular individual certain amounts are being paid. I am afraid these payments are against the Constitution in that the discrimination is being made in favour of these people for no reason whatsoever. Therefore, Sir, I submit that there is absolutely no justification for the continuation of the payment of these amounts to these people and I request the Government to have negotiations with the concerned people and see how best the payment of these amounts can be stopped. With regard to payment of allowances and pensions, some of my friends, particularly Sri R. Muniswamiah has tabled a cut motion to discuss whether they have a list of persons who have been political sufferers in the State of Mysore and what steps have been taken for the alleviation of the sufferings of these political sufferers. In the freedom movement, many a brave son of India has taken on active part and they have suffered very considerably and I request the Government to see that some help is given to those that have suffered. In many cases, those who took part in the freedom movement are no more and they have left their dependents, their wives or their children. It is necessary that some effort should be made to help these

(SRI H. C. LINGA REDDY.)

children. With these few remarks I support the Demands.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಈ ಸೂಪರ್‌ಆನ್ಯುಯೇಷನ್ ವಿಷಯದಲ್ಲಿ ಸರ್ಕಾರದ ನೀತಿ ಸ್ಪಷ್ಟವಾದ ನೀತಿಯಾಗಿಲ್ಲ. 55 ನೇ ವರ್ಷಕ್ಕೆ ಅವರನ್ನು retire ಮಾಡಬೇಕು ಎಂಬ ಆ ರೂಲನ್ನು ಕಡ್ಡಾಯವಾಗಿ ಎಲ್ಲರಿಗೂ ಅನ್ವಯಿಸಬೇಕು. ಹಾಗಿಲ್ಲದೆ ಕೆಲವರ ವಿಷಯದಲ್ಲಿ ವಿನಾಯಿತಿಗಳನ್ನು ತೋರಿಸಿ ಅವರಿಗೆ extension ಕೊಟ್ಟರೆ, ಉಳಿದವರ ಮನಸ್ಸಿಗೆ ಬಹಳ ಅಸಮಾಧಾನವುಂಟಾಗುತ್ತದೆ. ಸರಕಾರದವರು ನಿಷ್ಪಕ್ಷಪಾತವಾದ ನೀತಿಯನ್ನು ಅನುಸರಿಸುತ್ತಾ ಇಲ್ಲ ಎಂಬ ಅಪಖ್ಯಾತಿಗೆ ಗುರಿಯಾಗಬೇಕಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ಒಂದು ನಿಖರವಾದ ನೀತಿಯನ್ನು ಅನುಸರಿಸಿ ಯಾವ ಒಂದು ಪಕ್ಷಪಾತದ ಆಪಾದನೆಗೂ ಅವಕಾಶವಿಲ್ಲದಂತೆ ಸರಕಾರದವರು ನಡೆದುಕೊಳ್ಳಬೇಕಾದುದು ನ್ಯಾಯವಾಗಿದೆ. ಸರಕಾರದವರು ಬೇಕು ಎಂದು ಪಕ್ಷಪಾತ ನೀತಿಯನ್ನು ಅನುಸರಿಸುತ್ತಿದ್ದಾರೆ ಎಂದು ಹೇಳುವುದಿಲ್ಲ. ಆದರೆ ಅಪಖ್ಯಾತಿ ಸರಕಾರಕ್ಕೆ ಬರುತ್ತಾ ಇದೆ. ಏತಕ್ಕೆಂದರೆ ಕೆಲವರ ವಿಷಯದಲ್ಲಿ ರಿಯಾಯಿತಿ ತೋರಿಸುವುದು, ಮತ್ತೆ ಕೆಲವರ ವಿಷಯದಲ್ಲಿ ರಿಯಾಯಿತಿ ತೋರಿಸದೆ ಇರುವುದು ಈ ರೀತಿ ಆಗುತ್ತಿದೆ. ಹಾಗೇನಾದರೂ ರಿಯಾಯಿತಿ ತೋರಿಸಬೇಕಾದರೆ ಅದಕ್ಕೆ ಸರಿಯಾದ ಕಾರಣವಿದೆ ಎಂಬುದಕ್ಕೆ Cabinet ಆಲೋಚನೆ ಮಾಡಿ ಸರ್ಕಾರದ ಆರ್ಡರ್ ಮುಖಾಂತರ ಎಲ್ಲರಿಗೂ ತಿಳಿಯುವಂತೆ ಸ್ಪಷ್ಟಪಡಿಸಬೇಕು. ಕೆಲವರು ಅಂಥವರು ಇರಬಹುದು. ಇನ್ನೊಂದು Retirement ವಯಸ್ಸಿನ ವಿಷಯ. ಈ ವಿಷಯದಲ್ಲಿ 55 ವಯಸ್ಸು ಎನ್ನುವುದನ್ನು ಈಗ ಬಹಳಮಟ್ಟಿಗೆ ಕೆಲವು ಸಂದರ್ಭದಲ್ಲಿ settle ಮಾಡುತ್ತಾರೆ. ಹೈಕೋರ್ಟ್ ಜಡ್ಜಿಗಳ ವಿಷಯದಲ್ಲಿ 55 ವಯಸ್ಸು ಇದ್ದುದು 57 ಮಾಡಿದರು, ಈಗ 60 ನೇ ವಯಸ್ಸಿನಲ್ಲಿ retire ಆಗಬೇಕೆಂದು ಮಾಡಿದ್ದಾರೆ. ಹೈಕೋರ್ಟ್ ಜಡ್ಜಿಗಳ ವಿಷಯದಲ್ಲಿ ಹಾಗೆ ಮಾಡಿರುವುದಕ್ಕೆ ಏನು ಕಾರಣವಿದೆ ಎಂದು ನಾವೇನಾದರೂ ಆಲೋಚನೆ ಮಾಡಿದರೆ, ಬಹುಶಃ ಅವರಿಗೆ ಪರಿಪಕ್ವವಾದ ಬುದ್ಧಿ, ಅನುಭವ ಇದೆ ಎಂದು ಹೇಳಬಹುದು, ಅದೇ ರೀತಿ District Judges, ಮುನ್ಸೀಫ್‌ಗಳು, Judiciary—ಇದಕ್ಕೆಲ್ಲಾ ಹೀಗೆಯೇ ಅನ್ವಯಿಸಬಹುದು. ಆ ಪದ್ಧತಿ ಇವರಿಗೂ ಏತಕ್ಕೆ ಅನ್ವಯಿಸಬಾರದು ಎನ್ನುವ ವಿಷಯಗಳನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಏಕೆಂದರೆ ಸಾಮಾನ್ಯವಾಗಿ judiciaryಯಲ್ಲಿ ಅನೇಕ ಕೇಸುಗಳನ್ನು ನೋಡಿ, ನೋಡಿ, ಯಾವುದು ನ್ಯಾಯ ಎನ್ನುವುದು ಒಂದು ಪರಿಪಕ್ವವಾದ ರೀತಿಯಲ್ಲಿ ತೀರ್ಮಾನವಾಗಬೇಕಾಧರೆ ಸ್ವಲ್ಪ ವಿಶೇಷ ಅನುಭವಬೇಕು. ಆದ್ದರಿಂಧ ಹೈಕೋರ್ಟ್ ಜಡ್ಜಿಗಳಿಗೆ ಕೊಟ್ಟಿರುವ ರಿಯಾಯಿತಿ ಇತರ ಜಡ್ಜಿಗಳಿಗೂ, ಮುನ್ಸೀಫ್ ಅವರಿಗೂ ಕೂಡ ಏತಕ್ಕೆ ಅನ್ವಯಿಸಬಾರದು ಎನ್ನುವ ವಿಷಯವನ್ನು ಸರ್ಕಾರದವರು ಆಲೋಚನೆ ಮಾಡಬೇಕು.

ಮತ್ತೊಂದು ವಿದ್ಯಾಭ್ಯಾಸದ ಇಲಾಖೆಯ ವಿಷಯ. ಯೂನಿವರ್ಸಿಟಿಯಲ್ಲಿ ಸಾಮಾನ್ಯವಾಗಿ 60 ವರ್ಷ ವಯಸ್ಸಾದರೂ ಕೂಡ ಅನೇಕರಿಗೆ appointmentನ್ನು ಮುಂದುವರಿಸುತ್ತಲೇ ಇದ್ದಾರೆ. ಯಾವ ರೀತಿಯಾಗಿ judiciaryಯಲ್ಲಿ ಒಂದು ವಿಶೇಷ ಅನುಭವ ಮತ್ತು ಪರಿಪಕ್ವತೆ ಇದೆ ಎಂದು ಆಲೋಚಿಸಬಹುದೋ ಹಾಗೆಯೇ ಇಲ್ಲಿಯೂ ಇದೆಯೆಂದು ಊಹಿಸಬಹುದು, ಅದೇ ರೀತಿ ಉಪಾಧ್ಯಾಯರಲ್ಲಿ ಕೂಡ ಸಾಮಾನ್ಯವಾಗಿ ಅನುಭವವಿರುವವರು ಪಾಠ ಹೇಳುವುದಕ್ಕೂ, ಅನುಭವವಿಲ್ಲದೇ ಇರುವ ಉಪಾಧ್ಯಾಯರು ಪಾಠ ಹೇಳುವುದಕ್ಕೂ ವ್ಯತ್ಯಾಸವಿದೆ. ಆದ್ದರಿಂದ ವಿದ್ಯಾಭ್ಯಾಸ ಇಲಾಖೆಯಲ್ಲಿಯೂ ಕೂಡ, ಪ್ರೈಮರಿ, ಮಿಡಲ್, ಮತ್ತು ಹೈಸ್ಕೂಲ್, ಎಲ್ಲಾ ಭಾಗದಲ್ಲೂ ಕೂಡ ವಯಸ್ಸಿನ ಪರಿಮಿತಿಯನ್ನು ಹೆಚ್ಚಿಸಬೇಕೆಂಬುದಾಗಿ ನಾನು ಸಲಹೆ ಮಾಡುತ್ತೇನೆ. ಈಗ ಕೆಲವು ಉಪಾಧ್ಯಾಯರಿಗೆ 57 ವರ್ಷವಾದ ಮೇಲೆ ರಿಟೈರ್ ಆಗಬಹುದು ಎಂದು ಸರ್ಕಾರ ಆರ್ಡರ್ ಮಾಡಿದ ಹಾಗೆ ಕಾಣುತ್ತದೆ, ಅದನ್ನು ಎಲ್ಲರಿಗೂ ಅನ್ವಯಿಸುವ ಹಾಗೆ ಮಾಡಬೇಕು.

ಮೂರನೆಯದು, ಪೆನ್ಷನ್ ಆಗಿರುವವರನ್ನು ಪುನಃ ಕೆಲಸಗಳಿಗೆ ನೇಮಕ ಮಾಡುವುದು. ಮೊದಲು ಎಕ್ಸ್‌ಟೆನ್ಷನ್ ಕೊಡುತ್ತಿದ್ದುದನ್ನು ಈಗ re-employment ಎಂದು ಮಾಡಿದರು. ನಿಬಂಧನೆಗಳನ್ನು ಹೊಸ ರೀತಿಯಲ್ಲಿ ತಿದ್ದುಪಡಿಮಾಡಿ ಹೊಸ ರೀತಿಯಲ್ಲಿ ನೇಮಕ ಮಾಡುತ್ತಿರುವುದು ಕಾಣುತ್ತದೆ. ಇದು ಕೂಡ ಸರಿಯಾದುದಲ್ಲ. ಒಂದು ಸಾರಿ ರಿಟೈರ್ ಆದ ಮೇಲೆ ಆಗಿ ಹೋಯಿತು, ಪುನಃ ಅವರನ್ನೇ ನೇಮಕಮಾಡಿಕೊಳ್ಳುವುದು ಸೂಕ್ತವಲ್ಲ. ಈ ವಿಷಯಕ್ಕೆ ಸಂಬಂಧಪಟ್ಟ ರಿಟೈರ್‌ಮೆಂಟ್ ರೂಲ್ಸ್ ಪುನರ್ವಿಮರ್ಶೆ ಮಾಡಬೇಕು.

ಮತ್ತೊಂದು, correct age ವಿಷಯ. ಹಿಂದಿನ ಮಂತ್ರಿ ಮಂಡಲದವರು ಅಧಿಕಾರಿಗಳು ಹುಟ್ಟಿದ ತಾರೀಖನ್ನು ನೋಡಿ verify ಮಾಡಿ ಅನೇಕರನ್ನು ನಿವೃತ್ತಿಮಾಡಿದರು. ವಿಶ್ವವಿದ್ಯಾನಿಲಯ ಅಥವಾ ಅವರವರು ಓದುತ್ತಿದ್ದ ಪಾಠಶಾಲೆಗಳ ರಿಜಿಸ್ಟರುಗಳನ್ನು ನೋಡಿಕೊಂಡು ಈ ರೀತಿ ಅನೇಕರನ್ನು ರಿಟೈರ್ ಮಾಡಿದರು. ಆದರೆ ಯಾರನ್ನು ರಿಟೈರ್ ಮಾಡುತ್ತೇವೋ ಅವರನ್ನು ನೀವು ಹೇಳಿದುದು ಸರಿಯೆ ಅಥವಾ ತಪ್ಪೇ, ಏಕೆ ವ್ಯತ್ಯಾಸವಾಗಿದೆ ಎಂದು ಕೇಳಿ, ತಮ್ಮನ್ನು ಕೇಳಿ ಸರಿಯಾದ್ದನ್ನು ಮಾಡಿದ್ದಾರೆಂದು ಆ ಅಧಿಕಾರಿಗಳ ಮನಸ್ಸಿಗೆ ಬರಬೇಕು. ಹೀಗೆ ಮಾಡಿಲ್ಲದೇಯಿರುವುದರಿಂದ ಅನೇಕರು ಮನಸ್ಸಿನಲ್ಲಿ ವ್ಯಥೆಪಡುತ್ತಿದ್ದಾರೆ. ಇವರಲ್ಲಿ ಅನೇಕರು ಕಡಮೆ ಸಂಬಳದವರೂ ಇದ್ದಾರೆ. ಅವರು ಹೇಳುವುದನ್ನೂ ಕೇಳಿ, ವಿಮರ್ಶೆ ಮಾಡಿ ಯಾರಿಗೂ ಮನಸ್ಸಿಗೆ ನೋವಿಲ್ಲದ ಹಾಗೆ ಮಾಡುವುದೊಳ್ಳೆಯದು, ನ್ಯಾಯ. ಇಷ್ಟೇ ನಾನು ಹೇಳುವುದು.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಡಿಮ್ಯಾಂಡಿನಲ್ಲಿ ಬಡ್ಜೆಟ್ಟಿನ 124 ನೆಯ ಪುಟದಲ್ಲಿ ತೋರಿಸಿರುವ ಇಷ್ಟು ಹಣವನ್ನೂ ಉಳಿಸಬಹುದೆಂದು ಕಾಣುತ್ತದೆ. ಯಾವುದೋ ಕಾಲದಲ್ಲಿ, ಪಾಳೆಯಗಾರರು, ರಾಜರು ಆಳುತ್ತಿದ್ದ ಕಾಲದಲ್ಲಿ, ಪರದೇಶದ ಪರಂಗಿಯವರು ಅವರನ್ನು ಜಯಿಸಿ ಹದ್ದಿನಲ್ಲಿಟ್ಟುಕೊಳ್ಳೋಣವೆಂದು ಅವರಿಗೆ ಸ್ವಲ್ಪ ಹಣವನ್ನು ಪೆನ್ಷನ್ ಮತ್ತು ಅಲೋಯನ್ಸ್‌ರೂಪವಾಗಿ ಕೊಟ್ಟು ಇದನ್ನು ಉಳಿಸಿಕೊಂಡು ಬಂದರು. ಹೀಗೆ ಪರಂಗಿಯವರು ಇಲ್ಲಿ ಆಳುತ್ತಿದ್ದಾಗ ರಾಜಮನೆತನದವರಿಗೆ ಪೆನ್ಷನ್ ಕೊಡುತ್ತಿದ್ದರು. 1947 ರಿಂದೀಚೆಗೆ ಭಾರತ ದೇಶ ಸ್ವಾತಂತ್ರ್ಯ ಪಡೆದ ಮೇಲೆ ಕೂಡ ಹಿಂದಿನ ಪಾಳೆಯಗಾರರ ಮನೆತನದವರನ್ನೂ, ರಾಜರನ್ನೂ ಹದ್ದಿನಲ್ಲಿಟ್ಟುಕೊಳ್ಳೋಣ, ನಮ್ಮ ಸರ್ಕಾರಕ್ಕೆ ಅನುಕೂಲವಾಗುತ್ತದೆ ಎನ್ನುವ ಮನೋಭಾವದಿಂದ ಮಾಡಿದರೆ ತಪ್ಪಾಗುತ್ತದೆ. ಈ ಪ್ರಜಾಪ್ರಭುತ್ವ ಕಾಲದಲ್ಲಿ ಎಲ್ಲರನ್ನೂ

ಸಮಾನವಾಗಿ ಕಾಣಬೇಕಾದ ಪರಿಸ್ಥಿತಿಯಲ್ಲಿರುವಾಗ ಹಿಂದಿನ ರಾಜಮನೆತನಗಳಿಗೆ ಪೆನ್ಷನ್ ಕೊಡುವುದನ್ನು ಬಿಟ್ಟುಬಿಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಅಲ್ಲದೆ ಇದುವರೆಗೆ ಅವರಾರನ್ನೂ, 'ನಿಮಗೆ ಪೆನ್ಷನ್ ಕೊಡುವುದನ್ನು ತಪ್ಪಿಸುವುದು ಒಳ್ಳೆಯದಲ್ಲವೆ' ಎಂದು ನಮ್ಮ ಸರ್ಕಾರ ಅಥವಾ ಕೇಂದ್ರ ಸರ್ಕಾರ ಕೇಳಿಲ್ಲ. ಈಗಲಾದರೂ ತಮ್ಮ ಪೆನ್ಷನ್ ಬಿಟ್ಟುಬಿಡಬೇಕೆಂದು ಅವರನ್ನು ಕೇಳಬೇಕೆಂದು ಸಲಹೆ ಮಾಡುತ್ತೇನೆ. ಹಾಗಿಲ್ಲದೆ, ಈ ಅಲೋಯನ್ಸುಗಳು ಮತ್ತು ಪೆನ್ಷನ್‌ಗಳನ್ನು ಕೊಟ್ಟೇ ಕೊಡಬೇಕು, ಇದು ಕೇಂದ್ರ ಸರ್ಕಾರಕ್ಕೆ ಸೇರಿದುದು ಎಂದು ಹೇಳುವುದಾದರೆ, ಕೇಂದ್ರ ಸರ್ಕಾರದ ಬೊಕ್ಕಸದಿಂದಲೇ ಇವುಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕು. ನಮ್ಮ ಸರ್ಕಾರದ ಬೊಕ್ಕಸದಿಂದ ಕೊಡುವುದನ್ನು ನಿಲ್ಲಿಸಲು ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯ. Superannuation pensions ನಲ್ಲಿ, ಕೆಲವು ಇಲಾಖೆಗಳಲ್ಲಿ ನಿವೃತ್ತರಾದ ನೌಕರರಿಗೆ ಐದಾರು ವರ್ಷಗಳಿಂದ ಪೆನ್ಷನ್ ಬರುತ್ತಿಲ್ಲ. ಅವರು ಬಹಳ ಕಷ್ಟಪಡುತ್ತಿದ್ದಾರೆ. ಅವರು ಬಹಳವಾಗಿ ಪತ್ರ ವ್ಯವಹಾರ ನಡೆಸುತ್ತಿದ್ದರೂ ಅವರಿಗೆ ಜಾಗ್ರತೆ ಪರಿಹಾರ ಸಿಕ್ಕುತ್ತಿಲ್ಲ, ನನಗೆ ತಿಳಿದಿರುವ ಹಾಗೆ, ಸೆರಿಕಲ್ಚರ್ ಇಲಾಖೆಯಲ್ಲಿ ಒಬ್ಬ ನೌಕರರು ರಿಟೈರ್ ಆಗಿ ಐದು ವರ್ಷಗಳಾದವು; ಇನ್ನೂ ಪೆನ್ಷನ್ ಬರಲಿಲ್ಲವೆಂದು ಒಂದು ತಿಂಗಳ ಹಿಂದೆ ನನಗೆ ಹೇಳಿದರು. ಹೀಗೆಯೇ ಬೇರೆ ಬೇರೆ ಇಲಾಖೆಗಳಲ್ಲಿ ಎಷ್ಟೋ ಇವೆ. ಅಂಥ ರಿಕಾರ್ಡುಗಳನ್ನು ತರಿಸಿಕೊಂಡು ಪೆನ್ಷನ್‌ದಾರರಿಗೆ ಜಾಗ್ರತೆ ಪೆನ್ಷನ್ ಕೊಡುವುದಕ್ಕೆ ಪ್ರಯತ್ನ ಮಾಡಬೇಕು.

Political sufferers, ಎಂದರೆ, ರಾಜಕೀಯದಲ್ಲಿ ನೊಂದವರು ಕೆಲವು ಜನರಿದ್ದಾರೆ. ಅವರ ಪಟ್ಟಿಯನ್ನು ತಯಾರು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಈಗಲಾದರೂ ವಿವರಗಳನ್ನು ತರಿಸಿಕೊಂಡು ಎಷ್ಟು ಮಟ್ಟಿಗೆ ಅವರಿಗೆ ಪರಿಹಾರ ಕೊಡಬಹುದು ಅಥವಾ ಇಲ್ಲ ಎಂಬುದನ್ನು ಪರಿಶೀಲನೆ ಮಾಡಬೇಕು. ಬೆಂಗಳೂರು ನಗರದಲ್ಲಿ 1942 ನೆಯ ಇಸವಿಯಲ್ಲಿ ರಾಜಕೀಯ ಚಳವಳಿ ನಡೆದ ಕಾಲದಲ್ಲಿ ಎಲ್ಲ ಕಡೆಯೂ ಸತ್ಯಾಗ್ರಹ ನಡೆಯಿತು. ಆಗ ಮೈಸೂರು ಬ್ಯಾಂಕಿನಿಂದ ಹಿಡಿದು ಸಿಟಿ ಮಾರ್ಕೆಟ್‌ನವರೆಗೆ ರಾಜಕೀಯ ಸೈನ್ಯ ಸೇರಿತ್ತು. ಆ ಕಾಲದ ಪೋಲೀಸರು ಜನರ ಮೇಲೆ ಲಾಠಿ ಚಾರ್ಜು ಮಾಡಿದರು, ಗುಂಡು ಹಾರಿಸಿದರು. ಕಬ್ಬನ್‌ಪೇಟೆಯ ಹತ್ತಿರ ಅವಿನ್ಯೂ ರೋಡಿನಲ್ಲಿ ಗುಂಡುಹಾರಿಸಿದಾಗ ಕಾಪ್ಸೆನಾರಾಯಣರಾವ್ ಎಂಬುವರಿದ್ದರು. ಅವರು ಅನೇಕ ವರ್ಷಕಾಲ ಸ್ವಾತಂತ್ರ್ಯಕ್ಕಾಗಿ ದುಡಿದ ವ್ಯಕ್ತಿ. ಅವರನ್ನು ಪೋಲೀಸರು ಸುಮಾರು 12 ಗಂಟೆಯ ಹೊತ್ತಿನಲ್ಲಿ ಗುಂಡು ಹಾರಿಸಿಕೊಂದರು. ಅವರ ಗುರುತುಹಿಡಿಯಲು ಪೋಲೀಸ್ ಸ್ಟೇಷನ್‌ನಲ್ಲಿ ಅವರ ಭಾವಚಿತ್ರವನ್ನಿಟ್ಟಿದ್ದರು. ಆಮೇಲೆ ಅವರ ಮನೆಯವರು ಗುರುತು ಹಿಡಿದು, ಆ ಕಾಲದಲ್ಲಿ ನಮಗೆ ಪರಿಹಾರ ಕೊಡಿ ಎಂದು ಕೇಳಿಕೊಂಡರು. ಆದರೆ ಕೊಡಲಿಲ್ಲ, ಆಗಿನ ಸರ್ಕಾರ. 1947 ನೆಯ ಇಸವಿಯಲ್ಲಿ ಮತ್ತು ಈಚೆಗೆ ಕೂಡ ಮೈಸೂರು ಪ್ರದೇಶ್ ಕಾಂಗ್ರೆಸ್ ಕಮಿಟಿಗೂ ಬರೆದುಕೊಂಡಿದ್ದರೆಂದು ಕಾಣುತ್ತದೆ. ಇಂಡಿಯಾ ದೇಶದ ಅಧ್ಯಕ್ಷರಾದ ಡಾ|| ರಾಜೇಂದ್ರ ಪ್ರಸಾದ್‌ರವರಿಗೂ ಅರ್ಜಿ ಹಾಕಿದ್ದರು. ಅದಕ್ಕೆ ಅವರು ಪ್ರಾದೇಶಿಕ ಸರ್ಕಾರಕ್ಕೆ ಬರೆದಿದ್ದೇವೆ ಅವರಲ್ಲಿ ಕೇಳಿ ಎಂದು ಉತ್ತರ ಕೊಟ್ಟಿದ್ದಾರೆ. ಈ ವಿಷಯದಲ್ಲಿ ನಮ್ಮ ಸರ್ಕಾರಕ್ಕೆ ಬರೆದಿದ್ದಾರೆಂದು ಕಾಣುತ್ತದೆ. ಇದನ್ನು ಜಾಗ್ರತೆ ಪರಿಶೀಲನೆ ಮಾಡಿ ಕೊಡಬೇಕಾದ ಪರಿಹಾರವನ್ನು ಕೊಡಬೇಕೆಂದು ಸೂಚಿಸುತ್ತೇನೆ.

*Sri M. PALANIYAPPAN (Ulsoor).—Sir, the question of political pensions and other things have already been spoken of on the floor of this House, and also about the sufferings these political sufferers all these years. Government sometime back made some announcement that they would give free land to political sufferers. But, as I could see, only a negligible, microscopic number has got free lands or help from the Government. There are many hundreds of political sufferers in the State to-day, who have not approached the Government, feeling that they would not get anything. They are suffering and undergoing the ordeals of poverty. There are many instances and my friend Mr. R. Muniswamiah has quoted one. Even in Civil Station and Bangalore City, there are many families whose bread-earners have lost their lives in the political struggle, and those families have now been left in the lurch, with nobody to care for and with no means to earn their livelihood. Once Mahatma Gandhi stayed in the house of a Harijan in Murphy Town, Civil Station, Bangalore. And that man died during the movement. But his wife and children are left with nothing to-day. Such instances are many to quote. I only appeal to the Government to have more sympathy towards these political sufferers and to help these people more. As I have already pointed out, Government has not helped and has not cared for the families of those political sufferers who have lost their lives, as they should have done.

1-30 P.M.

Sir, the Government is very considerate to the ex-service men and to the people who had gone to the battle field. I appreciate the Government for their action in giving them land and necessary loans and other facilities. But what has prompted the Government to neglect the political sufferers who have laid down their lives for the cause of the country, I cannot understand. Another instance which is uppermost

(SRI M. PALANIYAPPAN.)

in my mind is that during the political struggle, a Viswakarma boy who was the only earning member of the family was shot dead by the police in the Commercial Street. The boy died on the spot. I do not know whether the Government have made any enquiries about the family or have given any consideration. From the Budget, I can see provision is made for allowances to the families of Sirdars and Officers of the court of Hyder Ali and Tippu Sultan. It is more than 250 years and still we have made provision for looking after the descendants of these Sardars who worked in the courts of Hyder Ali and Tippu Sultan. Sir, the democratic Government has now been based on the sufferings and sacrifices of the political sufferers who deserve all the consideration and all the sympathy from the present Government. I only hope and pray that this Government would consider their case and do the needful. Of the Pallegars and others mentioned in this Budget, there are no details about names or addresses furnished here. I would very much wish that the Government gives the names and addresses of these people and I would also like to know whether they still exist or somebody in the name of these descendants are taking the money from the Government. Sir, these are days of democracy when we are thinking of building a socialistic pattern of society, a casteless and classless society. But I am sorry to note that we are still encouraging these Pallegars and Sirdars and other people who no longer deserve any consideration. It is high time that we should reconsider all these things and turn our attention to providing more facilities to the political sufferers.

Sir, coming to pensioners, I would like to add just one word. As already mentioned by my Hon'ble friends, the officers and officials who retire find it very difficult to get their pensions in time and they are at the same time disabled by old age from taking any kind of occupation and earn a living. Placed in this position, they feel it extremely difficult to manage themselves if they do not get their pension in time. I am personally aware that they undergo untold hardship. I therefore request that the Government should take immediately steps to see that the retired officers and officials are given their pension promptly and in time.

Thank you.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ರಾಜಕೀಯದಲ್ಲಿ ನೊಂದವರಿಗೆ ಸಹಾಯ ಮಾಡುವ ವಿಚಾರದಲ್ಲಿ ಒಂದು ಮಾತು ಹೇಳುವ ಉದ್ದೇಶದಿಂದ ಎದ್ದು ನಿಂತುಕೊಂಡಿದ್ದೇನೆ. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕರು ಭಾಗವಹಿಸಿದ್ದಾರೆ, ತ್ಯಾಗಮಾಡಿದ್ದಾರೆ. ಅವರ ಜೀವನಾಧಾರವಾಗಿದ್ದ ಕಸಬನ್ನು ಬಿಟ್ಟು ವರ್ಷಗಟ್ಟಲೆ ಜೈಲಿನಲ್ಲಿ ಕೊಳೆತಿದ್ದಾರೆ. ಪೋಲೀಸಿನವರ ಗುಂಡಿನೇಟಿಗೆ ಸಿಕ್ಕಿ ಸತ್ತಿದ್ದಾರೆ, ಇದೆಲ್ಲ ನಿಜ. ಅದಕ್ಕೋಸ್ಕರ ನಾವೆಲ್ಲ ಅವರುಗಳಿಗೆ ಕೃತಜ್ಞರಾಗಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವುದರಲ್ಲಿ ಅನೇಕ ವಿಧವಾಗಿ ಸಹಾಯ ಮಾಡಿದಂಥ ಮಹಾನುಭಾವರಲ್ಲಿ ಇವರು ಮುಖ್ಯರಾದವರು. ಈ ಒಂದೇ ವರ್ಗದವರಲ್ಲ ಇನ್ನೂ ಅನೇಕರು ಈ ಹೋರಾಟದಲ್ಲಿ ಸಹಾಯಮಾಡಿದ್ದಾರೆ. ಹಾಗೆ ನೋಡುವುದಾದರೆ ದೇಶಕ್ಕೆ ಕೂಡಲೆ ಸ್ವಾತಂತ್ರ್ಯ ದೊರೆತುದಕ್ಕೆ ಯುದ್ಧವೂ ಒಂದು ಕಾರಣ. ನೇತಾಜಿ ಸುಭಾಷ್ ಚಂದ್ರಬೋಸರು ಮಾಡಿದ ಸಾಹಸವೂ ಒಂದು ಕಾರಣ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾಂಗ್ರೆಸ್ಸಿನವರೂ ಮತ್ತು ಅವರ ಜೊತೆಗೆ ಸಹಾಯಕರಾಗಿದ್ದವರೂ ರಾಜಕೀಯ ಖೈದಿಗಳಾಗಿದ್ದು ಬಹಳ ತ್ಯಾಗಮಾಡಿದ್ದಾರೆ, ಕಷ್ಟಪಟ್ಟಿದ್ದಾರೆ, ನೊಂದಿದ್ದಾರೆ. ಅನೇಕರು ತಮಗೆ ಜೀವನದಿಯಾಗಿದ್ದ ಕಸಬನ್ನು ಬಿಟ್ಟು ಜೈಲಿನಲ್ಲಿ ಸತ್ತಿದ್ದಾರೆ, ಪೋಲೀಸಿನವರ ಲಾಠಿ ಏಟಿಗೆ ಗುರಿಯಾಗಿದ್ದಾರೆ, ಎಲ್ಲ ಕಷ್ಟಗಳನ್ನೂ ಅನುಭವಿಸಿದ್ದಾರೆ. ಅದಕ್ಕೋಸ್ಕರ ಈಗ ನಮಗೆ ದುಡ್ಡು ಕೊಡಿ, ಜಮೀನು ಕೊಡಿ, ನಮಗೆ ಸಹಾಯಮಾಡಿ ಎಂದು ಕೇಳವುದರಿಂದ ಆ ತ್ಯಾಗದ ಫಲವು ನಿಷ್ಫಲವಾಗುತ್ತದೆಂಬುದು ನನ್ನ ಭಾವನೆ. ನಾನು ನನ್ನ ಜೊತೆಯಲ್ಲಿ ಜೈಲಿನಲ್ಲಿದ್ದ ಸ್ನೇಹಿತರನೇಕರನ್ನು ಕಂಡಿದ್ದೇನೆ. ಅವರ ಕಷ್ಟಗಳನ್ನೂ ತಿಳಿದಿದ್ದೇನೆ, ಇಂಥವರಿಗೆ ಸಹಾಯ ಮಾಡಬಾರದೆಂಬುದಾಗಿ ನಾನು ಹೇಳುತ್ತಿಲ್ಲ. ಈ ಒಂದು ಕಾರಣಕ್ಕಾಗಿ ಸಹಾಯ ಮಾಡಬಾರದು ಎಂದು ಮಾತ್ರ ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ನಮ್ಮ ದೇಶವನ್ನು Socialist Pattern of Society ಎನ್ನುವಂತೆ ಮಾಡಬೇಕೆಂದಿದ್ದೇವೆ. ಮತ್ತು Welfare State ಮಾಡಬೇಕೆಂದಿದ್ದೇವೆ, ಎಲ್ಲರ ಕ್ಷೇಮವನ್ನೂ ನೋಡಿಕೊಳ್ಳತಕ್ಕ ಪ್ರಜಾ ಸರ್ಕಾರವಿದೆ. ಅದರಿಂದ ಕಷ್ಟದಲ್ಲಿರತಕ್ಕವರಿಗೆ ಬಡವರಿಗೆ, ಕಸಬು ಇಲ್ಲದವರಿಗೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕಾದದ್ದು ಸರ್ಕಾರದ ಕರ್ತವ್ಯ. ಯಾರಿಗೆ ಜಮೀನಿಲ್ಲವೋ, ಅವರು ಉಳುವಹಾಗಿದ್ದರೆ ಅಂಥವರಿಗೆ ಜಮೀನು ಕೊಡಬೇಕು. ಕೈಗಾರಿಕೆ ಕಸಬುದಾರರಿದ್ದರೆ ಅಂಥವರಿಗೆ ಕೈಗಾರಿಕೆ ಕಸಬನ್ನು ಕಲ್ಪಿಸಿಕೊಡಬೇಕು. ಯಾರಾದರೂ destitutes ನಿರ್ಗತಿಕರು, ಮತ್ತೆ ಕೈ, ಕಾಲು, ಕಣ್ಣು ಇಲ್ಲದಿರುವವರು ಇಂಥವರಿಗೆ ಅನುಕೂಲ ಮಾಡಲು ದಾನ ಧರ್ಮಗಳು, donation, ಇತ್ಯಾದಿ

ಗಳನ್ನು ಕೊಡುವುದರ ಮೂಲಕವೋ ಅಥವ ಉಚಿತವಾದ ಕಾರ್ಯಗಳನ್ನು ಕೈಗೊಳ್ಳುವುದರ ಮೂಲಕವೋ ಪ್ರಯತ್ನ ಮಾಡಬೇಕು. ಒಟ್ಟಿನಲ್ಲಿ ದೇಶದ ಜನರ ಕ್ಷೇಮ ಲಾಭಗಳನ್ನು ನೋಡಿಕೊಳ್ಳತಕ್ಕದ್ದು ಸರ್ಕಾರದ ಕರ್ತವ್ಯವಾಗಿದೆ. ಆ ದೃಷ್ಟಿಯಿಂದ ರಾಜಕೀಯದಲ್ಲಿ ನೊಂದವರಾಗಿದ್ದು, ಬಡವರಾಗಿದ್ದರೆ ಜೀವನಕ್ಕೆ ಮಾರ್ಗವಿಲ್ಲದಿದ್ದರೆ, ವ್ಯವಸಾಯವನ್ನವಲಂಬಿಸುವವರಾಗಿದ್ದರೆ, ಈಗ ಅವರ ಮನೆತನದವರು ವ್ಯವಸಾಯವನ್ನು ಅವಲಂಬಿಸಿ 'ಮಾಡುವವರಾಗಿದ್ದರೆ ಅಂಥವರಿಗೆ ಧಾರಾಳವಾಗಿ ಜಮೀನನ್ನು ಕೊಡಿ. ಆದರೆ ವ್ಯವಸಾಯಕ್ಕಲ್ಲದಿದ್ದರೂ ಅವರುಗಳಿಗೆ ಜಮೀನು ಕೊಟ್ಟು, ಅದನ್ನು ಅವರುಗಳು ಮಾರಿಕೊಳ್ಳುವುದಕ್ಕೆ ಅವಕಾಶವನ್ನುಂಟುಮಾಡಬಾರದು.

ಎರಡನೆಯದಾಗಿ ರೈತರು, ಕಾರ್ಮಿಕರು, ವರ್ತಕರು, ಮುಂತಾಗಿ ಎಷ್ಟೋ ಜನ ರಾಜಕೀಯಕ್ಕೆ ಬಂದು ಕಷ್ಟಪಟ್ಟಿದ್ದಾರೆ. ಏನೂ ಇಲ್ಲದೆ ಇದ್ದ ಜನರೂ ಸಹ ಇದರಲ್ಲಿ ಭಾಗವಹಿಸಿ ಬಹಳ ಕಷ್ಟ ನಷ್ಟಗಳನ್ನು ಅನುಭವಿಸಿದ್ದಾರೆ. ವಿದ್ಯಾರ್ಥಿಗಳು ಸಹ ಇದರಲ್ಲಿ ಕಷ್ಟಪಟ್ಟಿದ್ದಾರೆ. ಈಚೆಗೆ ಅವರು ಯಾವ ಯಾವ ಕೆಲಸಗಳಲ್ಲಿಯೋ ಇದ್ದಾರೆ. ಆದುದರಿಂದ ಒಂದೇ ವರ್ಗದ ಜನರು ಕಷ್ಟನಷ್ಟಗಳನ್ನನುಭವಿಸಿದ್ದಾರೆಂಬ ದೃಷ್ಟಿಯನ್ನು ಮಾತ್ರ ಇಟ್ಟುಕೊಳ್ಳಬಾರದು ಎಂದು ಹೇಳುತ್ತೇನೆ.

ಬಡವರಿಗೆ ಜಮೀನುಗಳನ್ನು upset price ಎಂದು ಒಂದು ಎಕರೆಗೆ ಒಂದೊಂದು ಕಡೆ ಒಂದೊಂದು ವಿಧವಾಗಿ 15 ರೂಪಾಯಿಗಳಿಂದ 600 ರೂಪಾಯಿಗಳವರೆಗೂ ಬೆಲೆ ನಿಗದಿಮಾಡಿಕೊಡುತ್ತಿದ್ದಾರೆ. ಮಂಡ್ಯ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಎಕರೆ ಒಂದಕ್ಕೆ 600 ರೂಪಾಯಿ ನಿಗದಿ ಮಾಡಿದ್ದಾರೆ. ಮೈದಾನ ಪ್ರದೇಶಗಳಲ್ಲಿ ಖುಷ್ಕಿ ಜಮೀನಿಗೆ 15 ರೂಪಾಯಿ ಪ್ರಕಾರ ನಿಗದಿ ಮಾಡಿ ಕೊಟ್ಟಿದ್ದಾರೆ. ಬೇಕಾದರೆ ಈ ಬೆಲೆಯಲ್ಲಿ ಕಡಿಮೆಮಾಡಿ ಕೊಡಿ. ಅದು ಬಿಟ್ಟು ಇವರು ರಾಜಕೀಯದಲ್ಲಿ ನೊಂದವರು, ತ್ಯಾಗ ಮಾಡಿದವರು, ಇವರ ಮನೆಯವರು ಪ್ರಾಣತೆತ್ತಿದ್ದಾರೆ ಎನ್ನುವ ದೃಷ್ಟಿಯಿಂದ ಮಾತ್ರ ಕೊಡಬಾರದು; ಆ ರೀತಿಯಾಗಬಾರದು, ಮತ್ತು ಹೀಗೆ ಮಾಡುವುದರಿಂದ ದೇಶದ ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿದಂಥ ಯೋಧರು ಎಂದೆನ್ನಿಸಿಕೊಂಡಂಥ ಕೀರ್ತಿಗೆ ಅಪಖ್ಯಾತಿ ತರುವ ಕಾರ್ಯವಾಗುತ್ತದೆ. ಹೀಗಾಗಬಾರದು ಎಂದು ಮಾತ್ರ ಹೇಳುತ್ತೇನೆ. ನಾನು ಹೇಳುವ ಈ ಅಭಿಪ್ರಾಯ ಸ್ವಲ್ಪ ಕಹಿಯಾಗಿ ಕಂಡರೂ ಸಹ ಅದನ್ನು ಹೇಳುವುದು ನನ್ನ ಕರ್ತವ್ಯವೆಂದು ತಿಳಿಸಿ ಈ ಮಾತನ್ನು ನಿಲ್ಲಿಸುತ್ತೇನೆ.

*Sri B. T. KEMPARAJ (Bangalore South—Scheduled Castes).—Sir, it is really a wonder to me to see that the fuedal system is still being continued in our State. The amount allotted for the decendants of late Hyder Ali and Tippu Sultan is continuing for the last 200 years and more. When we are advocating the theory of socialistic pattern of society so strongly and so staunchly, why should this kind of pensions continue to the persons who may be existing or may not be existing? Even if they are existing, I appeal to them that they must give up receiving this kind of contribution or pension, because this will not be consistent with the present set up of democracy.

Coming to the political sufferers, several suggestions have been made by my Hon'ble friends here. There may be difference of opinion in this matter. But we must take into consideration the cases of such of those that have suffered in the pursuit of achievement of Swaraj. I agree with Hon'ble Member Sri H. K. Veeranna Gowdh to the extent that when a person who has sacrificed for the achievement of Swaraj is in a good position, no help need be given to him. But, if persons have lost their everything, for those who might have lost their parents, those who might have lost their husbands in the independence struggle—as in the case of an instance cited by Sri R. Muniswamiah—it is but fair that help is given. In cases where there are school-going children, where there are families who have nothing to live upon, it is necessary that some help is given. Therefore, under such circumstances, taking into consideration their helpless plight, help may be given to such of them. For others, whatever usual help to which they are entitled to may be given, but not under the guise of political sufferers. In concluding I once again insist on the Government that this system of giving pensions to the feudal families must be put an end to as early as possible.

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಸ್ವಾಮಿ, ಈಗತಾನೆ ಶ್ರೀ ರಾಮಯ್ಯನವರು ನೌಕರಿಯಿಂದ ರಿಟೈರ್ ಆಗತಕ್ಕ ವಿಚಾರದಲ್ಲಿ ಹೈಕೋರ್ಟ್ ಜಡ್ಜಿಗಳಿಗೆ 55 ವರ್ಷಗಳಿಗೆ ನಿವೃತ್ತರಾಗುವುದಕ್ಕೆ ಬದಲಾಗಿ 60 ವರ್ಷ ವಯಸ್ಸಾದ ಮೇಲೆ ನಿವೃತ್ತರಾಗಲು ಅವಕಾಶ ಕೊಟ್ಟಿದ್ದಾರೆ ಬಾಕಿ ನೌಕರರಿಗೂ ಹಾಗೇಕೆ ಅವಕಾಶ ಕೊಡಬಾರದು ಎಂದು ಕೇಳಿದರು. ದೇಶದಲ್ಲಿ ಅನೇಕರು ವಿದ್ಯಾವಂತರಾಗಿ ನೌಕರಿಯಿಲ್ಲದೇ ಇರುವಾಗ ನಿವೃತ್ತರಾಗುವ ವಯಸ್ಸಿನ ಮಿತಿಯನ್ನು 60ಕ್ಕೆ ಏಕೆ ಏರಿಸಬಾರದು, ಹೈಕೋರ್ಟ್ ಜಡ್ಜಿಗಳಿಗೆ 70ಕ್ಕೆ ಏಕೆ ಏರಿಸಬಾರದು ಎಂದು ಹೇಳಿದರೆ ನೌಕರಿಯಿಲ್ಲದಿರುವವರಿಗೇನು ಮಾಡಬೇಕೆಂಬುದನ್ನು ಅವರು ಯೋಚನೆ ಮಾಡಬೇಕಾಗುತ್ತದೆ. ಭಾರತದಲ್ಲಿ ಎಲ್ಲೂ ಈ ರೀತಿ ಇಲ್ಲದಿರುವಾಗ ಹೊಸದಾಗಿ ಮುನ್ಸೀಫರಿಗೆ 60 ವರ್ಷ ವಯಸ್ಸಾಗುವವರೆಗೂ ಕೆಲಸ ಮಾಡಲು ಅವಕಾಶವನ್ನೇಕೆ ಕೊಡಬಾರದೆಂದು ಹೇಳುತ್ತಿದ್ದಾರೆ. ಹೀಗೆ ಹೇಳಿದ ಮೇಲೆ ಮುಂದೆ ಹೈಕೋರ್ಟ್ ಜಡ್ಜಿಗಳಿಗೆ 75 ವರ್ಷದ

(ಶ್ರೀ. ಎ. ಭೀಮಪ್ಪನಾಯಕ್.)

ವರೆಗೂ ಏಕೆ ಮುಂದುವರಿಸಬಾರದು ಎಂದು ಹೇಳುವ ಸಂದರ್ಭ ಬರಬಹುದು. ಆದ್ದರಿಂದ ಹೀಗೆ ಮಾಡುವುದು ಮುಂದೆ ಬ್ಯಾಡ್ ಪ್ರಿಸಿಡೆಂಟ್ ಕ್ರಿಯೇಟ್ ಮಾಡಿದ ಹಾಗಾಗುತ್ತದೆ. ಆದ್ದರಿಂದ ನಿವೃತ್ತರಾಗುವ ವಯಸ್ಸನ್ನು 55 ರಿಂದ 60ರವರೆಗೆ ಏರಿಸಬೇಕೆಂದು ಹೇಳುವುದು ಸರಿಯಲ್ಲ. ಹೈಕೋರ್ಟ್ ಜಡ್ಜಿಗಳಿಗೆ 60 ವರ್ಷ ವಯಸ್ಸಿನವರೆಗೂ ಅವಕಾಶ ಕೊಟ್ಟಿರುವುದೇಕೆಂದರೆ ಹತ್ತು ಸಾವಿರ ಜನ ಜಡ್ಜಿಗಳಿದ್ದರೆ ಹೈಕೋರ್ಟಿನ ಜಡ್ಜಿಗಳು ಐದು ಜನರಿರುತ್ತಾರೆ. ಯಾವುದೋ ಕಾರಣದಿಂದ ಹೈಕೋರ್ಟ್ ಜಡ್ಜಿಗಳಿಗೆ 60 ವರ್ಷದವರೆಗೂ ಅವಕಾ ಕೊಟ್ಟರೆ ಅದನ್ನು ಎಲ್ಲರಿಗೂ ಅನ್ವಯಿಸಬೇಕು, ಇತರ ನೌಕರರಿಗೇಕೆ ಅನ್ವಯಿಸಬಾರದು, ಮುನ್ಸಿಫರಿಗೇಕೆ ಅನ್ವಯಿಸಬಾರದು ಎಂದು ಹೇಳಿದರೆ ಅದರ ವೈಶಿಷ್ಟ್ಯವೇನು ? ಈ ರೀತಿ ಎಲ್ಲರಿಗೂ ಹೆಚ್ಚಿಸುವುದು ಸರಿಯಲ್ಲ.

ಎರಡನೆಯದಾಗಿ ರೀ-ಅಪಾಯಿಂಟ್ ಮಾಡುವುದು ಸರಿಯಲ್ಲವೆಂದು ಹೇಳಿದರು. ಅನೇಕ ಸಂದರ್ಭಗಳಲ್ಲಿ ಎಲ್ಲರನ್ನೂ ರಿ-ಅಪಾಯಿಂಟ್ ಮಾಡುವುದಿಲ್ಲ. ಯಾವ ಸಂದರ್ಭದಲ್ಲಿ ಅಗತ್ಯವೋ ಆಗ ದಕ್ಷರಾದವರನ್ನು ನೇಮಕ ಮಾಡುತ್ತಾರೆ. ಅಗತ್ಯವಾದಾಗ ಜನತೆ ಮತ್ತು ಸರ್ಕಾರ 55 ವರ್ಷಕ್ಕೆ ಮೀರಿದವರನ್ನು ನೇಮಕ ಮಾಡಬೇಕೆಂದು ಹೇಳಿದಾಗ ಅವಕಾಶ ಕೊಡಬಹುದು. ಕೇವಲ ಜವಾಬ್ದಾರಿಯುತವಾದ ಸ್ಥಾನಕ್ಕೆ ನೇಮಿಸುವಾಗ ಅವಕಾಶವಿರಬೇಕು.

ಆಮೇಲೆ ರಾಜಕೀಯ ಪೆನ್ಷನ್‌ಗಳ ವಿಚಾರದಲ್ಲಿ ಹಿಂದಿನಿಂದ ಪಾವತಿ ಮಾಡುತ್ತಿರುವ ಪೆನ್ಷನ್‌ಗಳನ್ನು ತೆಗೆಯಬೇಕೆಂದು ಹೇಳಿದರು. ಇದನ್ನು ಈಗ ಎಂಟು ವರ್ಷಗಳಿಂದ ಹೇಳುವುದಕ್ಕೆ ಒಬ್ಬರಿಗೂ ಧೈರ್ಯಬರಲಿಲ್ಲ. ಪ್ರಜಾಪ್ರಭುತ್ವ ಜಾರಿಗೆ ಬಂದ ಮೇಲೆ ಕೂಡ ಮಹಾರಾಜರು, ಹಿಸ್ ಎಗ್ಸಾಲ್ಟೆಡ್ ಹೈನೆಸ್ ಇವರೆಲ್ಲಾ ಇದ್ದರು. ಅವರಿಗೆ ಕೊಡುವುದನ್ನು ತೆಗೆದುಹಾಕಿ, ಅದರಿಂದ ದೇಶಕ್ಕೆ ಉಳಿತಾಯವಾಗುತ್ತದೆ ಎಂದು ಯಾರೂ ಧೈರ್ಯಮಾಡಿ ಹೇಳಲಿಲ್ಲ. 1870ನೆಯ ಇಸವಿಗೆ ಹಿಂದೆ ಪಾಳೆಯಗಾರರು ಮುಂತಾದವರಿಗೆ ರಾಜಕೀಯ ಪೆನ್ಷನ್ ಕೊಡುವಂತೆ ಗೊತ್ತುಮಾಡಿದರು. ಅದನ್ನು ಅವರ ಮನೆತನಕ್ಕೆ ಕೊಡುತ್ತಿದ್ದಾರೆ. ಇಂಥವರು ಬದುಕಿರುವವರೆಗೆ ಕೊಡಬೇಕೆಂದು ಮಾಡಿಲ್ಲ, ಅವರ ಮನೆತನದವರಿಗೆ ಕೊಡಬೇಕೆಂದು ಹೇಳಿದ್ದಾರೆ. ಈಗಲೂ ಕೊಡುತ್ತಿದ್ದಾರೆ. ರಾಜರು, ಮಹಾರಾಜರು ಎನ್ನಿಸಿಕೊಂಡಿದ್ದವರು ಈ ದಿವಸ ರಾಜತ್ವ ಕಳೆದುಕೊಂಡು ರಾಜಪ್ರಮುಖರಾದರು. ಇನ್ನುಮೇಲೆ ಗವರ್ನರ್ ಆಗಬಹುದು, ಮುಂದೆ ಅದೂ ತಪ್ಪಬಹುದು. ನಾಳೆ ಶ್ರೀ ಹನುಮಂತಯ್ಯನವರ ಸರ್ಕಾರ ಹೋದಮೇಲೆ 'ಇದನ್ನು ಯಾರು ಮಾಡಿದರೋ ನಾವಲ್ಲ' ಎಂದ ಹೇಳಿದರೆ ಹೇಗೆ ! ಯಾವಾಗ ಏನೇ ಮಾಡಿದರೂ ಎಲ್ಲರಿಗೂ ಒಂದೇ ನೀತಿಯನ್ನನುಸರಿಸಿ ದೇಶೋದ್ಧಾರ ಮಾಡಬೇಕು. ಸೋಷಿಯಲಿಸ್ಟಿಕ್ ಪ್ಯಾಟ್ರರ್ನ್ ಮಾಡಬೇಕೆಂದು ಹೇಳಿದಾಗ ಅದಕ್ಕೆ ಶ್ರೀ ವೀರಣ್ಣಗೌಡರು ಸಮಾಧಾನ ಹೇಳಿದರು. ಜಮೀನು ಕೊಡುವಾಗ ದೇಶಕ್ಕಾಗಿ ತ್ಯಾಗ ಮಾಡಿರುವವರಿಗೆ ಸ್ವಲ್ಪ ಪ್ರಾಶಸ್ತ್ಯಕೊಡಿ, ಬಡವರಿಗೆ ಕೊಡುವಹಾಗೆ ಕೊಡಿ ಎಂದು ಹೇಳಿದ್ದಾರೆಯೇ ವಿನಾ ಬಾಕಿಯವರಿಗೆ ಕೊಡುವುದು ಬೇಡವೆಂದು ಹೇಳಲಿಲ್ಲ ರಾಜಕೀಯದಲ್ಲಿ ನೊಂದು ದೇಶದ ಸ್ವಾತಂತ್ರ್ಯಕ್ಕಾಗಿ ಹೊಡೆದಾಡಿದರೆ 5 ಎಕರೆ ಜಮೀನು ಸಿಕ್ಕುವುದೆಂದು ಯಾರೂ ಆ ಕೆಲಸ ಮಾಡಲಿಲ್ಲ. ಹಾಗೆ ಅವರು ಒಂದು ಉದಾತ್ತ ಧ್ಯೇಯದಿಂದ ದೇಶದ ಉದ್ಧಾರಕ್ಕಾಗಿ ನಮ್ಮೆಲ್ಲರ ಏಳಿಗೆ ಆಗತಕ್ಕಂಥ ಕೆಲಸಗಳನ್ನು ಮಾಡಿದ್ದಾರೆ. ಅವರಿಗೆ ಒಂದು ಅನುಕೂಲಮಾಡಿಕೊಡಿ ಎಂಬುದಾಗಿ ಯಾರೂ ಕೇಳುವುದೇ ಬೇಡ. ಎಂದರೆ ಹಾಗೆ ಅವರು ಕೇಳದಿದ್ದರೂ ಕೂಡ ದೇಶದಲ್ಲಿ ಇತರರು ಜೀವನ ಮಾಡುತ್ತಿರುವಷ್ಟು ಮಟ್ಟಿಗಾದರೂ ಇವರಿಗೆ ಒಂದು ಜೀವನೋಪಾಯದಮಾರ್ಗವನ್ನು ಉಂಟುಮಾಡಿಕೊಳ್ಳುವಷ್ಟು ಸಹಕಾರ ನೀಡಿ ಎಂದು ಕೇಳುತ್ತಿದ್ದೇನೆ. ಈ ಪೈಕಿ ಜನರು ಎಲ್ಲಾದರೂ ಅವರು ವ್ಯವಸಾಯವನ್ನು ಅವಲಂಬಿಸುತ್ತೇವೆಂದು ಹೇಳುವ ಪಕ್ಷಕ್ಕೆ ಅವರ ಜೀವನೋಪಾಯಕ್ಕೆ ಆಗುವಷ್ಟು ಜಮೀನನ್ನು ಇತರರಿಗೆ ಕೊಡುವಂತೆ ಇವರಿಗೂ ಕೊಡಿ. ಆದರೆ ಇವರಿಗೆ ಆದಷ್ಟು ಬೇಗ ಒಂದು ಹೆಚ್ಚಿನ ರಿಯಾಯಿತಿಯಲ್ಲಿ ಕೊಟ್ಟರೆ ಸಾಕು. ಈ ಧ್ಯೇಯವನ್ನು ಮಾರಾಟ ಮಾಡಿಕೊಳ್ಳುವುದು ಬೇಡ ಎಂದು ಅವರು ಹೇಳಿದರು. ದೇಶದಲ್ಲಿರತಕ್ಕ ಎಲ್ಲ ಜನರ ಬಡತನವನ್ನೂ ನಿವಾರಣೆ ಮಾಡತಕ್ಕ ಬಗ್ಗೆ ಸರ್ಕಾರ ಪ್ರಯತ್ನ ಪಡುತ್ತಿರುವಾಗ ಮತ್ತು ದೇಶದಲ್ಲಿ ಒಂದು ಸಮತಾವಾದದ ರೀತಿಯಲ್ಲಿ ಸಮಾಜರಚನೆ ಆಗಬೇಕೆಂದು ಹೇಳುತ್ತಿರುವ ಕಾಲದಲ್ಲಿ ಕೆಲವರು ತೀರ ಬಡವರಾಗಿರುವುದು, ಮತ್ತೆ ಕೆಲವರು ತೀರ ಹಣವಂತರಾಗಿರುವುದು ಸರಿಯಾದ್ದಲ್ಲ ಈ ರೀತಿ ಇರಬಾರದು, ಇದಕ್ಕಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಸಮಿತಿಯನ್ನು ನೇಮಕಮಾಡಿ ತನ್ಮೂಲಕ ಅವರಿಗೆ ಸೂಕ್ತ ಪರಿಹಾರವನ್ನು ಒದಗಿಸಬೇಕೆಂದು ಹೇಳಿದ್ದಾರೆ.

ಇದೇ ರೀತಿ ರಿಟೈರ್ ಆದ ನೌಕರರುಗಳಿಗೂ ಕೂಡ ಅವರಿಗೆ ಸಲ್ಲತಕ್ಕ ಪೆನ್‌ಷನ್ ಮೊಬಲಗು ಬೇಗ ದೊರೆಯುತ್ತಿಲ್ಲ. ಅದು ಅವರಿಗೆ ಬೇಗ ದೊರೆಯುವಂತೆ ಏರ್ಪಾಡು ಮಾಡಬೇಕು. ಒಬ್ಬ ನೌಕರನು 55-60 ವರ್ಷ ಕಾಲತಾನು ಸತ್ಯದಿಂದ ಸರ್ಕಾರಕ್ಕೆ ತನ್ನ ಸೇವೆಯನ್ನು ಸಲ್ಲಿಸಿ ಆತನು ರಿಟೈರ್ ಆದಮೇಲೆ ಆತನ ಸಂಪಾದನೆ ನಿಂತುಹೋಗುವುದರಿಂದ ಆತನಿಗೆ ಸಲ್ಲಬೇಕಾದ ಪೆನ್ಷನ್ ಮೊಬಲಗಾದರೂ ಆತನಿಗೆ ಸಕಾಲಕ್ಕೆ ದೊರೆಯದೆ ಹೋದರೆ ಆತನು ಜೀವನಕ್ಕೇನು ಮಾಡಬೇಕು ? ಹೀಗಾದರೆ ಅವನ ಗತಿಯೇನಾಗಬೇಕು ? ಆತನು ಇನ್ನು ಆರುತಿಂಗಳಿಗೆ ರಿಟೈರ್ ಆಗುತ್ತಾನೆಂದು ಒಂದು ನೋಟೀಸ್ ಹೋದ ಪಕ್ಷದಲ್ಲಿ ತಕ್ಷಣವೇ ಆತನಿಗೆ ಕೊಡಬೇಕಾದ ಪೆನ್ಷನ್, ಇನ್ಷೂರೆನ್ಸ್ ಮೊಬಲಗು ಇತ್ಯಾದಿಗಳನ್ನೆಲ್ಲಾ ಆತನು ರಿಟೈರ್ ಆಗತಕ್ಕ ಆ ಆರುತಿಂಗಳ ಅಧಿಯೊಳಗೇ ಪೂರೈಸುವಂತೆ ಮಾಡಿದರೆ ಆತನಿಗೆ ತುಂಬ ಅನುಕೂಲವಾಗುತ್ತದೆ ಆತನು ತನ್ನ ಜೀವನೋಪಾಯಕ್ಕೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಳ್ಳಲು ಇದರಿಂದ ಒಂದು ಅನುಕೂಲವಾಗುತ್ತದೆ. ಆದರೆ ಈ ದಿವಸ ಪೆನ್ಷನ್ ಪೇಪರುಗಳು ವರ್ಷಾನುಗಟ್ಟಲೆ ಹಾಗೆಯೇ ಮೂಲೆಯಲ್ಲಿ ಕುಳಿತುಬಿಡುತ್ತವೆ. ಇತ್ತಲಾಗಿ 55 ವರ್ಷಗಳ ಕಾಲ ಸರ್ಕಾರದಲ್ಲಿ ಕೆಲಸಮಾಡಿ ಅಲ್ಲಿಂದ ಬಿಟ್ಟು ಈಚೆಗೆ ಬರತಕ್ಕಂಥ ಮನುಷ್ಯನಿಗೆ ಬೇರೆಕೆಲಸಗಳನ್ನು ಮಾಡಲು ಶಕ್ತಿಯಿರುವುದಿಲ್ಲ. ಹಾಗೆ ಆತನಿಗೆ ಕೆಲಸ ಮಾಡತಕ್ಕ ಶಕ್ತಿಯಿರುವುದಿಲ್ಲವೆಂತಲೇ ಆತನನ್ನು ಸರ್ಕಾರದವರು ಕೆಲಸದಿಂದ ತೆಗೆದುಬಿಡುವುದು. ಹೀಗೆ ಆತನಿಗೆ ಯಾವ ಬೇರೆ ಉದ್ಯೋಗ ಮಾಡುವುದಕ್ಕೂ ತನ್ನಲ್ಲಿ ಚೈತನ್ಯವಿಲ್ಲದಿರುವಂಥ ಕಾಲದಲ್ಲಿ ಸರ್ಕಾರ ಆತನಿಗೆ ನ್ಯಾಯವಾಗಿ ದೊರೆಯಬೇಕಾದ ಪೆನ್ಷನ್ ಮೊಬಲಗನ್ನು ಕೊಡದೆ ನಿಧಾನ ಮಾಡಿಬಿಟ್ಟರೆ ಆತನಿಗಿರುವ ಜೀವನದ ಒಂದೇ ಒಂದು ಮಾರ್ಗ ಎಂದರೆ ಮನೆ ಮನೆಗೂ ಭಿಕ್ಷಕ್ಕೆ ಹೋಗುವುದು. ಆದರೆ ಇಷ್ಟಕ್ಕೆಲ್ಲಾ ಅವಕಾಶ

ಮಾಡುವುದು ಸರಿಯಲ್ಲ. ಇದಕ್ಕಾಗಿ ನಾನು ಸಲಹೆ ಮಾಡುವುದೇನೆಂದರೆ ಒಬ್ಬ ಪೆನ್ಷನ್‌ದಾರನಿಗೆ ತಿಂಗಳೊಂದಕ್ಕೆ 50ರೂಪಾಯಿಗಳ ಪೆನ್ಷನ್ ಬರುವಂತಿದ್ದರೆ ಆತನಿಗೆ ತಕ್ಷಣ 45 ರೂಪಾಯಿಗಳನ್ನಾದರೂ ಕೊಡುವುದಕ್ಕೆ ಏರ್ಪಾಡು ಮಾಡಿದರೆ ಬಹಳ ಉತ್ತಮ. ಅನಂತರ ತಾವು ಲೆಕ್ಕಾಚಾರಗಳೆಲ್ಲಾ ಮುಗಿದವೇಲೆ ಬಾಕಿ ಮೊಬಲಗನ್ನು ಪಾವತಿ ಮಾಡಬಹುದು. ಹೀಗೆ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಒಟ್ಟಿನಲ್ಲಿ ಈ ಡಿಮ್ಯಾಂಡಿನಲ್ಲಿ ಅಂಥ ಅವ್ಯವಸ್ಥೆಗಳಾವುವೂ ಇಲ್ಲ. ಆದರೆ ಈ ಪೆನ್ಷನ್ ಬಗ್ಗೆ ನಿಬಂಧನೆಗಳನ್ನು ಕೊಂಚ ಬದಲಾವಣೆ ಮಾಡತಕ್ಕದ್ದು ಅಗತ್ಯ. ಇದನ್ನು ಸರ್ಕಾರದವರು ಮಾಡುತ್ತಾರೆಂದು ನನಗೆ ಭರವಸೆಯಿದೆ. ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ನನಗೆ ಎರಡು ಮಾತುಗಳನ್ನಾಡಲು ತಾವು ಈ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ನಾನು ತಮಗೆ ಮೊದಲು ನನ್ನ ವಂದನೆಗಳನ್ನರ್ಪಿಸಿ ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಈಗತಾನೆ ಕೆಲವು ಮಾನ್ಯಸದಸ್ಯರು ಈ ಸಭೆಯ ಮುಂದೆ ಪೊಲಿಟಿಕಲ್ ಸಫರರ್ಸ್‌ಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ನಾನೂ ಸಹ ಈಗ ನಮ್ಮ ಊರಿನಲ್ಲಿಯೂ ಇಂಥಾ ಕೆಲವು ಜನ ರಾಜಕೀಯದಲ್ಲಿ ನೊಂದವರಿರುತ್ತಾರೆ, ಅವರ ಬಗ್ಗೆ ಎರಡು ಮಾತುಗಳನ್ನಾಡಬೇಕಾಗಿದೆ. ಅವರು ಬಹಳ ನಿರ್ಗತಿಕರಾಗಿದ್ದಾರೆ. ಅವರಿಗೆ ಜೀವನಾಧಾರಕ್ಕೆ ಯಾವ ಮಾರ್ಗವೂ ಇಲ್ಲ. ಅವರಿಗೆ ಈ ದಿವಸ ವ್ಯವಸಾಯಕ್ಕೆ ಸ್ವಲ್ಪ ಭೂಮಿಯನ್ನಾದರೂ ಕೊಡಿ ಎಂದು ನಾನೇ ಅವರ ಸ್ಥಿತಿಗತಿಯನ್ನು ನೋಡಲಾರದೆ ಸರ್ಕಾರಕ್ಕೆ ತಿಳಿಸಿದೆನು. ಅವರಿಗೆ ಸರ್ಕಾರ ದಾನವಾಗಿ ಕೊಡದಿದ್ದರೂ ಚಿಂತೆಯಿಲ್ಲ ಅವರು ಇತರರ ಹಾಗೆ ಅಪ್‌ಸೆಟ್ ಬೆಲೆಯನ್ನು ಕೊಡಲಿಕ್ಕೂ ಸಹ ಒಪ್ಪಿದ್ದಾರೆ. ಅವರಿಗೆ 5-10 ಎಕರೆ ಜಮೀನನ್ನು ಕೊಡಬೇಕೆಂದು ಸರ್ಕಾರಕ್ಕೆ ಅರಿಕೆ ಮಾಡಿಕೊಂಡೆನು. ಆಗ ಸರ್ಕಾರದವರು ಅಂಥವರೆಲ್ಲರ ಬಗ್ಗೆ ಒಂದು ಲಿಸ್ಟನ್ನು ಮಾಡುತ್ತೇವೆ, ಎಲ್ಲರಿಗೂ ಒಂದೇ ಸಲ ಜಮೀನು ಕೊಡುತ್ತೇವೆಂದು ಹೇಳಿದರು. ಆದರೆ ಈವರೆಗೂ ಕೊಟ್ಟಿಲ್ಲ. ಆ ಜನರು ಬಹಳ ಉತ್ತಮ ದರ್ಜೆಯ ಸೇವೆಯನ್ನು ದೇಶಕ್ಕೆ ಸಲ್ಲಿಸಿದ್ದಾರೆ. ಆದರೆ ಅವರು ದೇಶಕ್ಕೆ ಸಲ್ಲಿಸಿರತಕ್ಕಂಥ ಮಹತ್ತರ ಸೇವೆಯನ್ನು ಕೇವಲ 10 ಎಕರೆ ಜಮೀನಿಗಾಗಿ ಮಾರಾಟಮಾಡಿಕೊಳ್ಳಲು ಶ್ರೀ ವೀರಣ್ಣಗೌಡರು ಹೇಳಿದಹಾಗೆ ಈ ಹೊತ್ತು ತಯಾರಿರುವುದಿಲ್ಲ. ಆದರೆ ಅವರು ಈ ಹೊತ್ತು ಅಂಥ ನಿರ್ಗತಿರಾಗಿದ್ದಾರೆ. ಆದರೆ ಅವರೇನೂ ಜಮೀನು ಕೊಡಿಸಿ ಎಂಬುದಾಗಿ ನನಗೆ ಕೇಳಲಿಲ್ಲ. ನಾನೇ ಅವರ ಜಂಜಾಟ ನೋಡದೆ ಸರ್ಕಾರದವರಿಗೆ ತಿಳಿಸಿದೆನು. ಆದರೆ ಸರ್ಕಾರದವರಿನ್ನೂ ಲಿಸ್ಟ್ ಮಾಡುವುದರಲ್ಲೇ ಇದ್ದಾರೆ. ನಮ್ಮ ದಾವಣಗೆರೆ ನಗರದಲ್ಲೇ ಈ ಹಿಂದೆ ಸ್ವಾತಂತ್ರ್ಯ ಸಂಗ್ರಾಮ ನಡೆಯುತ್ತಿದ್ದಾಗ ಪೋಲೀಸರು ಗುಂಡು ಹಾಕಿದ ಪರಿಣಾಮವಾಗಿ ರೊಟ್ಟಿ ನೀಲಮ್ಮನ ಗಂಡ ಮತ್ತು ಹಳೂರು ನಾಗಪ್ಪ ಎಂಬ ಎರಡು ಜನ ಅಲ್ಲೇ ರಸ್ತೆಯಲ್ಲೇ ಸತ್ತುಹೋದರು. ಈ ದಿವಸ ಆ ಹೆಣ್ಣು ಮಗಳಿಗೆ ಬೇರೆಯಾರೂ ರಕ್ಷಕರಿಲ್ಲ. ಒಬ್ಬ ಮಗ ಮಾತ್ರ ಇದ್ದಾನೆ. ಆತನಿಗೆ ಓದಿಸುವುದಕ್ಕೂ ಕೂಡ ಶಕ್ತಿಯಿಲ್ಲದೆ ಆಕೆ ತನ್ನ ಕೂಲಿಪಾಡಿಗಾಗಿ ಒಂದು ಹಳ್ಳಿಯಲ್ಲಿ ಸೇರಿಕೊಂಡಿದ್ದಾಳೆ. ಇದೇ ರೀತಿ ಮಾಗಳೂರು ನೀಲಜ್ಜಿ ಹನುಮಪ್ಪನೆಂಬಾತನೂ ಕೂಡ ಗತಿಸಿಹೋದ. ಈ ದಿವಸ ಈ ಹೆಂಗಸು ಮುದುಕಿ ಆಗಿದ್ದಾಳೆ. ಈಕೆಗೆ ಜೀವನಕ್ಕೆ ಏನೂ ಗತಿಯಿಲ್ಲ. ಆದರೆ ಈ ಜನರ ಗೋಳನ್ನು ನೋಡಲಾರದೆ ನಾನೇ ಅವರ ವಿಚಾರವನ್ನು ಸರ್ಕಾರದವರ ಗಮನಕ್ಕೆ ತಂದೆನು. ಆದಕಾರಣ ತಾವೀದಿವಸ ಈ ಜನರಿಗೆ ಎಲ್ಲಿ ಜಮೀನುಕೊಟ್ಟರೆ ಅಲ್ಲಿಗೆ ಹೋಗಲು ಅವರು ತಯಾರಿರುತ್ತಾರೆ. ನಮಗೆ ಇಂಥಲ್ಲಿಯೇ ಜಮೀನು ಕೊಡಿ ಎಂದೇನೂ ಅವರು ಕೇಳುತ್ತಿಲ್ಲ. ಹಾಗೆ ತಾವು ಒಂದು ವೇಳೆ ಆ ಜಮೀನನ್ನು ಅಪ್‌ಸೆಟ್ ಬೆಲೆಗೆ ಕೊಟ್ಟರೂ ಸಹ ಅವರು ಅದನ್ನು ಕೊಂಡುಕೊಳ್ಳುವುದಕ್ಕೂ ಕೂಡ ಸಿದ್ಧವಾಗಿದ್ದಾರೆ. ಅವರಿಗೆ ಸರ್ಕಾರದವರು ಅತಿ ಜರೂರಾಗಿ ಜಮೀನನ್ನು ಒದಗಿಸಿಕೊಡಬೇಕೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

*ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸ್ವಾಮಿ, ಈಗಾಗಲೇ ಮಾತನಾಡಿದ ಕೆಲವು ಮಾನ್ಯ ಸದಸ್ಯರು ಒಂದು ಕಡೆ ದೇಶದಲ್ಲಿ ಈ ಯುವಕರ ತಂಡ ಹೆಚ್ಚುತ್ತಿದೆ, ಇವರಿಗೆ ಉದ್ಯೋಗ ದೊರಕಿಸಬೇಕಾದ್ದು ನಮ್ಮಗಳ ಕರ್ತವ್ಯವೆಂದು ಹೇಳುತ್ತಾರೆ ಈ ತರುಣ ಶಾಸನಸಭೆಯ ಸದಸ್ಯರುಗಳಿಗೆಲ್ಲಾ ಮುಖ್ಯ ಮಂತ್ರಿ ಪದವಿ, ಮಂತ್ರಿ ಪದವಿ ಮತ್ತು ಡೆಪ್ಯುಟಿ ಮಂತ್ರಿಗಳ ಪದವಿಯನ್ನು ಕೊಡಿಸುತ್ತೇವೆಂದು ಹೇಳುತ್ತಾರೆ ಇನ್ನೊಂದು ಕಡೆ 55 ವರ್ಷದ 60 ವರ್ಷ ವಯಸ್ಸಿನ ಹಳಬರೆಲ್ಲಾ ಈ ಸಭೆಗೆ ಸದಸ್ಯರಾಗಿ ಇನ್ನೂ ಬರುತ್ತಲೇ ಇದ್ದಾರೆ. ಆದರೆ ಹೀಗೆ ಮಾಡುವುದು ಸರಿಯಲ್ಲ. ಈ ಸರ್ಕಾರಿ ನೌಕರಿಯಲ್ಲಿರತಕ್ಕವರು ಯಾವ ರೀತಿ 55-60 ವರ್ಷಗಳಾದನಂತರ ಕೆಲಸದಿಂದ ರಿಟೈರ್ ಆಗಬೇಕೆಂಬ ಒಂದು ನಿಯಮವಿರುವ ಹಾಗೆಯೆ ಈ ಲೆಜಿಸ್ಲೇಚರ್ ಸದಸ್ಯರಿಗೂ ಕೂಡ 55 ವರ್ಷಕ್ಕೆ ಮೀರಿದವರು ಸದಸ್ಯರಾಗಬಾರದೆಂದೂ ಅವರು ಈ ರಾಜಕೀಯದಿಂದ ರಿಟೈರ್ ಆಗುವಂತೆ ಈ ಎಲ್ಲಾ ಎಂ.ಎಲ್.ಎ.ಗಳಿಗೂ ಸರ್ಕಾರದವರು ಒಂದು ಕಟ್ಟಾಜ್ಞೆ ಹೊರಡಿಸಬೇಕೆಂದೂ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಇನ್ನು ದೇಶದಲ್ಲಿ ಯಾವ ಕೆಲಸಕಾರ್ಯಗಳೂ ದೊರಕದೆ ನಿರುದ್ಯೋಗಿಗಳಾಗಿರತಕ್ಕಂಥ ಯುವಕರ ಸಂಖ್ಯೆ ಬೇರೆ ದಿನ ದಿನಕ್ಕೂ ಬೆಳೆಯುತ್ತಲೇ ಇದೆ. ಇದು ಇನ್ನೂ ಕಠಿಣ ಪರಿಸ್ಥಿತಿಗೆ ಬರುವಂತೆ ಕಾಣುತ್ತಿದೆ. ಈಗಾಗಲೇ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಬೇರೆ ಅಧಿಕವಾಗುತ್ತಿದೆ. ಹೀಗಿರುವಾಗ ಸರ್ಕಾರದವರು ಈ 55 ವರ್ಷಗಳಿಗೆ ರಿಟೈರ್ ಆಗತಕ್ಕವರನ್ನು 60 ವರ್ಷಗಳಿಗೆ ಹೆಚ್ಚಿಸಬೇಕೆಂದು ಹೇಳಿರತಕ್ಕದ್ದನ್ನು ನೋಡಿದರೆ ಇದರಿಂದ ಈ ನಿರುದ್ಯೋಗಿಗಳ ಸಂಖ್ಯೆ ಮತ್ತೂ ಹೆಚ್ಚಾಗುವುದಕ್ಕೆ ಅವಕಾಶವಾಗುತ್ತದೆ. ಆದಕಾರಣ ಈಗಿರುವಂತೆ ಈ ನೌಕರರನ್ನು 55 ವರ್ಷಗಳಿಗೇ ರಿಟೈರ್ ಆಗುವಂತೆ ಮಾಡಬೇಕೆಂದು ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಇನ್ನು ನಾನು ಆ ಎಲೆಕ್ಟ್ರಿಕಲ್ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಲೈನ್‌ಮನ್‌ಗಳ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ—ಈ ಲೈನ್‌ಮನ್‌ಗಳ ಕೆಲಸ ಬಹಳ ಕಷ್ಟತರವಾದದ್ದು. ಇವರು ತಮ್ಮ ಜೀವದ ಮೇಲಿನ ಆಸೆಯನ್ನೂ ಕೂಡ ತೊರೆದು ಕೂಲಿಗಾಗಿ ಜೀವನಕ್ಕೆ ಮಾರ್ಗವಿಲ್ಲದೆ ಇಲ್ಲಿ ಕೆಲಸಮಾಡುತ್ತಿದ್ದಾರೆ. ಮಾತೆತ್ತಿದರೆ ಇಲ್ಲಿ ಜೀವ-ಸಾವುಗಳ ಪ್ರಶ್ನೆ ವಿನಾ ಮತ್ತೇನೂ ಬೇರೆಯಿಲ್ಲ. ಅನೇಕ ಕಡೆ ಎಷ್ಟೋ ಜನರು ಹೀಗೆ ಈ ಅಪಾಯಕರವಾದ ಕೆಲಸದಲ್ಲಿ ತಮ್ಮ ಪ್ರಾಣಗಳನ್ನು ಕಳೆದುಕೊಂಡಿರುವುದನ್ನು ನಾವೆಲ್ಲರೂ

(ಶ್ರೀ ವಿ. ಆರ್. ನಾಯ್ಡು.)

ನೋಡಿರುತ್ತೇವೆ. ಒಂದು ಷಾಕ್ ಹೊಡೆದರೆ ಸಾಕು ಒಂದು ಪ್ರಾಣ ಹಾರಿಹೋಯಿತೆಂದೇ ಲೆಕ್ಕ. ಹೀಗೆ ಈ ಇಲಾಖೆಯಲ್ಲಿ ಪ್ರಾಣತೆತ್ತ ಜನಗಳಿಗೆ ಸರ್ಕಾರ ಯಾವ ಪರಿಹಾರವನ್ನೂ ಕೊಟ್ಟಿಲ್ಲ. ಈ ಬಗ್ಗೆ ಸರ್ಕಾರ ಕೂಡಲೆ ಪರಿಶೀಲನೆ ಮಾಡಲು ಒಬ್ಬ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ. ಆದರೆ ಹಾಗೆ ಸತ್ತು ಹೋಗಿರತಕ್ಕವರ ಸಂಖ್ಯೆ ಜಾಸ್ತಿಯಾಗಿದ್ದರೂ ಅವರಿಗೆ ಯಾರನ್ನು ಕಾಣಬೇಕು, ಎಲ್ಲಿ ಹೋಗಬೇಕು, ಏನು ಕಾರ್ಯಕ್ರಮಗಳನ್ನು ನಡೆಸಬೇಕು ಎಂಬುದೊಂದೂ ಗೊತ್ತಿಲ್ಲದೆ ಈ ಹೊತ್ತು ಅನೇಕರು ಅವರವರ ಮನೆಗಳಲ್ಲೇ ತೆಪ್ಪಗಿದ್ದುಬಿಟ್ಟಿದ್ದಾರೆ. ಅವರಿಗೆ ತುಂಬ ತೊಂದರೆಯಾಗಿದೆ. ಈ ಕಷ್ಟವನ್ನು ಸರ್ಕಾರದವರು ಕೂಡಲೆ ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

2 P.M.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಸ್ವಾಮಿ, ಅನೇಕ ಮಾನ್ಯ ಸದಸ್ಯರುಗಳು ಈ ಪೊಲಿಟಿಕಲ್ ಪೆನ್ಷನ್ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಸ ಮ ತಾ ವಾ ದ ಜಾರಿಯಲ್ಲಿ ಬರುತ್ತಾ ಇರತಕ್ಕ ಈ ಕಾಲದಲ್ಲಿ ಈ ರೀತಿಯಾದ ಪೆನ್ಷನ್ ಕೊಡತಕ್ಕದ್ದು ಅಸಂಗತವಾಗಿದೆ ಎಂದು ಅವರು ವಾದಿಸುತ್ತಾ ಇದ್ದಾರೆ. ಆ ವಾದದಲ್ಲಿ ಬಹಳವಾಗಿ ತಿರುಳಿದೆ. ಈ ಪೆನ್ಷನ್‌ಗಳಲ್ಲಿ ಎರಡು ವಿಧ ಇದೆ. Pension and Allowances to the Ruling Family ಎಂದು ಒಂದು ಇದೆ. ಅದಕ್ಕೆ ಈ ಎರಡು ಲಕ್ಷ 31 ಸಾವಿರ ರೂಪಾಯಿ ಇರುವುದು. ಈ ಪಟ್ಟಿಯನ್ನು ಮಾನ್ಯ ಸದಸ್ಯರು ಪರಿಶೀಲನೆ ಮಾಡಿದರೆ ಇಲ್ಲಿರತಕ್ಕ ಹದಿ-ಆರು ಮಂದಿ ಎಲ್ಲರೂ ಕೂಡ ಶ್ರೀಮನ್ ಮಹಾರಾಜರವರ ಸಂಬಂಧಿಗಳು, ಅವರ ಸಹೋದರಿಯರು ಮತ್ತು ಇತರ ಬಂಧುಗಳು. ಈ ರೀತಿಯಲ್ಲಿ ಪೆನ್ಷನ್ ಒಬ್ಬೊಬ್ಬರಿಗೆ 40-40 ಸಾವಿರ ರೂಪಾಯಿಗಳು ಕೆಲವರಿಗೆ, ಮಿಕ್ಕ ಮೂರು ಮಂದಿಗಳಿಗೆ—ಅವರು ದೇಶರಾಜ ಅರಸ್‌ಅವರ ಮಕ್ಕಳು—ಸ್ವಲ್ಪ ಕಡಿಮೆ ಕೊಡುತ್ತಾ ಇದ್ದೇವೆ. ಹಿಂದೆ ಒಂದು ಸಾರಿ ನಾನು ಈ ಸಭೆಯಲ್ಲಿ ಹೇಳಿದಹಾಗೆ, ಸಂಬಂಧಪಟ್ಟವರಲ್ಲಿ ಪತ್ರ ವ್ಯವಹಾರ ನಡೆಸಿದೆ. ಅವರು ಈ ಪೆನ್ಷನ್‌ಗಳನ್ನು ಸ್ವತಃವಾಗಿ ಬಿಟ್ಟುಬಿಡುವುದಕ್ಕೆ ಒಪ್ಪಲಿಲ್ಲ. ಅನಂತರ ಈ ವಿಷಯದಲ್ಲಿ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಯೋಚನೆ ಮಾಡಿದೆ. ಆದರೆ ಈ ಮೈಸೂರು ಸಂಸ್ಥಾನ ಇಂಡಿಯನ್ ಯೂನಿಯನ್ನಿಗೆ ಸೇರಿದಾಗ ಒಂದು ಒಪ್ಪಂದ ಮಾಡಿಕೊಂಡಿದ್ದಾರೆ. ಅದು 'Agreement made between His Excellency the Governor-General of India and His Highness the Maharaja of Mysore ಎಂದು ಇದೆ. ಇದಕ್ಕೆ ಸಂಬಂಧಪಟ್ಟ ಹಾಗೆ 8ನೆಯ ಜನವರಿ 1951ರಲ್ಲಿ ಆಗ ಇಂಡಿಯಾ ಸರ್ಕಾರದ ಪ್ರತಿನಿಧಿಯಾಗಿದ್ದ ವಿ. ಪಿ. ಮೆನನ್‌ಅವರು ಕೆಲವು ಷರತ್ತುಗಳನ್ನು ಹಾಕಿ ಒಂದು ಒಪ್ಪಂದ ಮಾಡಿದಾಗ ಈ ಪೆನ್ಷನ್‌ಗಳನ್ನು ಕೊಡುತ್ತೇವೆ ಎಂದು ಹೇಳಿ ಆ ಒಪ್ಪಂದದಲ್ಲಿ ಸೇರಿಸಿದ್ದಾರೆ. ಅದರ 10ನೇ ಕ್ಲಾಜು ಹೀಗೆ ಇದೆ:—

"Pensions and allowances to the Members of the Ruling Family will continue to be paid from the State's revenues during the life time of the present members."

ತಮಗೆ ಗೊತ್ತಿರುವ ಹಾಗೆ ಶ್ರೀಮನ್ ಮಹಾರಾಜರವರ ಒಬ್ಬ ತಂಗಿ ಭರತಪುರದ ಮಹಾರಾಣಿಯವರು ತೀರಿ ಹೋದಮೇಲೆ 40 ಸಾವಿರ ರೂಪಾಯಿಗಳನ್ನು ಕೊಡುತ್ತಾ ಇಲ್ಲ. ಅಲ್ಲಿಗೇ ನಿಂತುಹೋಯಿತು. ಆ ನೀತಿಯನ್ನು ಅನುಸರಿಸುತ್ತಾ ಇದ್ದೇವೆ. ಈ ದಿವಸ ಮೈಸೂರು ಸರ್ಕಾರದವರು ಈ ಪೆನ್ಷನ್‌ಗಳನ್ನು ನಿಲ್ಲಿಸಿಬಿಡುವುದಕ್ಕೆ ಸರ್ವ ಸ್ವತಂತ್ರರಾಗಿಲ್ಲ. ಇಂಡಿಯಾ ಸರ್ಕಾರದವರು ಮಾಡಿಕೊಂಡಿರತಕ್ಕ ಒಂದು ಒಪ್ಪಂದ ಏನಿದೆಯೋ. ಆ ಒಪ್ಪಂದದ ಪ್ರಕಾರ, ಅದನ್ನು ಏನಾದರೂ ರದ್ದುಮಾಡಬೇಕಾದರೆ ಇಂಡಿಯಾ ಸರ್ಕಾರದವರು ಒಪ್ಪಬೇಕು. ಇದು ಇರತಕ್ಕಂಥ ಕಷ್ಟ. ಇದು ನ್ಯಾಯವೇ, ಅನ್ಯಾಯವೇ ಎನ್ನತಕ್ಕ ವಿಷಯದಲ್ಲಿ ನನ್ನ ಅಭಿಪ್ರಾಯವೂ ಕೂಡ ಮಾನ್ಯ ಸದಸ್ಯರ ಅಭಿಪ್ರಾಯವೇ ಆಗಿದೆ. ಒಂದು ವೇಳೆ ಪೆನ್ಷನ್ ಕೊಡೋಣ. ಕೊಟ್ಟರೂ ಇನ್ನು ಬೇರೆ ಯಾವ ತರಹ ಆದಾಯವೂ ಇಲ್ಲದೇ ಒಂದು ವೇಳೆ ಕೊಡಬೇಕಾಗಿದ್ದರೆ ಸ್ವಲ್ಪ ಹೆಚ್ಚು ಕಡಮೆ ಕೊಟ್ಟರೂ ಕೊಡಬಹುದು. ಆದರೆ ಪ್ರತಿಯೊಬ್ಬರಿಗೂ ಕೂಡ ಅವರ ಸ್ವಂತ ಆಸ್ತಿ ಬೇಕಾದಷ್ಟಿದೆ. ಅದರ ಜೊತೆಗೆ ವರ್ಷಕ್ಕೆ 40 ಸಾವಿರ ರೂಪಾಯಿಗಳನ್ನು ಕೊಡುತ್ತಾ ಇದ್ದೇವೆ. ಇದೆಲ್ಲಾ ಚರ್ಚೆಗೆ ಬರುತ್ತದೆ, ಸಮಾಲೋಚನೆಗೆ ಬರುತ್ತದೆ. ಈ ಅಗ್ರಿಮೆಂಟಿನಲ್ಲಿ ಶ್ರೀಮನ್ ಮಹಾರಾಜರವರೇ ರಾಜಪ್ರಮುಖರಾಗಿರಬೇಕು ಎಂದು ಹೇಳಿ ಬರೆದಿದೆ. ಅದನ್ನು ಓದಿ ಹೇಳುತ್ತೇನೆ.

Sri A. BHEEMAPPA NAIK.—Is that income-tax free?

ಶ್ರೀ ಕೆ. ಹನುಮಂತಯ್ಯ.—ಮಹಾರಾಜರಿಗೆ ಕೊಡತಕ್ಕ ಪೆನ್ಷನ್ ಟ್ಯಾಕ್ಸ್ ಫ್ರೀ ಎಂದಿದೆ.

ಶ್ರೀ ಎ. ಭೀಮಪ್ಪನಾಯಕ್.—ಬಾಕಿಯದಕ್ಕೆ?

ಶ್ರೀ ಕೆ. ಹನುಮಂತಯ್ಯ.—ಅವರಿಗೆ ಕೊಡುವುದಕ್ಕೆ ಟ್ಯಾಕ್ಸ್ ಫ್ರೀ ಎಂದು ಹೇಳಿಲ್ಲ.

Sri A. BHEEMAPPA NAIK.—Then, very little he will be getting.

ಶ್ರೀ ಕೆ. ಹನುಮಂತಯ್ಯ.—'Government of India guarantee succession, according to law and custom, to be granted in the State and to the personal rights and privileges and dignity and title to the Maharaja' ಎಂದು ಹೇಳಿ ಅಗ್ರಿಮೆಂಟಿನಲ್ಲಿದೆ. ಆದರೆ ಎಸ್ಸಾರ್ಸಿ ಶಿಫಾರಸಿನ ಪ್ರಕಾರ ಮಹಾರಾಜರ ಪದವಿಯನ್ನೇ ರದ್ದು ಮಾಡಲಾಗುತ್ತದೆ. (*A Voice: Automatically it goes.*) ಮುಂದೆ ಇಂಡಿಯಾ ಸರ್ಕಾರದವರು ಈ ವಿಚಾರಗಳನ್ನೆಲ್ಲಾ ಸಮಾಲೋಚನೆ ಮಾಡಿ ಏನು ತೀರ್ಮಾನಕ್ಕೆ ಬರುತ್ತಾರೆಯೋ ಅದನ್ನು ಕಾದು ನೋಡೋಣ. ಒಟ್ಟಿನಲ್ಲಿ ತಮ್ಮ ಜೀವನಕ್ಕೆ ಎಷ್ಟು ಬೇಕೋ ಅದಕ್ಕಿಂತಲೂ ಯಥೇಚ್ಛವಾದ ಹಣವನ್ನು ಈ ಮೂಲಕ ಈ ರೀತಿ ಪಡೆಯತಕ್ಕದ್ದು ಈ ಹೊಸ ಸಮಾಜದ ಸಂಪ್ರದಾಯಕ್ಕೆ ಅಷ್ಟಾಗಿ ಹೊಂದಿಕೊಳ್ಳುವುದಿಲ್ಲ ಎಂಬ ಅಭಿಪ್ರಾಯ ಹೊರಪಟ್ಟಿದೆ.

ಎರಡನೆಯ ತರಹದ ಪೆನ್ಷನ್ ಏನಿದೆ ಅದು ಇಷ್ಟು ಹೆಚ್ಚಿಗೆ ಮೊಬಲಗು ಕೊಡುವುದಿಲ್ಲ. ಹತ್ತು ರೂಪಾಯಿ ಆರು ರೂಪಾಯಿ, ಎರಡು ರೂಪಾಯಿ ಈ ರೀತಿ

ಇಳಿಯುತ್ತಿದೆ. Political pensions and allowances.—

"Allowances to the families of Sirdar and Officers of the late Hyder Ali Khan and Tippu Sultan's Court, Allowances for tombs, Gumbuz and Mausoleum of Hyder Ali Khan and Tippu Sultan and Masjids at Seringapatna, Sarjapur Stipendiaries and Mufarkhat Pensions."

ಈ ರೀತಿ ಅನೇಕ ಪೆನ್ಷನ್‌ಗಳು ಇವೆ. ಇವುಗಳನ್ನು ಕೊಡುವುದರಲ್ಲಿ ಕೆಲವನ್ನು ಕೊಡಬೇಕಾಗುತ್ತದೆ. ಈಗ ಗುಂಬಸ್, ಮಸೀದಿ ಇಂಥ ಸಂಸ್ಥೆಗಳು ಏನಿವೆಯೋ ಅವುಗಳು ಸಾರೋದ್ಧಾರವಾಗಿ ನಡೆದುಕೊಂಡು ಬರುವುದಕ್ಕೆ ಸಮಾಜವಾದ ಇರಲಿ, ಬೇರೆ ಯಾವ ವಾದ ಇರಲಿ, ಹಣ ಕೊಟ್ಟು ಅವು ಸರಿಯಾದ ಸ್ಥಿತಿಯಲ್ಲಿರುವ ಹಾಗೆ ನೋಡಿಕೊಳ್ಳಬೇಕು. ಆದರೆ ಸ್ವಂತವಾಗಿ ಕೊಡತಕ್ಕ ಪೆನ್ಷನ್‌ಗಳ ವಿಚಾರದಲ್ಲಿ ಸರ್ಕಾರದವರು ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸುತ್ತಾ ಇದ್ದಾರೆ. ಆಯಾ ಪೆನ್ಷನ್‌ದಾರರು ದೈವಾಧೀನರಾದನಂತರ ಪುನಃ ಅದನ್ನು ಯಾರಿಗೂ ಕೊಡುತ್ತಿಲ್ಲ. ಆ ನೀತಿಯನ್ನು ಈಗ ಮೂರು ನಾಲ್ಕು ವರ್ಷಗಳಿಂದಲೂ ಅನುಸರಿಸಿಕೊಂಡು ಬರುತ್ತಾ ಇದ್ದೇನೆ. ಇಂಡಿಯಾ ಸರ್ಕಾರದವರೂ ಕೂಡ ಇಂಡಿಯಾ ದೇಶದಲ್ಲಿ ಈ ತರಹ ನೂರಾರು ವರ್ಷಗಳ ಹಿಂದಿನಿಂದ ಕೊಡತಕ್ಕ ಪೆನ್ಷನ್‌ಗಳನ್ನು ಆದಷ್ಟು ಜಾಗ್ರತೆ ಕೊನೆಗಾಣಿಸಬೇಕೆಂದು ನಮಗೆ ತಿಳಿಸಿದ್ದಾರೆ. ನಾವೂ ಅದೇ ನೀತಿಯನ್ನು ಅನುಸರಿಸುತ್ತಾ ಇದ್ದೇವೆ.

ಶ್ರೀ ಬಿ. ಟಿ. ಕೆಂಪರಾಜ್.—ನಮ್ಮ ಶ್ರೀಮಾನ್ ಭೀಮಪ್ಪನಾಯಕರಿಗೆ ಏನಾದರೂ ಪೆನ್ಷನ್ ಬರುತ್ತಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಶ್ರೀಮಾನ್ ಕೆಂಪರಾಜ್ ಅವರಿಗೆ ಎಷ್ಟು ಬರುತ್ತಿದೆಯೋ ಅವರಿಗೂ ಅಷ್ಟೇ ಬರುತ್ತಿದೆ.

(ಸಭೆಯಲ್ಲಿ ನಗು !)

ಈಗ ಪಾಳೆಯಗಾರರು ಮತ್ತು ಟಿಪ್ಪೂಸುಲ್ತಾನ್, ಹೈದರಾಲಿಯವರ ಬಂಧುಗಳು ನೂರಾರು ಮಂದಿ ಇದ್ದಾರೆ. ಅವರಿಗೆ ಕೊಡುತ್ತಾಯಿರುವುದು ಬಹಳ ಸಣ್ಣ ಸಣ್ಣ ಮೊಬಲಗು. 1951-52ರಲ್ಲಿ 68,462 ರೂಪಾಯಿಗಳನ್ನು ಕೊಡುತ್ತಾ ಇದ್ದೆವು. ಈ ವರ್ಷ ಅದು 1955-56ರಲ್ಲಿ 46 ಸಾವಿರ ರೂಪಾಯಿಗಳಿಗೆ ಇಳಿದಿದೆ. ಕ್ರಮ ಕ್ರಮೇಣ and when the persons die, it goes on decreasing. ಆದ್ದರಿಂದ 46 ಸಾವಿರ ರೂಪಾಯಿಗಳಿಗೆ ಇಳಿದಿದೆ. 1956-57ರಲ್ಲೂ ಪುನಃ ಅದೇ 46 ಸಾವಿರ ರೂಪಾಯಿ ಇದೆ.

ಒಂದು ವಿಷಯವನ್ನು ಮಾನ್ಯ ಸದಸ್ಯರನೇಕರು ಚರ್ಚೆ ಮಾಡಿದ್ದಾರೆ. Retire ಆದಮೇಲೆ extension of service ಇರಕೂಡದು, re-employ ಮಾಡಕೂಡದು ಎಂಬುದು ಒಂದು ವಾದ; ತಮಗೆ ಬೇಕು ಬೇಕಾದವರಿಗೆ ಕೆಲಸ ಕೊಡುತ್ತಾರೆಂದು ಮತ್ತೊಂದು ವಾದ ಬಂದಿದೆ. ಈ ಎರಡು ವಾದಗಳಿಗೂ ನಾನು ಉತ್ತರಕೊಡುತ್ತೇನೆ. ಇದನ್ನು ಹೇಳುತ್ತಾ ಶ್ರೀಮಾನ್ ರಾಮಯ್ಯನವರು ಈ ವಿಷಯದಲ್ಲಿ ಒಂದು ನಿರ್ದಿಷ್ಟವಾದ ನೀತಿಯಿಲ್ಲವೆಂದು ಹೇಳಿದರು. ಅವರಿಗಾಗಿ ನಾನು ರೂಲ್ಸಿನಲ್ಲಿರುವುದನ್ನು ಓದುತ್ತೇನೆ. ರೂಲ್ಸ್ ಪ್ರಕಾರವೇ ನಾವೀಗ ನಡೆಯುತ್ತಿರುವುದು.

Article 294 of the M.S.R. reads as follows.—

"294 (a) A Government servant in Superior or Inferior service, who has attained the age of fifty-five years, may be required to retire, unless Government considers him efficient, and permits him to remain in the service. But as the premature retirement of an efficient Government servant imposes a needless charge on the State, this rule should be worked with discretion. And in cases in which the rule is enforced, a statement of the reasons for enforcing it shall be placed on record.

Note 1.—It is trusted that the Heads of Departments will always be disposed to extend to this rule a very liberal interpretation, and that the State may, in no case, be deprived of the valuable experience of really efficient Government servants by the untimely exercise of the powers of compulsory retirement on pension.

Note 2.—University teachers who attain the age of superannuation during and after Dasara Holidays will remain in service till the end of the academic year, without the addition of summer vacation subject to the condition that the work of the University teacher whose term will be extended is otherwise satisfactory."

Sri P. R. RAMAIYA (Basavanagudi).—Ou a point of explanation. ನೀವು ಓದಿದ ರೂಲ್ ಪ್ರಕಾರ efficient ಆಗಿದ್ದರೆ compulsory ಯಾಗಿ retire ಮಾಡಕೂಡದೆಂದು ಅರ್ಥವಾಗುತ್ತದೆ. ಆದರೆ ಸರ್ವೆ ಸಾಮಾನ್ಯವಾಗಿ ರಿಟೈರ್ ಆಗುವವರ ವಿಷಯದಲ್ಲಿ ಈ efficiency testನ್ನು ನಡೆಸುತ್ತೀರಾ ? ಮಾಡುವುದಾದರೆ ಯಾವ ರೀತಿ test ಮಾಡುತ್ತೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಆಮೇಲೆ ರೂಲ್ 320 ರಲ್ಲಿ ಹೇಳಿರುವುದನ್ನು ಹೇಳುತ್ತೇನೆ.

Article 320 of the M.S.R. reads as follows.—

"320. A Government servant who has obtained a superannuation pension is, by the nature of

(ಶ್ರೀ ಕೆ. ಹನುಮಂತಯ್ಯ).

the case, excluded from re-employment in the General Service; but may, with the sanction of Government which would be given only on strong public grounds, be re-employed in service. When so re-employed, he is permitted to retain his pension subject to the condition that the pay on re-employment *plus* pension shall not exceed the pay at the time of retirement. A Government servant who is superannuated may not be re-employed on the ground that he was entitled to a retiring pension."

ಅದ್ದರಿಂದ Extension of Service ಮತ್ತು Re-employment—ಇವುಗಳನ್ನು ಈ ಎರಡು ನಿಯಮಗಳನ್ನು ಅನುಸರಿಸಿ ಮಾಡುತ್ತಿದ್ದೇವೆ. ಆದ್ದರಿಂದ ಈ ಮೊಟ್ಟಮೊದಲು ಓದಿದ ನಿಬಂಧನೆಯ ಪ್ರಕಾರ ಕೆಲಸ ಮಾಡಿದರೆ ಬಹುಮಂದಿಗೆ extension ಕೊಡಬೇಕಾಗುತ್ತದೆ. ಆದರೆ, ನಾವು ಹೊಸಹೊಸ ವಿದ್ಯಾವಂತರಿಗೆ ಅವಕಾಶವಿರಬೇಕೆಂದು ಹೇಳಿ, ಆ ರೂಲಿನಲ್ಲಿ ಎಷ್ಟು ಅವಕಾಶವಿದೆಯೋ ಅಷ್ಟು ಅವಕಾಶವನ್ನು ಕೂಡ ಉಪಯೋಗಿಸಿಕೊಳ್ಳುವ ಪದ್ಧತಿಯನ್ನನುಸರಿಸುತ್ತಿಲ್ಲ. ಮೂರು ಇಲಾಖೆಗಳಲ್ಲಿ ಮಾತ್ರ extension ಸ್ವಲ್ಪಮಟ್ಟಿಗೆ ಕೊಡುತ್ತಿದ್ದೇವೆ. ಅಲ್ಲಿಯೂ ಕೇವಲ ಪ್ರಾಮಾಣಿಕರಾಗಿರುವವರಿಗೆ ಕೊಡುವುದು. ವಿದ್ಯಾಭ್ಯಾಸ ಇಲಾಖೆಯಲ್ಲಿ ಮುಖ್ಯ ಉಪಾಧ್ಯಾಯರಾಗಿದ್ದು ವಿದ್ಯಾರ್ಥಿಗಳಿಗೆ ಮತ್ತು ಜನರಿಗೆ ಜನಪ್ರಿಯರಾಗಿದ್ದು ಡೈರೆಕ್ಟರವರು ಅವರ ವಿಷಯದಲ್ಲಿ ಶಿಫಾರಸು ಮಾಡಿದ ಕೆಲವು ಸಂದರ್ಭಗಳಲ್ಲಿ ಎಕ್ಸ್‌ಟೆನ್‌ಷನ್ ಕೊಟ್ಟಿದೆ. 58 ವರ್ಷಕ್ಕೆ ರಿಟೈರ್ ಆದ ಮೇಲೆ ಮತ್ತೆ ಈ ರೀತಿಯಾಗಿ extension ಮಾಡುವ ಸಂದರ್ಭ ಒದಗುವುದಿಲ್ಲ. ಇನ್ನೆರಡು ಇಲಾಖೆಗಳಲ್ಲಿ ಈ ರೀತಿ ಅನುಸರಿಸಿರುವುದು ಎಂದರೆ P.W.D. ಮತ್ತು ಮೆಡಿಕಲ್ ಇಲಾಖೆಗಳಲ್ಲಿ. ಮೆಡಿಕಲ್ ಇಲಾಖೆಯಲ್ಲಿ ಯಾವ ಡಾಕ್ಟರು ದಕ್ಷರು ಮತ್ತು ಹಸ್ತಗುಣ ಚೆನ್ನಾಗಿದೆಯೆಂದು ಹೆಸರು ತೆಗೆದುಕೊಂಡಿದ್ದಾರೋ ಅಂಥ 10-12 ಡಾಕ್ಟರುಗಳಿಗೆ ಮಾತ್ರ extension ಕೊಟ್ಟಿದೆ. ಅದೇ ರೀತಿ ಎಂಜಿನಿಯರಿಂಗ್ ಇಲಾಖೆಯಲ್ಲಿಯೂ ಬುದ್ಧಿವಂತರು, ಪ್ರಾಮಾಣಿಕರು ಎಂದು ಯಾರು ಹೆಸರು ಪಡೆದಿದ್ದಾರೋ ಅಂಥ ಐದಾರು ಜನರಿಗೆ ಮಾತ್ರ extension ಕೊಟ್ಟಿದೆ. ಆದ್ದರಿಂದ ಸರ್ಕಾರದವರು ತಮಗೆ ಬೇಕಾದವರಿಗೆ extension ಕೊಡುತ್ತಾರೆ ಎಂಬ ವಾದ ಸರಿಯಲ್ಲ. ಬೇಕಾದವರು ಬೇಡದವರು ಎಂದು ಭೇದ ಮಾಡುವುದಿಲ್ಲ. ತಾವು ಕೇಳಿದವರಿಗೆ extension ಕೊಟ್ಟಿಲ್ಲವೆಂದು ಹೀಗೆ ವಾದಿಸಬಹುದು. ಆದರೆ ವಾಸ್ತವವಾಗಿ ಬೇಕಾದವರು ಬೇಡದವರು ಎಂಬ ಪ್ರಶ್ನೆಯೇ ಇಲ್ಲ. ಮಂತ್ರಿಗಳು ವಿವೇಚನೆಯಿಂದ ಯಾರು ದಕ್ಷರು, ಬುದ್ಧಿವಂತರು ಎಂದು ಭಾವಿಸುತ್ತಾರೋ ಅಂಥವರ ವಿಷಯದಲ್ಲಿ order ಪಾಸ್ ಮಾಡಬಹುದು. ಅವರು ಈ ವಿವೇಚನೆಯನ್ನು ಸರಿಯಾಗಿ ಉಪಯೋಗಿಸುತ್ತಿಲ್ಲವೆಂದು ಕಂಡುಬಂದರೆ ಕಾಲಾನುಕಾಲಕ್ಕೆ ಮನೆಗೆ ಹೋಗುತ್ತಾರೆ.

ಇನ್ನೊಂದು ವಿಷಯವನ್ನು ಮಾನ್ಯ ಸ್ನೇಹಿತರ ಪ್ರಾಮುಖ್ಯವಾಗಿ ಪ್ರಸ್ತಾಪಿಸಿದ್ದಾರೆ, ಅದು ರಿಟೈರ್ ಆಗತಕ್ಕ ಆಫೀಸರುಗಳಿಗೆ ಪೆನ್‌ಷನ್ ಅನ್ನು ಜಾಗ್ರತ ಕೊಡುತ್ತಿಲ್ಲವೆಂಬುದು. ಈ ಸಂದರ್ಭವನ್ನು ನೋಡಿ ನನಗೆ ಒಂದು ಸಲ ಆಶ್ಚರ್ಯವಾಯಿತು. ಏಕೆಂದರೆ, here is a case where a Government officer suffers at the hands of another Government officer. ನಾಳೆಯ ದಿವಸ ಅವರೇ ರಿಟೈರ್ ಆಗುವವರಾಗಿ ಅವರಿಗೇ ಕಷ್ಟ ಬರುತ್ತದೆ. ಇದು ಹೇಗಿದೆಯೆಂದರೆ, ಅತ್ತೆ ಸೊಸೆಗೆ ಕಾಟ ಕೊಡುತ್ತಿರುವಂತೆ. ಅತ್ತೆಯೂ ಹಿಂದೆ ಸೊಸೆಯಾಗಿದ್ದಾಗ ಕಷ್ಟವನ್ನು ಅನುಭವಿಸಿರುತ್ತಾಳೆ. ಅದನ್ನು ಮರೆತು ಈಗ ತನ್ನ ಸೊಸಗೆ ಕಾಟ ಕೊಡಲು ಹೊರಟಿರುತ್ತಾಳೆ. ಆದ್ದರಿಂದ ಆಫೀಸರುಗಳಿಗೆ ಒದಗುವ ಇಂಥ ಕಷ್ಟವನ್ನು ಕೇಳಿ ನನಗೆ ಬಹಳ ವ್ಯಥೆಯುಂಟಾಗಿದೆ. ಇದಕ್ಕಾಗಿಯೇ ಹೋದವರುಷ ಸುಮಾರು 8 ತಿಂಗಳ ಹಿಂದೆ ಸಂಬಂಧಪಟ್ಟ ಆಫೀಸರುಗಳ ಕಾನ್‌ಫರೆನ್ಸ್ ಒಂದನ್ನು ಏರ್ಪಡಿಸಿ, ರೆವಿನ್ಯೂ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಲಾಯಿತು. ಅವರು ಈ ರೀತಿಯಾಗಿ ಪೆನ್‌ಷನ್‌ಗಳನ್ನು ತಡಮಾಡುವುದು ನ್ಯಾಯವಲ್ಲವೆಂದು ಹೇಳಿ ಬಹಳ ತರದೂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಅದರಿಂದಾಗಿ ಹೋದ ವರುಷ ಎಂದೂ ಇಲ್ಲದಷ್ಟು ಕೇಸುಗಳು dispose ಆಗಿವೆ. ಆ ಸಮಿತಿಯವರು ಏನೇನು ತೀರ್ಮಾನಗಳನ್ನು ತೆಗೆದುಕೊಂಡರೋ ಅವುಗಳನ್ನೆಲ್ಲಾ ಗೆಜೆಟ್ಟಿನಲ್ಲಿ 7-8 ಆರ್ಡರ್‌ಗಳು ಮುಖೇನ ಹೊರಡಿಸಿ ಪೆನ್‌ಷನ್ ಪೇಪರ್‌ಗಳನ್ನು ಬೇಗ dispose ಮಾಡುವಂತೆ ಮಾಡಿದ್ದಾರೆ. ಮಾನ್ಯ ಸದಸ್ಯರುಗಳೂ ಈ ಸರ್ಕಾರಿ ಹುಕುಮುಗಳನ್ನು ನೋಡಿರಬಹುದು. ಇವುಗಳ ಪರಿಣಾಮವಾಗಿ ಈಗ ಹಿಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಪೆನ್‌ಷನ್ ಕಾಗದಗಳು ಫೈಸಲಾಗುತ್ತಿವೆ. ಅಲ್ಲದೆ ಮೂರು ಜನ ಸ್ಪೆಷಲ್ accountantsನ್ನು ಇದಕ್ಕಾಗಿಯೇ ನೇಮಿಸಿದ್ದಾರೆ. ಅವರಿಗೆ ತಕ್ಕಷ್ಟು ಸಿಬ್ಬಂದಿಯನ್ನು ಬೇರೆ ಕೊಟ್ಟಿದೆ. ಈ ವ್ಯವಸ್ಥೆ ಮಾಡಿದ ಮೇಲೆ 1,800 ಕೇಸುಗಳನ್ನು ಅವರು dispose of ಮಾಡಿದ್ದಾರೆ.

Sri A. BHEEMAPPA NAIK.—Why don't you think of fixing a minimum tentative rate of pension as soon as they retire?

Sri K. HANUMANTHAIYA.—Government have also sanctioned necessary additional staff to the extent required. Government have also waived the recovery of pension and leave contribution due by the Local Bodies in the case of Government servants who have served there and retired prior to 1st April 1950. All these have enabled the Accountant-General to dispose of further 1,800 cases.

ಆದ್ದರಿಂದಲೇ ಈ ವರ್ಷ additional ಮತ್ತು supplementary grants ಆಗಿ ಮೂರು ಲಕ್ಷ ರೂಪಾಯಿಗಳನ್ನು ಹೊಸದಾಗಿ ಕೇಳಿದ್ದೇವೆ. ಹೋದ ವರ್ಷ ಇದೇ ರೀತಿಯ ವ್ಯವಸ್ಥೆಯಿತ್ತು. ತಾವು

ಗಳೆಲ್ಲಾ ಅದನ್ನೊಪ್ಪಿ ಮೊನ್ನೆ ತಾನೆ appropriation ಬಿಲ್ಲಿಗೆ ಅನುಮೋದನೆಯಿತ್ತಿದ್ದೀರಿ. ಆದ್ದರಿಂದ ಪೆನ್ಷನ್ ಕಾಗದಗಳು ಜಾಗ್ರತೆ ವಿಲೆಯಾಗುವುದಕ್ಕೆ ಏನೇನು ಸಾಧ್ಯವೋ ಅದನ್ನೆಲ್ಲಾ ಮಾಡುತ್ತಿದ್ದೇವೆ. ಕೆಲವರು ಅನೇಕ ಆಫೀಸುಗಳಲ್ಲಿ ಕೆಲಸ ಮಾಡಿರುತ್ತಾರೆ. ಸ್ಥಳೀಯ ಸಂಸ್ಥೆಗಳಲ್ಲಿ ಬೇರೆ ಅವರ ಸರ್ವಿಸ್ ಇರುತ್ತದೆ. ಅದನ್ನೆಲ್ಲಾ verify ಮಾಡಿಸದೆ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಈ verification ಮುಂತಾದುವುಗಳು ಜಾಗ್ರತೆ ಆಗಬೇಕೆಂದು ಹೇಳಿ ಸೂಕ್ತ ಆರ್ಡರುಗಳನ್ನು ಸಾದರು ಮಾಡಿದ್ದೇವೆ.

ಶ್ರೀ ಎ. ಭೀಮಪ್ಪನಾಯಕ್ ಅವರು ಪೆನ್ಷನ್ ಕಾಗದಗಳೆಲ್ಲಾ ಪೂರ್ತಿಯಾಗಿ ತೀರ್ಮಾನವಾಗುವುದಕ್ಕಿಂತ ಮೊದಲು ಅವರಿಗೆ ಏನಾದರೂ ಸ್ವಲ್ಪ relief ಕೊಡಬಾರದೇ ಎಂದು ಕೇಳಿದರು. ಈಗಾಗಲೇ ಅದನ್ನು ಮಾಡುತ್ತಿದ್ದೇವೆ. ಅದು M. S. R. ನಲ್ಲಿ ಈ ರೀತಿ ಹೇಳಿದೆ.

> "The Accountant General will have sufficient power to grant pension in every case within one month of the retirement of a Government servant. Such pension should be freely granted and the applicant should also be distinctly told at the time of retirement by the Head of his office that he should apply to the Accountant General for an anticipatory pension if he wants payment of pension at once".

ಆದ್ದರಿಂದ ಈ Anticipatory Pension ಅನ್ನು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಸರ್ಕಾರದವರು ತೆಗೆದುಕೊಂಡಿರತಕ್ಕ ಈ ಕಾರ್ಯಕ್ರಮಗಳಿಂದ ಪೆನ್ಷನ್ ಕಾಗದಗಳು ಆದಷ್ಟು ಜಾಗ್ರತೆ ಪರಿಶೀಲನೆಯಾಗಿ ಪೆನ್ಷನ್ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ ಎಂಬುದನ್ನು ಮನಗಂಡಿದ್ದಾರೆ ಎಂದು ಭಾವಿಸಿದ್ದೇನೆ.

ಇನ್ನು ಉಳಿದುಕೊಂಡಿರತಕ್ಕದ್ದು, Political sufferers. Political sufferers ಗಳಿಗೆ ಈಗ್ಗೆ ಸುಮಾರು 8 ವರ್ಷಗಳಿಂದಲೂ ಸರಕಾರದವರು ತಮಗೆ ಸಾಧ್ಯವಾದ ಸಹಾಯವನ್ನು ಮಾಡಿದ್ದಾರೆ. ಎಲ್ಲ ಪಟ್ಟಿಯನ್ನೂ ಸರಕಾರದವರೇ ತರಿಸಿ ಅದನ್ನು ತನಿಖೆಮಾಡಿ ಏನೇನು ಸಹಾಯ ಮಾಡಬೇಕು ಎಂದು ಮಾಡುವುದು ಅದು ಅಸಾಧ್ಯ ಮತ್ತು ಉಚಿತವೂ ಅಲ್ಲ. ಸರಕಾರದಲ್ಲಿ ಹಿಂದೆ ಒಂದು Government Order ಆಗಿದೆ. ಅದು ಏನೆಂದರೆ, Political sufferers ಗೆ ಜಮೀನುಗಳನ್ನು ಕೊಡಬೇಕು, ಇತರ ಸಹಾಯಗಳನ್ನು ಕೊಡಬೇಕು, ಮತ್ತು ಎಲ್ಲಿ ಸಾವು ಉಂಟಾಗಿದೆಯೋ ಅಂಥವರ ವಾರಸುದಾರರಿಗೆ ಸ್ವಲ್ಪ ಹಣವನ್ನು ಗ್ರಾಂಟು ರೂಪದಲ್ಲಿ ಕೊಡಬೇಕು ಎಂದು. ಅನೇಕರಿಗೆ ಈರೀತಿ ಸಹಾಯ ಒದಗಿದೆ, ಎಷ್ಟೋ ಜನರಿಗೆ ಜಮೀನುಗಳನ್ನು ಕೊಟ್ಟಿದ್ದೇವೆ. Monetary Compensation ಹಣವನ್ನೂ ಕೂಡ ಕೊಟ್ಟಿದ್ದೇವೆ. ಇದನ್ನೆಲ್ಲಾ ಮರೆತುಬಿಟ್ಟು "ಏನೂಮಾಡಿಲ್ಲ" ಎಂದು ವಾದಿಸುತ್ತಾ ಹೋದರೆ ಅದು ಅಷ್ಟು ಭೂಷಣವಾಗಿ ಕಾಣುವುದಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಜಮೀನುಗಳನ್ನು ಕೊಟ್ಟಿಲ್ಲ.

ಶ್ರೀ ಕೆ. ಹನುಮಂತಯ್ಯ.—ಹರಿಜನರ ವಿಷಯದಲ್ಲಿ ಇದೇ ಕಷ್ಟ ಬಂದಿದೆ; political sufferers ವಿಷಯದಲ್ಲಿ ಇದೇ ಕಷ್ಟ ಬಂದಿದೆ. ಅರ್ಜಿ ತೆಗೆದುಕೊಂಡು ಹೋಗಿ ಕೊಡಿ ಎಂದರೆ ಅರಣ್ಯ ಇಲಾಖೆಯಲ್ಲಿ ಕೇಳುತ್ತಾರೆ, ಗೋಮಾಳಕ್ಕೆ ಸೇರಿದ ಜಮೀನನ್ನು ಕೇಳುತ್ತಾರೆ, ಅಮರಾಯಿಗೆ ಸೇರಿರುವ ಜಮೀನನ್ನು ಕೊಡಿ ಎಂದು ಕೇಳುತ್ತಾರೆ. ಅದನ್ನು ಕೊಡುವುದಕ್ಕೆ ಆಗುವುದಿಲ್ಲ, ಏಕೆಂದರೆ ಹಳ್ಳಿಯವರು ಗೋಮಾಳ ಬೇಕು ಎಂದು ಹೇಳುತ್ತಾರೆ. ಸಾಧಾರಣವಾಗಿ ಒಂದು ರಾಜ್ಯದಲ್ಲಿ ಮೂರನೆ ಒಂದು ಭಾಗ ಫಾರೆಸ್ಟು ಇರಬೇಕೆಂದು ನಿಯಮವಿದೆ. ಮೈಸೂರು ದೇಶದಲ್ಲಿ ಅರಣ್ಯ ಮೊದಲು ಇದ್ದುದಕ್ಕಿಂತ ಕಡಿಮೆಯಾಗುತ್ತಿದೆ. ಫಾರೆಸ್ಟನ್ನು ಇನ್ನೂ ಕಡಿಮೆಮಾಡಬೇಕೆಂದು ಹೇಳುತ್ತಾರೆ. ಅದನ್ನು ಮಾಡುವುದಕ್ಕೆ ಯಾವ ಜವಾಬ್ದಾರಿ ಸರ್ಕಾರಕ್ಕೂ ಕೂಡ ಸಾಧ್ಯವಾಗುವುದಿಲ್ಲ. ಜಮೀನು ಇರುವ ಕಡೆ ಯಾರೂ ಹೋಗುವುದಿಲ್ಲ, ಎಲ್ಲಾದರೂ ಕೆರೆ ಅಂಗಳ, ಗೋಮಾಳದ ಕಡೆ, ಜಮೀನು ಕೊಡಿ ಎಂದು ಕೇಳುತ್ತಾರೆ. ಉದಾಹರಣೆಗೆ, ಒಂದುಸಾರಿ political sufferers ಹೆಸರುಘಟ್ಟದ ಕೆರೆ ಅಂಗಳದಲ್ಲಿ ಜಮೀನು ಕೊಡಿ ಎಂದು ಕೇಳಿದರು. ಅದಕ್ಕೆ ಅಲ್ಲಿ ಜಮೀನು ಕೊಡುವುದಕ್ಕಾಗುವುದಿಲ್ಲ ಎಂದು ಉತ್ತರ ಹೇಳಿದ್ದೇವೆ. ಅದಕ್ಕೆ ಕೋಪ ಬಂತು.

ಒಬ್ಬ ಸದಸ್ಯರು.—ಜಯನಗರ ಎಕ್ಸ್‌ಟೆನ್ಷನ್ ಅಲ್ಲಿ ಸೈಟುಗಳನ್ನು ಕೊಟ್ಟಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಹೆಚ್ಚು ಜನರಿಗೆ ಇಲ್ಲ. ಇಬ್ಬರು ಮೂವರಿಗೆ ಅಲ್ಲಿ ಸೈಟುಗಳನ್ನು ಕೊಟ್ಟಿದ್ದೇವೆ. Free ಆಗಿ ಕೊಟ್ಟಿಲ್ಲ. ಮಿಕ್ಕವರಿಗೆ ಕೊಟ್ಟ ಹಾಗೆ ಅವರಿಗೂ upset price ನಲ್ಲಿ ಕೊಟ್ಟಿದ್ದೇವೆ. ಡೆಪ್ಯುಟಿ ಕಮೀಷನರ್ ಮುಖಾಂತರವಾಗಲಿ, ಕಾಂಗ್ರೆಸ್ ಮುಖಾಂತರವಾಗಲಿ ಇಂಥವರು political sufferers ಎಂದು ಸರ್ಕಾರದ ಗಮನಕ್ಕೆ ತರಬೇಕು. ಈಗ ಶ್ರೀ ಮುನಿಸ್ವಾಮಯ್ಯನವರು ಇಲ್ಲಿ ನಾಲ್ಕೈದು ಹೆಸರುಗಳನ್ನು ಹೇಳಿದರು. ಎಂಟು ಹತ್ತು ವರ್ಷಗಳಿಂದ ಈ ವಿಷಯವನ್ನು ಹೇಳದೆ ಅವರು ಏನು ಮಾಡುತ್ತಿದ್ದರು? ಆದ್ದರಿಂದ ಈ ದಿವಸ ಸರ್ಕಾರದವರು ಏನೂ ಮಾಡಿಲ್ಲ ಎಂದು ಆಕ್ಷೇಪಣೆ ಮಾಡುವುದು ಅಷ್ಟೊಂದು ಉಚಿತವಾಗಿ ಕಾಣುವುದಿಲ್ಲ. ಈಗಲೂ ಕೂಡ ಯಾರಾದರೂ ಆ ರೀತಿ ಸತ್ತು, ಅವರ ವಾರಸುದಾರರಿಗೆ ನಿಜವಾಗಿ ಕಷ್ಟವಾಗಿದ್ದರೆ ಅವುಗಳನ್ನು ಪರಿಶೀಲನೆ ಮಾಡುವುದಕ್ಕೆ ಸಿದ್ಧರಾಗಿದ್ದೇವೆ. ಆದರೆ, ಜಮೀನು ಕೇಳುವಾಗ ಸರ್ಕಾರದವರು ಎಲ್ಲಿ ಜಮೀನು ಕೊಡುವುದಕ್ಕೆ ಸಾಧ್ಯವೋ ಅಲ್ಲಿ ಕೇಳಬೇಕಾಗಿದೆ. ಹಾಗಿಲ್ಲದೆ ಅನೇಕರು ಕೆರೆಯ ಅಂಗಳ, ಕಟ್ಟೆ, ಕುಂಟೆಗಳ ಹತ್ತಿರ ಜಮೀನು ಕೊಡಿ ಎಂದು ಕೇಳಿದರೆ ಕೊಡುವುದಕ್ಕೆ ಆಗುವುದಿಲ್ಲ.

ಹೋದ ವರ್ಷ ಎಂಟು ತಿಂಗಳುಗಳ ಹಿಂದೆ ಜಮೀನು ಕೊಡೋಣ, ಎಷ್ಟೋ ಕಷ್ಟಪಟ್ಟಿದ್ದಾರೆ, ಜೀವನೋಪಾಯಕ್ಕೆ ಮಾರ್ಗವಿಲ್ಲ, ಅರ್ಜಿ ಹಾಕಿ ಎಂದರೆ, ಸರ್ಕಾರಕ್ಕೆ ಅಮರಾಯಿಯಿಂದ ದುಡ್ಡು ಬರುತ್ತಾ ಇರುವ ಹುಣಸೆ ಮರ, ಮಾವಿನ ಮರ ಇರುವ ಕಡೆ ಅರ್ಜಿಗಳನ್ನು ಹಾಕುತ್ತಾರೆ. ಹೇಗೆ ಕೊಡುವುದಕ್ಕಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಆದ್ದರಿಂದ ಎಲ್ಲಿ ಸರ್ಕಾರದವರು ಜಮೀನುಗಳನ್ನು ಸುಲಭವಾಗಿ ಕೊಡಬಹುದೋ ಅಲ್ಲಿ ಕೇಳಿ; ಕೊಡೋಣ.

ಶ್ರೀ ಜೆ. ಮಹಮ್ಮದ್ ಇಮಾಂ.—ಆ ಪದ್ಧತಿಯನ್ನೇ ಬಿಟ್ಟುಬಿಡಿ. ಬಹಳ ದಿವಸಗಳಾದುವು ; ನಮಗೊಬ್ಬರಿಗೂ ಇನ್ನೂ ಕೊಟ್ಟಿಲ್ಲ.

ಶ್ರೀ ಕೆ. ಹನುಮಂತಯ್ಯ.—ಶ್ರೀ ವೀರಣ್ಣಗೌಡರು ಹೇಳಿದ ಹಾಗೆ, ಹಕ್ಕು ಇದೆ ಎಂದು ಕೇಳುವುದು ಅಷ್ಟು ಭೂಷಣವಲ್ಲ. Political sufferersಗೆ ಏನೂ ಕೊಟ್ಟಿಲ್ಲ ಎಂದು ಹೇಳಿ ಶಾಸನಸಭೆಯಲ್ಲಿ ಭಾಷಣ ಮಾಡುತ್ತಾ ಕುಳಿತರೆ ಅದರಿಂದ ನಮಗೆ ಗೌರವ ಬರುವುದಿಲ್ಲ. Government order ಇದೆ. ಅದನ್ನು ಯಾವ ರೀತಿ ಕಾರ್ಯರೂಪಕ್ಕೆ ತರಬೇಕೋ ಆ ರೀತಿ ತರುವುದಕ್ಕೆ ಪ್ರಯತ್ನಮಾಡೋಣ.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—Political sufferers ಬೆಂಗಳೂರಿನಲ್ಲಿ Agriculturist ಆದರೆ ತಾನೆ ಭೂಮಿ ಕೊಡುವುದು ? ವ್ಯಾಪಾರ ಮಾಡುವವರಿಗೆ ಏತಕ್ಕೆ ಭೂಮಿ ಕೊಡಬೇಕು ?

ಶ್ರೀ ಕೆ. ಹನುಮಂತಯ್ಯ.—ತಾವು ಹೇಳಿದ ಪ್ರಶ್ನೆ ಇಲ್ಲಿಗೆ ಬರುತ್ತದೆ. ಜಮೀನು ಕೊಡುವಾಗ ವಿವೇಚನೆ ಮಾಡಬೇಕು. ಅವರು ವ್ಯವಸಾಯಕ್ಕೆ ಕೇಳುತ್ತಿದ್ದಾರೋ ಅಥವಾ ಮಾರಿಕೊಳ್ಳುವುದಕ್ಕೆ ಕೇಳುತ್ತಿದ್ದಾರೆಯೋ ಇದನ್ನೆಲ್ಲಾ ಯೋಚನೆ ಮಾಡಿ ಕೊಡಬೇಕು. ಹಾಗೆ ಯೋಚನೆ ಮಾಡಿ ಕೊಟ್ಟರೂ ಕೂಡ ಅಚಾತುರ್ಯವಾಗುತ್ತದೆ. ಏನು ಮಾಡೋಣ ?

ಆದ್ದರಿಂದ ಮಾನ್ಯ ಸದಸ್ಯರು ಮಾಡಿದ ಪ್ರತಿಯೊಂದು ಟೀಕೆಗೂ ಕೂಡ ಉತ್ತರ ಕೊಟ್ಟಿದ್ದೇನೆ ಎಂದು ಭಾವಿಸಿಕೊಂಡಿದ್ದೇನೆ. ಆ ಉತ್ತರಗಳಿಂದ ಅವರ ಮನಸ್ಸಿಗೆ ಸಮಾಧಾನವಾಗಿರುತ್ತದೆ ಎಂದು ನನ್ನ ನಂಬಿಕೆ. ದಯವಿಟ್ಟು ಈ ಡಿಮ್ಯಾಂಡನ್ನು ಒಪ್ಪಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—The question is :

"That a sum not exceeding Rs. 2,31,000 be granted to the Government to defray the charges which will come in course of payment during the year ending 31st day of March 1957, in respect of 'Territorial and Political Pensions'."

The motion was adopted.

DEMAND No. 32—SUPERANNUATION ALLOWANCES AND PENSIONS.

55. SUPERANNUATION ALLOWANCES AND PENSIONS.

Mr. SPEAKER.—The question is :

"That a sum not exceeding Rs. 79,36,000 be granted to the Government to defray the charges which will come in course of payment during the year ending 31st day of March 1957, in respect of 'Superannuation Allowances and Pensions'."

The motion was adopted.

DEMAND No. 32-A—COMMUTATION OF PENSIONS.

55-A. COMMUTATION OF PENSIONS FINANCED FROM ORDINARY REVENUES.

Mr. SPEAKER.—The question is :

"That a sum not exceeding Rs. 1,00,000 be granted to the Government to defray the charges which will come in course of payment during the year ending 31st day of March 1957, in respect of 'Commutation of Pensions financed from ordinary Revenues'."

The motion was adopted.

DEMAND No. 43-A.—COMMUTED VALUE OF PENSIONS.

83. PAYMENTS OF COMMUTED VALUE OF PENSIONS.

Mr. SPEAKER.—The question is:

"That a sum not exceeding Rs. 1,00,100 be granted to the Government to defray the charges which will come in course of payment during the year ending 31st day of March 1957, in respect of 'Payments of Commuted value of Pensions'."

The motion was adopted.

DEMAND No. 34-MISCELLANEOUS.

57. MISCELLANEOUS.

Mr. SPEAKER.—Motion moved :

"That a sum not exceeding Rs. 27,25,500 be granted to the Government to defray the charges which will come in course of payment during the year ending 31st day of March 1957 in respect of 'Miscellaneous'."

*ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಅಧ್ಯಕ್ಷರೇ, ಬೆಂಗಳೂರು ಮತ್ತು ದಾವಣಗೆರೆ ನಗರಗಳು ಬಹಳ ದೊಡ್ಡದಾಗಿವೆ. ಅದರಲ್ಲೂ ಮುಖ್ಯವಾಗಿ ಬೆಂಗಳೂರು ನಗರದಲ್ಲಿ ವಿಲ್ಸನ್‌ಗಾರ್ಡನ್ನಿನಲ್ಲಿ ಅನಾಥಶಿಶು ಸೇವಾಸದನ, ಮತ್ತು ಅಶಕ್ತ ಪೋಷಕ ಸಭೆ, ಇವುಗಳಿವೆ. ದಾವಣಗೆರೆಯಲ್ಲಿ ಮಾತೃ ಮಂದಿರದವರು ಜನಗಳಿಗೆ ಬಹಳ ಉತ್ತಮ ಸ್ಥಿತಿಯಲ್ಲಿ ಸೇವೆಯನ್ನು ಮಾಡುತ್ತಿದ್ದಾರೆ. ಅದರಲ್ಲೂ ಕೂಡ ಅನಾಥ ಮಕ್ಕಳು ನಮ್ಮ ದೇಶದಲ್ಲಿ ದಿನೇ ದಿನೇ ಹೆಚ್ಚಾಗುತ್ತಾ ಇದ್ದಾರೆ. ಆದರೆ ಇಂತಹ ಮಕ್ಕಳಿಗೆ ಪೋಷಣೆ ಮಾಡುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಈ ವಿಚಾರದಲ್ಲಿ ರಷ್ಯಾ ಮತ್ತು ಚೈನಾ ದೇಶದಲ್ಲಿ ಉತ್ತಮವಾದಂಥ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಅದಕ್ಕೆ ಒಂದು ನಿದರ್ಶನ ಹೇಳಬೇಕೆಂದರೆ, ತಾಯಿ ತಂದೆಗಳು ಎಂದರೆ ಎಷ್ಟು ಪ್ರೇಮ ಇಟ್ಟುಕೊಂಡಿದ್ದಾರೋ ಅದಕ್ಕಿಂತಲೂ ಹೆಚ್ಚಿನ ಪ್ರೇಮವನ್ನು ಅನಾಥ ಮಕ್ಕಳ ಮೇಲೆ ರಷ್ಯಾ ಮತ್ತು ಚೈನಾದವರು ಇಟ್ಟುಕೊಂಡಿದ್ದಾರೆ. ಆ ಮಕ್ಕಳು ಬೆಳೆದು ಉತ್ತಮವಾದ ಸೇವೆಯನ್ನು ದೇಶಕ್ಕೆ ಮಾಡುತ್ತಾ ಇರುವುದೇ ಸಾಕ್ಷಿಯಾಗಿದೆ. ಮಲ್ಲೇಶ್ವರದಲ್ಲಿ ಒಂದು ಸೇವಾಸದನವಿದೆ. ಸಾವಿರಾರು ಅನಾಥ ಮಕ್ಕಳು ವಿದ್ಯಾಭ್ಯಾಸದ ಜೊತೆಗೆ ಸಮಾಜಸೇವೆ ಮಾಡಿಕೊಂಡು ದೇಶಕ್ಕೆ ಮಾರ್ಗದರ್ಶಕ ಸೇವೆ ಸಲ್ಲಿಸುತ್ತಿದ್ದಾರೆ. ಅದಕ್ಕೆ ಕೊಟ್ಟಿರತಕ್ಕ ಗ್ರಾಂಟನ್ನು ಸ್ವಲ್ಪ ಹೆಚ್ಚಿಸಬೇಕು ಎಂದು ಈ ಮಾನ್ಯ ಸಭೆಯಲ್ಲಿ ಸಭಾನಾಯಕರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆಯೇ ವಿಲ್ಸನ್ ಗಾರ್ಡನ್ ಅನಾಥ ಶಿಶುವಿಹಾರಕ್ಕೂ ಹೆಚ್ಚಿನ ಗ್ರಾಂಟನ್ನು ಕೊಡಬೇಕು. ಈ ಸೇವಾಸದನಕ್ಕೆ ಎರಡು ಎಕರೆ ಜಮೀನು ಕೊಡಿ ಎಂದು ಕೇಳಿದರೂ ಸರ್ಕಾರದವರು ಅದನ್ನು ಇನ್ನೂ ಮಂಜೂರು ಮಾಡಿಲ್ಲ. ದಿವಂಗತ ಶ್ರೀ ಎಚ್. ಸಿದ್ದಯ್ಯನವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಈ ಮನವಿ ಮಾಡಿದ್ದರು. ಅದು ಅವರ ಕೈಸೇರಿತೋ ಏನೋ ಗೊತ್ತಿಲ್ಲ. ಅನೇಕ ಸಲ ಪತ್ರಿಕೆಗಳ ಮುಖಾಂತರ appeal ಒಪ್ಪಿಸಿದ್ದಾರೆ. ಇದುವರೆಗೂ ಕೂಡ ಅವರ ಕೈ ಸೇರದೆ ಮಕ್ಕಳಿಗೆ ಕಷ್ಟವಾಗುತ್ತಿದೆ. ಆದ್ದರಿಂದ ಈ ಸೇವಾಸದನಕ್ಕೂ ಸಹ ಸರ್ಕಾರದವರು ಗ್ರಾಂಟನ್ನು ಹೆಚ್ಚುಮಾಡಬೇಕು.

2-30 P.M.

ಎರಡನೆಯದು, ಅಶಕ್ತ ಪೋಷಕ ಸಭೆ ಎಂಬ ಸಂಸ್ಥೆ ವಿಶ್ವೇಶ್ವರಪುರದಲ್ಲಿ ತುಂಬ ಗೌರವಯುತವಾಗಿ ನಡೆಯುತ್ತಿದೆ. ಇದರಲ್ಲಿಯೂ ಕೂಡ ಸಾವಿರಾರು ಜನ ಅನಾಥ ಮಕ್ಕಳೂ, ವಿಧವೆಯರೂ ವಾಸ ಮಾಡುತ್ತಿದ್ದಾರೆ. ಸಂಸ್ಥೆಯವರು ಉತ್ತಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಆದಕಾರಣ ಈ ಸಂಸ್ಥೆಗೂ ಹೆಚ್ಚು ಗ್ರಾಂಟ್ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ದಾವಣಗೆರೆಯ ಹತ್ತಿರ ಹೆಬ್ಬಾಳವೆಂದಿದೆ. ಅಲ್ಲಿ ಒಂದು ಮಾತೃಮಂದಿರವಿದೆ. ನಿಜವಾಗಿಯೂ ಆ ಸಂಸ್ಥೆ ಹೆಚ್ಚಿನ ಸೇವೆ ಸಲ್ಲಿಸುತ್ತಿದೆ. ಆ ಮಾತೃ ಮಂದಿರ ಆದರ್ಶವಾಗಿದೆ. ಮಾನ್ಯ ಶ್ರೀ ಎಚ್. ಸಿದ್ಧವೀರಪ್ಪನವರೂ ಪೂಜ್ಯ ಬಳ್ಳಾರಿ ಸಿದ್ದಮ್ಮನವರೂ ಆ ಸಂಸ್ಥೆಗೆ ಸದಸ್ಯರಾಗಿದ್ದಾರೆಂದು ಗೊತ್ತಾಗಿದೆ. ಅದು ಬೆಂಗಳೂರು ನಗರದಲ್ಲಿ ಮೆಟರ್ನಿಟಿ ಹೋಂಗಳು ಜನರಿಗೆ ಎಷ್ಟು ಸಹಾಯಕವಾಗಿವೆಯೋ ಅದಕ್ಕಿಂತ ಹೆಚ್ಚು ಸಹಾಯಕವಾಗಿದೆ. ಅನಾಥ ಮಕ್ಕಳನ್ನೂ, ಅನಾಥರನ್ನೂ ಪೋಷಣೆ ಮಾಡುವುದಲ್ಲದೆ, ಹಳ್ಳಿಯ ಜನರಿಗೂ ವೈದ್ಯಸಹಾಯ ನೀಡಿ ಸೇವೆಯನ್ನು ಸಲ್ಲಿಸುತ್ತಿದೆ. ಆದುದರಿಂದ ಈ ಮಾತೃಮಂದಿರಕ್ಕೆ ಕೂಡ ಹೆಚ್ಚು ಗ್ರಾಂಟು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನೊಂದು ಬಹುಮುಖ್ಯ ವಿಷಯವೆಂದರೆ, ಸಂಸ್ಥಾನದಲ್ಲಿ Beggar Relief Committee ಎಂದು ಭಿಕ್ಷುಕರಿಗೆ ಪರಿಹಾರಕೊಡುವುದಕ್ಕೆಂದು ಮಾಡಿದ್ದಾರೆ. ಇದನ್ನು ಮಾಡಿ ಸರ್ಕಾರದವರು ಉತ್ತಮ ಸೇವೆಯಲ್ಲಿ ಮಾರ್ಗದರ್ಶಕರಾಗಿದ್ದಾರೆ. ಅನೇಕ ಮಕ್ಕಳು ಭಿಕ್ಷುಕರಾಗಿರುವವರನ್ನು ಹಿಡಿದುಕೊಂಡು ಹೋಗಿ ಒಂದು ಕೇಂದ್ರದಲ್ಲಿ ಹಾಕುತ್ತಾರೆ. ಆದರೆ ಆ ಮಕ್ಕಳಿಗೆ ಅಲ್ಲಿ ಕೊಡುವ ಆಹಾರ ಅರ್ಧ ಹೊಟ್ಟೆ ಕೂಡ ತುಂಬುವುದಿಲ್ಲ. ಆದುದರಿಂದ ಅವರಿಗೆ ಹೊಟ್ಟೆ ತುಂಬ ಕೊಡಬೇಕು. ಅಲ್ಲಿ ಅವರಿಗೆ ವಿದ್ಯಾಭ್ಯಾಸ, ಹೊಲಿಗೆ, ಮುದ್ರಣ ಕೆಲಸ ಮುಂತಾದ ವಿಷಯಗಳಲ್ಲಿ ಶಿಕ್ಷಣ ಕೊಡುತ್ತಿದ್ದಾರೆ. ಆದರೆ ಅಲ್ಲಿರುವ ಭಿಕ್ಷುಕರಿಗೆ ಅರ್ಧ ಹೊಟ್ಟೆ ಅನ್ನ ಕೊಡುತ್ತಿದ್ದಾರೆ. ಇದನ್ನು ಪರಿಶೀಲನೆ ಮಾಡಿ ಸರಿಪಡಿಸಬೇಕು.

ಕೊನೆಯದಾಗಿ, ನಮ್ಮದೇ ಆದ ಬೆಂಗಳೂರಿನಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್, ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್, ಮೆಷಿನ್ ಟೂಲ್ಸ್ ಫ್ಯಾಕ್ಟರಿ ಮುಂತಾದ ಕಾರ್ಖಾನೆಗಳಿವೆ. ಈ ಕಾರ್ಖಾನೆಗಳು ನಮ್ಮ ದೇಶದಲ್ಲಿದ್ದರೂ ನಮ್ಮ ದೇಶದ ಕಾರ್ಮಿಕರಿಗೆ ಈ ಸಂಸ್ಥೆಗಳಲ್ಲಿ ಕೆಲಸ ಸಿಕ್ಕುವುದು ಕಷ್ಟ. ಭಾರತ್ ಎಲೆಕ್ಟ್ರಾನಿಕ್ಸ್‌ನಲ್ಲಿ ಒಂದು ಅಟೆಂಡರ್ ಕೆಲಸಕ್ಕೂ ದೂರ ಪ್ರದೇಶಗಳಿಂದ ಬೊಂಬಾಯಿ, ಪಂಜಾಬ್ ಅಥವಾ ಬೇರೆ ಕಡೆಯಿಂದ ಜನ ಬರಬೇಕಾಗಿದೆ. ಇದು ತಪ್ಪಬೇಕು. ಈ ಕಾರ್ಖಾನೆಗಳು ಮೊದಲು ನಮ್ಮ ದೇಶದವರಿಗೆ ಪ್ರಾಶಸ್ತ್ಯಕೊಡಬೇಕು. ಬೊಂಬಾಯಿ, ತಿರುವಾಂಕೂರು; ಉತ್ತರ ಪ್ರದೇಶಗಳಿಂದ ಅಟೆಂಡರ್ ಕೆಲಸಗಳಿಗೂ ಜನರನ್ನು ತರುತ್ತಾರೆ. ಎಲ್ಲರೂ ಇಂಡಿಯಾ ದೇಶದವರೆಂಬ ಭಾವನೆಯನ್ನಿಟ್ಟುಕೊಂಡರೂ ಕೂಡ, ಮೈಸೂರು ದೇಶದಲ್ಲಿ ಪದವೀಧರರಾಗಿ, ಪಾರಿಭಾಷಿಕ ಶಿಕ್ಷಣ ಪಡೆದವರಾಗಿದ್ದು, ಅಂಥವರು ಅರ್ಜಿ ಹಾಕಿಕೊಂಡರೆ, ಮೈಸೂರಿನವರಿಗೆ ಕೆಲಸ ಸಿಕ್ಕದೆ ಉತ್ತರ ಹಿಂದೂಸ್ಥಾನದಿಂದ ಜನರನ್ನು ತಂದು ಖಾಲಿಬಿದ್ದ ಕೆಲಸಗಳಿಗೆ ತುಂಬಿದರೆ ಇದು ಬಹಳ ಅನ್ಯಾಯವಲ್ಲವೆ ಎಂಬುದನ್ನು ಅಧ್ಯಕ್ಷರು ಅಪ್ಪಣೆ ಕೊಡಿಸಬೇಕು. ಈ ಪರಿಸ್ಥಿತಿಯನ್ನು ಸರ್ಕಾರ ಸರಿ ಮಾಡದೇಯಿದ್ದರೆ, ನಮ್ಮ ದೇಶದಲ್ಲಿ ಕ್ರಾಂತಿಯಾಗುವುದಕ್ಕೆ ಸಿದ್ಧವಾಗುತ್ತದೆ. ಮೈಸೂರು ದೇಶದಲ್ಲಿ ಹುಟ್ಟಿ ಬೆಳೆದವರು ಸೇವೆಗೆ ಮಾತ್ರ ಬೇಕು, ಇಂಥ ಕೆಲಸಗಳಿಗೆ ಮಾತ್ರ ಉತ್ತರ ಹಿಂದೂಸ್ಥಾನದವರು ಬೇಕೆಂದು ಹೇಳಿದರೆ ಹೇಗೆ? ನಮ್ಮ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶಿಕ್ಷಣ ಪಡೆದು ಉತ್ತೀರ್ಣರಾದವರು ನಿರುದ್ಯೋಗಿಗಳಾಗಿದ್ದರೂ ಹಾಗೆ ಮಾಡಿದರೆ ಹೇಗೆ? ದಯವಿಟ್ಟು ನಮ್ಮ ಸರ್ಕಾರ ಭೀಷ್ಮ ಪ್ರತಿಜ್ಞೆ ಮಾಡಬೇಕು. ನಮ್ಮ ವೀರಾಧಿವೀರರಾದ ಶ್ರೀ ಚನ್ನಬಸಪ್ಪನವರಿದ್ದಾರೆ. ಇವರೂ ಪ್ರಯತ್ನ ಮಾಡಿ ನಮ್ಮಲ್ಲಿ ನಿರುದ್ಯೋಗ ಸಮಸ್ಯೆಯನ್ನು ಕಡಮೆ ಮಾಡಬೇಕು. ಮೈಸೂರಿನವರಿಗೆ ಕೆಲಸವಿಲ್ಲ ಎನ್ನುವ ಕೊರತೆಯನ್ನು ನಿವಾರಣೆ ಮಾಡಬೇಕು. ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

*Sri Mulka GOVINDA REDDY (Chitaldrug).—Sir, I oppose this demand under the head "Miscellaneous" for Rs. 27,25,500. In

(SRI MULKA GOVINDA REDDY.)

Mysore State, the Beggar Relief Act is in force. Under the provisions of that Act, Government have established a Beggar Relief Colony. I am afraid that all the provisions of this Act have not been put into effect. At any rate, it looks as though they have not put these provisions into effect. Wherever we go, while travelling in the train, in the bus, near bus stands and on pavements, we will be seeing very awful sights of these beggars. It is true that this problem is inter-linked with the existing social structure. Unless the structure is changed, it is well-nigh impossible to put an end to this problem. But all the same, Government should take all steps to see that the nuisance committed by these beggars is immediately stopped ; they should all be hauled up and kept in a colony, in the one already established, and also they shoud be educated to see how best they should earn their living. There are all sorts of beggars - beggars who have been forced to take to this profession, which is a very easy profession. Because of poverty, those in spite of their best efforts do-not secure jobs in Government service or in private employment and are forced to take up to this profession. Some of these beggars come into the Crescent House. They are very peculiar beggars. There is one beggar who always says that he had associated himself with great people in Mysore— I do not want to reveal the name of that gentleman beggar—that he was a lawyer (I know he was not a lawyer) (A VOICE : Liar), yes liar. He comes and takes money from some of us and some of us refuse. Still some of us are forced to pay him sometimes. And, there are others—the religious mendicants—who follow the profession of beggary. Government should take earnest steps to put down this evil.

Regarding the Stores Purchase Committee, all is not well in its affairs. Most of the purchases made on behalf of the Government are to be certified by or should be made through the Stores Purchase Committee. Many a time it so happens that by the time the Stores Purchase Committee calls for tenders and approves them, the very purpose for which these things are asked for will have not been served and many a time some of the departmental grants lapse because the Stores Purchase Committee comes in their way for purchasing their requirements. I know for instance in the Public Works Department last year or year before last, about a crore of rupees was allowed to lapse because all the processes that are required to be gone through there could not be gone through. The Stores Purchase Committee must be whipped up to see that such inordinate delays are not allowed to recur ; and sometimes I understand some discrimination is also shown in regard to supplies to hospitals. Some of the suppliers are black-listed and some persons who supply almost the same materials—cots and other things that are supplied to hospitals in Mysore, are Okayed. This sort of discrimination should not prevail in the Stores Purchase Committee which is supposed to do its work fairly, and properly and in the interest of the Government.

Regarding the land colonisation scheme Sir, in 1940 some educated persons who had undergone training in the Agricultural School and College were settled on the land somewhere near Malavalli. They were given some financial assistance They were also given very fertile lands. But the bungling of the Agricultural Department and other Departments has made these colonists to suffer. They have not been able to settle themselves properly and they have not been able to cultivate the land properly and some of them have almost become non-existent in that colony. I do not know why the Government in spite of reminders and repeated demands made on the floor of this House have not been able to set-right this knotty problem. For the last 16 years, they have been made to suffer so much and the land has gone waste, I should say. I would earnestly. . . .

Dr. R. NAGAN GOWDA (Minister for Agriculture).—How does this arise here, Sir?

Sri Mulka GOVINDA REDDY.—Miscellaneous—P. 132—' Expenditure on land colonisation, etc.'

Regarding the All-India Exhibitions Sir, in Mysore, naturally the Government are conducting this exhibition and are deriving good profits from these exhibitions. Apart from deriving good profits, Governmental products produced in Government industrial concerns are exhibited there, so much so, people coming from all places in India will have an idea of what things are produced and how and where and what exhibits could have an easy sale in their parts. That is a very laudable idea. But while appointing these committees for conducting All-India Exhibitions in Mysore, it is unfortunate that the Ruling Party has its own ways of doing it. In Bangalore also, the Exhibition is conducted every year, not by the Government but by an organisation to which Government owes its allegiance. It is really unfortunate and suicidal that the Government should follow a policy of this nature and place the services of the Government Departments at the disposal of an outside organisation. For furthering the growth of that organisation, and for benefiting and filling the coffers of that organisation, Government lends all its support. All the Departments that are under Government control send their products for exhibition and Government gives all other assistance to the said organisation to conduct this exhibition.

We have also urged on the Government that Government should take up this exhibition also and that they must conduct this exhibition and ahat they should not leave it to a political organisation. . . .

Sri K. PATTABHIRAMAN.—Is it an exhibition or Chikpet transplanted ?

Sri Mulka GOVINDA REDDY.—That is also true. Government products are also placed there for exhibition.

Sir, Government make advances and loans to certain individuals. It is shown here that they want to write off a sum of 0·25 lakh as irrecoverable under temporary loans and advances that they have made to certain individuals. I do not know why they want to write off a huge sum of Rs. 25,000. Some responsibility should be fixed on these persons for granting these loans to these persons. Instead of fixing responsibility, Government take the easy course of asking the permission of the Legislature to write off this advance and loans. I would earnestly urge that proper responsibilities should be fixed and such a procedure should not be repeated.

I therefore oppose this Demand, Sir.

* ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ವಿವಿಧ ಬಾಬುಗಳ ಬಗ್ಗೆ ಮಂಡಿಸಿರತಕ್ಕ ಡಿಮ್ಯಾಂಡನ್ನು ಸ್ವಾಗತಿಸುತ್ತ ಒಂದಂಶದ ಕಡೆಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಮೈಸೂರು ಸಂಸ್ಥಾನದಲ್ಲಿನ ಭಿಕ್ಷುಕರ ಸಮಸ್ಯೆ ಕುರಿತು ಕೆಲವು ವಿಷಯಗಳನ್ನು ಹೇಳುತ್ತೇನೆ. ಹಿಂದೆ ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದರು. ಆ ಸಮಿತಿಯವರು ನಾನಾ ವಿಧವಾದ ಪ್ರಶ್ನಾವಳಿಗಳ ಮೂಲಕ ಸಂಸ್ಥಾನದ ಅನೇಕ ಜನ ತಜ್ಞರ ಅಭಿಪ್ರಾಯವನ್ನು ಸಂಗ್ರಹಿಸಿ ಅವುಗಳಲ್ಲಿ ಕೆಲವನ್ನು ಐದಾರು ವರ್ಷಗಳ ಹಿಂದೆ ಶಿಫಾರಸು ಮಾಡಿದರು. ಆಗ ಸರ್ಕಾರದವರ ಲಕ್ಷ್ಯ ಭಿಕ್ಷುಕರ ಕಡೆ ಬಿದ್ದು ಇಂದಲ್ಲದಿದ್ದರೆ ನಾಳೆ ಭಿಕ್ಷಾಟನೆಯನ್ನು ಸಂಪೂರ್ಣವಾಗಿ ನಿರೋಧಗೊಳಿಸಬಹುದೆಂದು ಭಾವಿಸಿದೆವು. ಹಾಗೆ ಭಿಕ್ಷಾಟನೆಯನ್ನು ನಿರೋಧಗೊಳಿಸುವ ಸಂದರ್ಭದಲ್ಲಿ ಕಾರಣಾಂತರದಿಂದ ಭಿಕ್ಷಾಟನೆ ವೃತ್ತಿಯಲ್ಲಿ ತೊಡಗಿರತಕ್ಕ ಸಹೋದರ ಸಹೋದರಿಯರ ಮತ್ತು ಮಕ್ಕಳ ಯೋಗಕ್ಷೇಮವನ್ನು ನೋಡಿ ಅವರನ್ನು ಈ ವೃತ್ತಿಯಿಂದ ತಪ್ಪಿಸುವುದು ಅಗತ್ಯವೆಂದು ಭಾವಿಸಿ ಬೆಂಗಳೂರು ನಗರದಲ್ಲಿ ಒಂದು ಪರಿಹಾರ ಕೇಂದ್ರವನ್ನು ಕೂಡ ಪ್ರಾರಂಭಿಸಿದರು. ಆದರೆ ಆ ಕೆಲಸ ಅಷ್ಟಕ್ಕೆ ನಿಲ್ಲಬಾರದಾಗಿತ್ತು. ನಾವು ಪ್ರತಿವರ್ಷದ ಬಡ್ಜೆಟ್ಟನ್ನೂ ನೋಡಿದರೆ, ಕೇವಲ ಒಂದು ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಒದಗಿಸುತ್ತಿದ್ದಾರೆ. ಈಗ ನಾವು ಒಂದು ಸಮತಾವಾದ ಮಾದರಿಯ ಸಮಾಜ ಧ್ಯೇಯವನ್ನು ಅಂಗೀಕರಿಸಿದ ಮೇಲಂತೂ ಈ ವಿಧವಾದ ನಿರ್ಗತಿಕರಾದ ಜನಗಳು ಎಲ್ಲೆಲ್ಲೂ ನಮ್ಮ ದೃಷ್ಟಿಗೆ ಹೆಚ್ಚಾಗಿ ಬೀಳಬೇಕಾಗಿದೆ. ಅವರ ಯೋಗಕ್ಷೇಮದ ಕಡೆ ನಾವು ಬಹಳ ಶ್ರಮಿಸಬೇಕಾಗಿದೆ. ಯಾವ ಕಾರಣಕ್ಕೋಸ್ಕರ ಅವರುಗಳು ಭಿಕ್ಷಾಟನೆಗೆ ತೊಡಗಿದರು ಎಂಬುದನ್ನು ನಾವುಗಳು ತಿಳಿದು ಅಂಥ ಕಾರಣಗಳನ್ನು ಬಗೆಹರಿಸುವ ಕಾರ್ಯದಲ್ಲಿ ನಮ್ಮ ಸರ್ಕಾರದವರು ಕೊಡುಗೈಯಿಂದ ಮುಂದೆ ಬರುವುದಿಲ್ಲವೋ ಅಲ್ಲಿಯವರೆಗೆ ನಾವು ಭಿಕ್ಷಾಟನೆಯನ್ನು ಪೂರ್ಣವಾಗಿ ನಿರೋಧಗೊಳಿಸುವುದಕ್ಕೆ ಶಕ್ತರಾಗುವುದಿಲ್ಲ ; ಅಲ್ಲಿಯವರೆಗೂ ನಮ್ಮ ಸಮತಾವಾದ ಮಾದರಿಯ ಸಮಾಜದ ಧ್ಯೇಯವನ್ನು ನಾವು ಕಾರ್ಯರೂಪಕ್ಕೆ ತಂದಂತಾಗುವುದಿಲ್ಲ. ಆದುದರಿಂದ ಈ ವರ್ಷ ಅಗತ್ಯವಾಗಿ ಹೆಚ್ಚು ಹಣವನ್ನು ಒದಗಿಸಬೇಕಾದದ್ದು ಕರ್ತವ್ಯ. ಈ ಭಿಕ್ಷಾಟನೆಯನ್ನು ನಿರೋಧಗೊಳಿಸತಕ್ಕ ಕಾರ್ಯಕ್ಕೆ ಸಾಕಷ್ಟು ಹಣವನ್ನು ಈ ಆಯವ್ಯಯ ಪಟ್ಟಿಯಲ್ಲಿ ಒದಗಿಸಿಲ್ಲವೆನ್ನುವುದನ್ನು ಮಾತ್ರ ಖಂಡಿತವಾಗಿ ಹೇಳಬಹುದು.

(ಶ್ರೀ ಬಿ. ಮಾಧವಾಚಾರ್.)

ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ರೀತಿ ಅನೇಕ ಕಾರ್ಯಗಳಿಗಾಗಿ ಹೆಚ್ಚಿನ ಹಣವನ್ನು ಕೇಂದ್ರ ಸರ್ಕಾರದವರು ಕೂಡ ಒದಗಿಸಿರುವುದು ಕಾಣಬರುತ್ತದೆ. ಲಕ್ನೋ, ಮದರಾಸ್, ಮುಂತಾದ ಕಡೆಗಳಲ್ಲಿ ಈ ಭಿಕ್ಷಾಟನೆ ನಿರೋಧದ ಬಗ್ಗೆ ತೀವ್ರವಾದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಸಮಿತಿಯವರು ಮಾಡಿರುವ ಶಿಫಾರ್ಸುಗಳು ನನಗೆ ಗೊತ್ತಿಲ್ಲ. ನನ್ನ ಒಂದು ಪ್ರಶ್ನೆಗೆ ಉತ್ತರವಾಗಿ ಸಮಿತಿಯವರ ಶಿಫಾರ್ಸುಗಳು ಕಾರ್ಯಾಚರಣೆಯಲ್ಲಿವೆ ಎಂದು ಮಾತ್ರ ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಸಂಸ್ಥಾನದಲ್ಲಿ ಎಲ್ಲ ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿ, ಏಕೆ—ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿಯೂ ಕೂಡ, ಪರಿಹಾರ ಕೇಂದ್ರಗಳನ್ನು ತೆರೆದು, ಅಲ್ಲಿ ಭಿಕ್ಷಾಟನೆ ಮಾಡತಕ್ಕವರನ್ನು ಬಲಾತ್ಕಾರವಾಗಿ ತೆಗೆದುಕೊಂಡು ಹೋಗಿ ಆ ಕೇಂದ್ರಗಳಲ್ಲಿಟ್ಟು, ಅವರಿಗೆ ವೃತ್ತಿ ಶಿಕ್ಷಣಗಳನ್ನು ಕೊಡಬೇಕು. ಅಂಗಹೀನರಾದವರಿಗೆ ಜಿಲ್ಲಾ ಕೇಂದ್ರಗಳಲ್ಲಿ ಅಥವಾ ಸಂಸ್ಥಾನದಲ್ಲಿ ಕೆಲವಾರು ಪ್ರದೇಶಗಳಲ್ಲಿ ಪರಿಹಾರ ಕೇಂದ್ರಗಳನ್ನು ತೆರೆದು, ಅವರನ್ನು ಅಂಥ ಕೇಂದ್ರಗಳಲ್ಲಿ ಕಾಪಾಡುವ ವ್ಯವಸ್ಥೆಯನ್ನು ಮಾಡಬೇಕು. ಈ ಕಾರ್ಯಗಳಿಗೆ ಪೌರಸಭೆಗಳ, ಸ್ಥಳೀಯಸಂಸ್ಥೆಗಳ ಅಗತ್ಯವಿದ್ದಲ್ಲಿ ಸೇವಾಶ್ರಮಗಳು ಮತ್ತು ಇತರ ಕ್ಷೇತ್ರಗಳ ಸಹಕಾರ ಪಡೆದು ಸಂಸ್ಥಾನಗಳಲ್ಲಿ ಒಂದು ಮಾದರಿಯಾಗುವ ರೀತಿಯಲ್ಲಿ, ಮೈಸೂರು ಸಂಸ್ಥಾನ ಅನೇಕ ಕೆಲಸಕಾರ್ಯಗಳಲ್ಲಿ 'ಮಾದರಿ ಸಂಸ್ಥಾನ' ವೆಂದು ಕೀರ್ತಿಯನ್ನುಗಳಿಸಿದಂತೆ ಈ ಭಿಕ್ಷಾಟನೆಯ ನಿರೋಧ ಶಾಸನದ ಕಾರ್ಯಾಚರಣೆಯಲ್ಲಿ ಕೂಡ ಬಹಳ ಮುಂದುವರಿದ ರೀತಿಯಲ್ಲಿ ಈ ಪ್ರಶ್ನೆಯನ್ನು ಬಗೆ ಹರಿಸಿದ ಕೀರ್ತಿಯನ್ನು ಗಳಿಸುವುದಕ್ಕೆ ಸಹಾಯಕವಾಗುವಂತೆ, ನಮ್ಮ ಸರ್ಕಾರದವರು ವ್ಯವಸ್ಥೆಯನ್ನು ಮಾಡಬೇಕೆಂದು ಆಶಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಕೆಲಸ ಮಾಡತಕ್ಕ ರೀತಿಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಎಂಬುದು ಈಚೆಗೆ ನೇಮಕವಾದ ಒಂದು ಸಂಸ್ಥೆ. ಅದರಲ್ಲಿ ಪ್ರತಿ ತಿಂಗಳೂ ಕೆಲಸಗಳನ್ನು ಕೊಡುತ್ತಾರೆ. ಇಷ್ಟು ಜನ ಕೆಲಸವಿಲ್ಲದವರು ತಮ್ಮ ಹೆಸರುಗಳನ್ನು ರಿಜಿಸ್ಟರು ಮಾಡಿಸಿಕೊಂಡರು, ಇಷ್ಟು ಜನರಿಗೆ ಕೆಲಸ ಸಿಕ್ಕಿದೆ ಎಂದು ಆಗಾಗ್ಗೆ ತಿಳಿಸುತ್ತಾರೆ. ಆದರೆ ಅದನ್ನು ನೋಡಿದರೆ ನಮ್ಮ ದೇಶದಲ್ಲಿ ಇಷ್ಟು ಕಡಮೆ ಕೆಲಸವಿಲ್ಲದಿರುವವರಿದ್ದಾರೆಯೆ ಎಂದು ಅನುಮಾನ ಬರುತ್ತದೆ. ಈ ಅಂಕಿಅಂಶ ಸರಿಯಾಗಿರುವಂತೆ ಕಂಡು ಬರುತ್ತಿಲ್ಲ. ಆದ್ದರಿಂದ ನಿಜವಾದ ಲೆಕ್ಕ ಸರಿಯಾಗಿ ಕೊಡಬೇಕಾದರೆ ಯಾವರೀತಿ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ರಚನೆಯನ್ನು ಬದಲಾಯಿಸಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ.

ಇನ್ನೊಂದು ವಿಷಯ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಕೆಲಸವಿಲ್ಲದಿರುವವರು ಹೋಗಿ ತಮ್ಮ ಹೆಸರನ್ನು ರಿಜಿಸ್ಟರು ಮಾಡಿಸಿಕೊಳ್ಳುತ್ತಾರೆ. ಆದರೆ ಇದೇ ರೀತಿಯಲ್ಲಿ ಕೈಗಾರಿಕಾ ಸಂಸ್ಥೆಗಳಲ್ಲೂ ಇಷ್ಟು ಕೆಲಸ ಖಾಲಿಯಾದುವು, ಇಷ್ಟು ಕೆಲಸಗಳಿಗೆ ಇಷ್ಟುಜನರನ್ನು ಸೇರಿಸಬೇಕಾಗುತ್ತದೆ ಎಂಬ ಲೆಕ್ಕವನ್ನು ಜನರಿಗೆ ಗೊತ್ತಾಗುವ ರೀತಿಯಲ್ಲಿ ತಿಳಿಸಬೇಕು. ಅದು ಈಗ ಈ ರೀತಿ ಆಗುತ್ತಿಲ್ಲ. ಒಂದು ತರಹ ಲೆಕ್ಕ ಮಾತ್ರ ಸಿಕ್ಕುತ್ತಿದೆ. ಎಷ್ಟು ಕೆಲಸ ಸಿಕ್ಕಿತ್ತೆಂಬುದಕ್ಕೆ ಈಗ ಲೆಕ್ಕ ದೊರೆಯುತ್ತಿಲ್ಲ.

ಮತ್ತೊಂದು ಮೈಸೂರಿನಲ್ಲಿರುವ ಕೈಗಾರಿಕಾ ಸಂಸ್ಥೆಗಳಲ್ಲಿ, ಬೆಂಗಳೂರಿನಲ್ಲಿರುವ ಕೈಗಾರಿಕಾ ಸಂಸ್ಥೆಗಳಲ್ಲಿ ಯಾರನ್ನು ನೇಮಕಮಾಡಬೇಕೆಂಬುದಕ್ಕೆ ಏನಾದರೂ ನಿಬಂಧನೆಯಿದೆಯೆ? ನಮ್ಮ ಮೈಸೂರು ಸಂಸ್ಥಾನದಲ್ಲಿರುವ ಇಷ್ಟು ಜನರನ್ನು ತೆಗೆದುಕೊಳ್ಳಬೇಕು, ಇಷ್ಟು ಜನ ಮೈಸೂರಿನವರಾಗಿರಬೇಕು ಎಂದು ಯಾವ ನಿಬಂಧನೆಯೂ ಇಲ್ಲ. ಸಾಮಾನ್ಯವಾಗಿ ಬೆಂಗಳೂರಿನಲ್ಲಿ ದೊಡ್ಡ ಕೈಗಾರಿಕೆಗಳಿವೆ. ಅವುಗಳಲ್ಲಿ ಬೆಂಗಳೂರು ಸಿಟಿಯವರಿಗೆ ಮತ್ತು ಮೈಸೂರು ಸಂಸ್ಥಾನದವರಿಗೆ ಸ್ವಲ್ಪ ಮಟ್ಟಿಗಾದರೂ ಕೆಲಸ ದೊರೆತು ಅವರ ನಿರುದ್ಯೋಗ ಸಮಸ್ಯೆ ಪರಿಹಾರವಾಗಬೇಕೆಂದು ನಿರೀಕ್ಷೆ ಮಾಡುವುದು ಸಹಜವಾಗಿಯೇ ಇದೆ. ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಾಗಲಿ, ಟೆಲಿಫೋನ್ ಕಾರ್ಖಾನೆಯಲ್ಲಾಗಲಿ, ಭಾರತ್ ಎಲೆಕ್ಟ್ರಾನಿಕ್ಸ್‌ನಲ್ಲಾಗಲಿ, ಇಂಥ ಸಂಸ್ಥೆಗಳಲ್ಲಾಗಲಿ ಮೈಸೂರಿನ ಎಷ್ಟು ನಿರುದ್ಯೋಗಿಗಳಿಗೆ ಗೌರವ ಸಿಕ್ಕುತ್ತಿದೆ, ಎಷ್ಟು ಮಟ್ಟಿಗೆ ಕೆಲಸ ಸಿಕ್ಕುತ್ತಿದೆ ಎಂಬ ವಿಷಯವನ್ನು ಗಮನಿಸಿ ಸರ್ಕಾರ ಏನೂ ಏರ್ಪಾಡು ಮಾಡಿಲ್ಲ. ಈ ವಿಷಯದಲ್ಲಿ ನಮ್ಮ ದೇಶದವರ ಹಿತವನ್ನು ರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯ. ಆದ್ದರಿಂದ ಅವರು ಈ ವಿಷಯದಲ್ಲಿ ಇಂಡಿಯಾ ಸರ್ಕಾರದೊಂದಿಗೆ ಒಂದು ರೀತಿಯಾದ ವಿಚಾರವಿನಿಮಯ ಮಾಡಿಕೊಂಡು ಯಾವರೀತಿಯಾಗಿ ಮೈಸೂರಿನವರಿಗೆ,—ಅರ್ಹರಾದವರನ್ನು ತೆಗೆದುಕೊಳ್ಳಲಿ, ಅನರ್ಹರನ್ನು ತೆಗೆದುಕೊಳ್ಳಬೇಕಾಗಿಲ್ಲ—ಅರ್ಹರಾದವರಿಗೆ ಸಾಕಾದಷ್ಟು ಸ್ಥಾನ ದೊರೆಯುವಂತೆ ಮಾಡಬೇಕು ಎಂದು ಸ್ವಲ್ಪ ಯೋಚನೆಮಾಡಿ ಏರ್ಪಾಡು ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಭಿಕ್ಷುಕರ ಕಾಲೊನಿ ವಿಚಾರ ನೋಡೋಣ. ಅದನ್ನು ವಜಾ ಮಾಡಿದರೆ ನಮಗೆ ಒಂದು ಲಕ್ಷವೋ ಏನೋ ಉಳಿಯುತ್ತದೆ. ಬೆಂಗಳೂರು ಸಿಟಿಯಲ್ಲಿ ಭಿಕ್ಷುಕರ ಭಿಕ್ಷಾವೃತ್ತಿಯನ್ನು ಹೋಗಲಾಡಿಸುವುದಕ್ಕೆ ಮಾಗಡಿ ರಸ್ತೆಯಲ್ಲಿ ಒಂದು ಆಲಯವನ್ನು ಮಾಡಿದ್ದಾರೆ. ಮತ್ತು ಅಲ್ಲಿ ಕೆಲವರನ್ನು ಈಗ ಇಡುತ್ತಾರೆ. ಆದರೆ ಅಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಾಗಲಿ ಅಥವಾ ಮೇಲ್ವಿಚಾರಣೆ ನೋಡಿಕೊಳ್ಳುವ ಕಾರ್ಯದರ್ಶಿಗಳಾಗಲಿ, ಅಥವಾ ಮಂತ್ರಿಗಳಾಗಲಿ ಅಲ್ಲಿನ ಕೆಲಸ ನೋಡಿ ಅದಕ್ಕಾಗಿ ಖರ್ಚಾಗುತ್ತಿರುವುದು ಸಾರ್ಥಕವಾಗುತ್ತಿದೆಯೇ ಎಂದು ನೋಡಿದ್ದಾರೆಯೆ? ಬೆಂಗಳೂರಿನಲ್ಲಿ ಈ ಭಿಕ್ಷಾವೃತ್ತಿ ಮಾಯವಾಗಿಲ್ಲ, ಮನೆಗಳಲ್ಲಿ ಭಿಕ್ಷುಕರು ಬಂದು ಕಾಟವನ್ನುಂಟು ಮಾಡುವುದು ತಪ್ಪಿಲ್ಲ, ಮತ್ತು ಭಿಕ್ಷುಕರು ಕಾಲೊನಿಗೆ ಹೋಗಿ ಅಲ್ಲಿ ಸಂತೋಷದಿಂದ ಇದ್ದರೆ, ಪರವಾಗಿಲ್ಲ, ಒಂದು ತರಹ ವ್ಯವಸ್ಥೆ ಮಾಡಿದ್ದಾರೆ ಎಂದು ಹೇಳಬಹುದು; ಆದರೆಹಾಗೆ ಹೇಳುವ ಹಾಗಿಲ್ಲ. ಅವರಿಗೂ ತೃಪ್ತಿಯಿಲ್ಲ. ಒಂದೊಂದು ಸಾರಿ ವ್ಯಾನ್ ತಂದು ನಾಯಿಗಳನ್ನು ಹಿಡಿದುಕೊಂಡು ಹೋಗುವಹಾಗೆ ಭಿಕ್ಷುಕರನ್ನು ಹಿಡಿದು ಅದರಲ್ಲಿ ತುಂಬಿಕೊಂಡು ಹೋಗುತ್ತಾರೆ. ಪುನಃ ಆ ಭಿಕ್ಷುಕರು ಬೀದಿಗೆ ವಾಪಸು ಬರುತ್ತಾರೆ. ಈ ಸಂದರ್ಭದಲ್ಲಿ ಒಂದು ತಮಾಷೆ ನಡೆದುದನ್ನು ಹೇಳುತ್ತೇನೆ. ನಮ್ಮಲ್ಲಿ ಭಿಕ್ಷಾವೃತ್ತಿಯೆಂಬುದು ಮತಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಅದು ಬರೀ ನಿರುದ್ಯೋಗಕ್ಕೆ ಸಂಬಂಧಪಟ್ಟಿರುವ ಪ್ರಶ್ನೆಯಲ್ಲ. ಒಂದು ಶ್ರಾವಣ ಶನಿವಾರದ ದಿನ ಎರಡು ಚಿಕ್ಕ ಹುಡುಗರಿಗೆ ನಾಮ ಹಾಕಿ ಕೈಗೆ ಪಾತ್ರೆಕೊಟ್ಟು ಕಳುಹಿಸಿದರು.

ಅವರಿಬ್ಬರೂ 'ಶ್ರೀನಿವಾಸಾಯ ಮಂಗಳಂ' ಎಂದು ಹೇಳಿಕೊಂಡು ಮನೆಗೆ ಹೋಗುತ್ತಿದ್ದರು. ಆಗ ವ್ಯಾನ್ ಬಂದು ಭಿಕ್ಷುಕರನ್ನು ಕರೆದುಕೊಂಡು ಹೋಗುವಂತೆ ಆ ಹುಡುಗರನ್ನು ಕರೆದುಕೊಂಡು ಹೋಯಿತು. ಈ ರೀತಿಯಾಗಿ ಮಕ್ಕಳು ಮನೆಗೆ ಬಾರದೆ ತಂದೆ ತಾಯಿಗಳಿಗೆ ಯೋಚನೆಯಾಯಿತು, ಮಕ್ಕಳೂ ಹೋದರು, ಪಾತ್ರೆಯೂ ಸಹ ಹೋಯಿತು. ಕಡೆಗೆ ಅವರು ವಾಪಸು ಬಂದರು. ಹೀಗೆ ನಮ್ಮ ದೇಶದಲ್ಲಿ ಸನ್ಯಾಸಿಗಳು, ಬೈರಾಗಿಗಳು, ಮತ ಸಂಪ್ರದಾಯ ಉಳ್ಳವರು ಆಗಾಗ್ಗೆ ಭಿಕ್ಷಾವೃತ್ತಿಯನ್ನು ನಡೆಸುತ್ತಾರೆ. ಇದನ್ನು ಕಾನೂನು ಮಾಡಿ ತಪ್ಪಿಸುವುದಕ್ಕಾಗುವುದಿಲ್ಲ. ಅದರಲ್ಲೂ ಹಿಂದೂ ಮತ್ತು ಮುಸ್ಲಿಂ ಸಮಾಜದಲ್ಲಿ ಇದು ಜಾಸ್ತಿ. ಮಹಮದೀಯರಲ್ಲಿ ಭಿಕ್ಷುಕರಿಗೆ ಸಹಾಯ ಮಾಡುವುದು, ಧರ್ಮ ಮಾಡುವುದು ಕಡ್ಡಾಯವಾಗಿದೆ. ಆದ್ದರಿಂದ ನಮ್ಮ ದೇಶದಲ್ಲಿ ಬೆಂಗಳೂರಿನಲ್ಲಿ ಮಾಡಿರುವ ರೀತಿಯಲ್ಲಿ ಒಂದು ಭಿಕ್ಷುಕರ ಆಲಯವನ್ನು ತೆರೆದು ಭಿಕ್ಷಾವೃತ್ತಿಯನ್ನು ನಿರ್ಮೂಲ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ನನ್ನ ಸಲಹೆ, ಈ ರೀತಿ ಭಿಕ್ಷುಕರ ಆಲಯಗಳನ್ನು ನಡೆಸದೆ ಅನಾಥಾಶ್ರಮಗಳು, ಅಬಲಾಶ್ರಮಗಳು ಇಂಥವುಗಳೇನಿವೆಯೋ ಅವುಗಳಿಗೆ ಗ್ರಾಂಟು ಕೊಟ್ಟು ವಿವೇಚನೆಯಿಂದ ಈ ವೃತ್ತಿಗೆ ತಡೆ ಮಾಡಬೇಕು. ಸರ್ಕಾರದಿಂದ ನಿರರ್ಥಕವಾಗಿ ಹಣ ಖರ್ಚುಮಾಡಿ ಸಮಾಜದಲ್ಲಿರುವ ಲೋಪದೋಷಗಳನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲದಂಥ ಈಗ ಮಾಡಿರುವ ಏರ್ಪಾಡು ಸರಿಯಲ್ಲ. ಇದನ್ನು ಬದಲಾಯಿಸಬೇಕು.

ಇನ್ನೊಂದು ವಿಷಯವೇನೆಂದರೆ, ನಮ್ಮ ದೇಶದಲ್ಲಿ ಬಡತನ ಬಹಳವಾಗಿದೆ. ಅದನ್ನು ಹೋಗಲಾಡಿಸುವುದಕ್ಕೆ ಮತ್ತು ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವುದಕ್ಕೆ ಸರಿಯಾದ ಏರ್ಪಾಡು ಮಾಡಿದರೆ ಬಹಳಮಟ್ಟಿಗೆ ಭಿಕ್ಷಾವೃತ್ತಿ ತಪ್ಪುತ್ತದೆ. ಈಗ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಸ್ಥಾಪನೆ ಮಾಡಬೇಕೆಂದು ಹೇಳುತ್ತಿದ್ದೇವೆ. ಆ ಸೊಸೈಟಿ ಸ್ಥಾಪನೆಯಾದಾಗ ಅದರಲ್ಲಿ ಭಿಕ್ಷಾವೃತ್ತಿಗೆ ಯಾವ ಸ್ಥಾನವಿದೆಯೆಂದು ಯೋಚನೆ ಮಾಡಬಹುದು. ಈಗ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಬರುವುದಕ್ಕೆ ಬಹಳ ಕಾಲವಿದೆ. ಅದು ಬರುವುದಕ್ಕೆ ಮುಂಚೆ ಭಿಕ್ಷಾವೃತ್ತಿ ತಡೆಯಬೇಕಾದರೆ ಹೆಚ್ಚು ಪರಿಣಾಮಕಾರಿಯಾದ ಕಾರ್ಯವನ್ನು ಸಾರ್ವಜನಿಕರ ಸಹಕಾರ ಪಡೆದು ಮಾಡಬೇಕಾಗುತ್ತದೆ ಎಂಬುದಾಗಿ ನಾನು ಸಲಹೆ ಮಾಡುತ್ತೇನೆ.

Resignation of a Member.

Mr. SPEAKER.—Before the House adjourns for lunch, I want to make an announcement—an unpleasent announcement no doubt.

As required under rule 177, the Chair desires to announce that Sri Gangappa, a member representing Bellary, has resigned his seat in the Assembly.

Now the House will rise for lunch and meet again at 3-30 P.M.

The House adjourned at Three of the Clock and re-assembled after Lunch at Thirty-six Minutes past Three of the Clock.

[MR. DEPUTY SPEAKER in the Chair]

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು-ಉತ್ತರ-ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ನಮ್ಮ ಮೈಸೂರು ಸರ್ಕಾರದ ಈ ಸ್ಟೋರ್ಸ್ ಪರ್ಚೇಸ್ ಕಮಿಟಿಯ ವಿಚಾರವಾಗಿ ಒಂದೆರಡು ಅಂಶಗಳನ್ನು ಈಗ ಈ ಮಾನ್ಯಸಭೆಯ ಗಮನಕ್ಕೆ ತರಬೇಕೆಂದು ಬಯಸಿದ್ದೇನೆ. ಈ ದಿವಸ ಮೈಸೂರು ದೇಶದಲ್ಲಿರತಕ್ಕಂಥ ನಮ್ಮ ನಾನಾ ಇಲಾಖೆಗಳಿಗೆ ಬೇಕಾಗತಕ್ಕ ಸಾಮಾನುಗಳನ್ನು ಕೊಂಡುಕೊಳ್ಳಬೇಕಾಗಿದ್ದರೆ ಆ ಸಾಮಾನುಗಳ ಬಗ್ಗೆ ಟೆಂಡರುಗಳನ್ನು ಕರೆದು ಆ ಸಾಮಾನುಗಳನ್ನು ಯಾವ ಕಂಪೆನಿಯವರು ಇಲ್ಲವೇ ಯಾವ ಫರ್ಮುಗಳವರು ಇತರ ಉದ್ಯಮಗಳವರ ಬೆಲೆಗಿಂತ ಕಡಮೆ ದರದಲ್ಲಿ ಒದಗಿಸುತ್ತಾರೋ ಅಂಥವರಿಂದ ಕೊಂಡುಕೊಳ್ಳಬೇಕೆಂದು ಒಂದು ವಿಧಾಯಕ ಮಾಡಿದ್ದಾರೆ. ಆದರೆ ಈ ದಿವಸ ಕೆಲವು ಇಲಾಖೆಗಳು ತಮಗೆ ಬೇಕಾಗುವಂಥ ಸಾಮಾನುಗಳನ್ನು ಕೊಂಡುಕೊಳ್ಳುವಾಗ ಈ ರೀತಿ ಯಾವ ಟೆಂಡರುಗಳನ್ನೂ S.P.C. ಮೂಲಕ ಕರೆಯದೆ ಹಾಗೆ ಆ ಇಲಾಖೆಯವರೇ ನೇರವಾಗಿ ಟೆಂಡರ್ ಕರೆದು ಸಾಮಾನುಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಈ ಸಾಮಾನುಗಳನ್ನು ಇಲಾಖೆಯವರೇ ನೇರವಾಗಿ ಕೊಳ್ಳದೆ ಅವುಗಳನ್ನು ವಿಧಾಯಕವಾಗಿರತಕ್ಕ ರೀತಿಯಲ್ಲಿ S.P.C. ಮೂಲಕ ಟೆಂಡರ್ ಕರೆದು ಕೊಂಡುಕೊಂಡರೆ ಇಲಾಖೆಯವರು ಕರೆಯತಕ್ಕ ಟೆಂಡರ್ ಬೆಲೆಗಿಂತಲೂ S.P.C. ಟೆಂಡರಿನ ಬೆಲೆಗಳು ಜಾಸ್ತಿ ಇರುತ್ತವೆ. ಉದಾಹರಣೆಗೆ ಹೇಳುವುದಾದರೆ ಒಂದಾವರ್ತಿ ಎಲೆಕ್ಟ್ರಿಕಲ್ ಇಲಾಖೆಗೆ ಕೆಲವು ಕಂಬಗಳು ಬೇಕಾಗಿತ್ತು. ಆಗ ಈ ಇಲಾಖೆಯವರೇ ನೇರವಾಗಿ ಟೆಂಡರುಗಳನ್ನು ಕರೆದರು. ಆಗ 25 ರೂಪಾಯಿಗಳಿಗೆ ಒಂದು ಕಂಬವನ್ನು ಸರಬರಾಯಿ ಮಾಡುತ್ತೇವೆಂದು ಟೆಂಡರುಗಳು ಬಂದವು. ಅದೇ ಕಂಬಗಳ ಬಗ್ಗೆ ಮತ್ತೊಂದು ಕಡೆಯಲ್ಲಿ ಈ S.P.C. ಮೂಲಕವೂ ಟೆಂಡರುಗಳನ್ನು ಕರೆಯಲಾಗಿತ್ತು. ಆದರೆ ಇಲಾಖೆಯವರು ಕರೆದಿದ್ದ ಟೆಂಡರುಗಳ ಪ್ರಕಾರ 25 ರೂಪಾಯಿಗಳಿಗೇ ದೊರೆಯುತ್ತಿದ್ದಂಥ ಕಂಬಗಳನ್ನು S.P.C. ಟೆಂಡರುಗಳ ಪ್ರಕಾರ 28 ರೂಪಾಯಿಗಳಿಗೊಂದು ಕಂಬದಂತೆ ಕೊಳ್ಳಬೇಕಾಯಿತು. ಹೀಗೆ S.P.C. ಟೆಂಡರ್ ಪ್ರಕಾರ ಒಂದೊಂದು ಕಂಬಕ್ಕೂ ಮೂರು ರೂಪಾಯಿಗಳನ್ನು ಹೆಚ್ಚಿಗೆ ಕೊಡಬೇಕಾಗಿ ಬಂತು. ಈ ವಿಧಾನದಲ್ಲಿ ಕಾಲಹರಣೆಯೂ ಆಗಿ ಒಂದು ತಿಂಗಳಿನೊಳಗೆ ಆಗತಕ್ಕಂಥ ಕೆಲಸಕ್ಕೆ ಒಂದು ವರ್ಷ ಹಿಡಿಯಿತು. ಹೀಗೆ ಕಾಲಮೀರಿ ಹೋದದ್ದರಿಂದ ಆ ಹಣವೂ ಲ್ಯಾಪ್ಸಾಗಿ ಹೋಯಿತು. ಕೊನೆಗೆ ಆ ಕೆಲ

(ಶ್ರೀ ಆರ್. ಮುನಿಸ್ವಾಮಯ್ಯ.)

ಸವೂ ನಿಂತುಹೋಗುವ ಹಾಗಾಯಿತು. ಆದುದರಿಂದ ಇನ್ನು ಮುಂದಕ್ಕೆ ಯಾವ ವಿಧಾನದಲ್ಲಿ ಸಾಮಾನುಗಳು ಜಾಗ್ರತೆ ದೊರೆಯುತ್ತವೆಯೋ, ಎಂದರೆ, ಕಡಮೆ ಬೆಲೆಯಲ್ಲಿ ಇಲಾಖೆಯವರೇ ನೇರವಾಗಿ ಕರೆದ ಟೆಂಡರುಗಳು ಆ S.P.C. ಇಲಾಖೆಯರ ಟೆಂಡರ್‌ಗಳಿಗಿಂತ ಕಡಮೆ ದರದಲ್ಲಿ ಜಾಗ್ರತೆ ಸಾಮಾನುಗಳು ದೊರೆಯುವ ಪಕ್ಷಕ್ಕೆ ಈ S.P.C. ಮೂಲಕವೇ ಸಾಮಾನುಗಳನ್ನು ತರಿಸಿಕೊಳ್ಳಬೇಕೆಂಬ ನಿರ್ಬಂಧವನ್ನು ಸಡಿಲಮಾಡಿ, ಕಡಮೆ ಬೆಲೆಯಲ್ಲಿ ಯಾರು ಸಾಮಾನುಗಳನ್ನು ಒದಗಿಸುತ್ತಾರೋ ಅವರ ಮೂಲಕ ತೆಗೆದುಕೊಳ್ಳುವಂತೆ ಒಂದು ಏರ್ಪಾಡು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಇಲಾಖೆಯ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕಾಗಿದೆ. ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಇಲಾಖೆಯನ್ನು ಮೈಸೂರು ಸರ್ಕಾರ ಸಂಬಳ ಸಾರಿಗೆಗಳನ್ನು ಕೊಟ್ಟು ಇಟ್ಟುಕೊಂಡಿದೆ. ಸಹಸ್ರಾರು ಜನರು ಪ್ರತಿವರ್ಷವೂ ತಮ್ಮ ಹೆಸರುಗಳನ್ನು ಈ ಇಲಾಖೆಯಲ್ಲಿ ರಿಜಿಸ್ಟರ್ ಮಾಡಿಸುತ್ತಲೇ ಇದ್ದಾರೆ. ಕೆಲವರು ಪ್ರತಿವರ್ಷವೂ ತಮ್ಮ ಹೆಸರುಗಳನ್ನು ರಿನ್ಯೂ ಮಾಡಿಸಿಕೊಳ್ಳುತ್ತಲೇ ಇದ್ದಾರೆ. ಆದರೆ ಈ ತಹಲ್‌ವರೆಗೂ ಈ ಎಕ್ಸ್‌ಛೇಂಜ್ ಇಲಾಖೆಯವರು ಯಾರಿಗೇ ಆಗಲಿ ಯಾವ ಸರ್ಕಾರಿ ನೌಕರಿಗಳನ್ನೇ ಆಗಲಿ ಅಥವಾ ಬೇರೆ ಈ ಕೈಗಾರಿಕಾ ಕ್ಷೇತ್ರದಲ್ಲೇ ಆಗಲಿ ಯಾರಿಗೂ ಯಾವ ನೌಕರಿಗಳನ್ನೂ ದೊರಕಿಸಿ ಕೊಟ್ಟಿರುವಂತೆ ಕಂಡುಬರುವುದಿಲ್ಲ. ಇಷ್ಟೇ ಅಲ್ಲದೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಇಲಾಖೆ ಮೂಲಕ ಹೋಗತಕ್ಕ ಜನರನ್ನು ಎಲ್ಲಿಯೂ ಕೆಲಸಕ್ಕೆ ಸೇರಿಸಿ ಕೊಳ್ಳುತ್ತಿಲ್ಲವೆಂಬ ದೂರು ಎಲ್ಲೆಲ್ಲಿಯೂ ಹರಡುತ್ತಿದೆ. ಈ ಇಲಾಖೆಯಲ್ಲಿ ಎಷ್ಟು ಜನರು ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿರುತ್ತಾರೆ, ಈ ಪೈಕಿ ಎಷ್ಟು ಜನರಿಗೆ ಉದ್ಯೋಗಗಳು ದೊರತಿವೆ, ಆ ಉದ್ಯೋಗಗಳು ಯಾವ ಯಾವ ಇಲಾಖೆಗಳಲ್ಲಿ ದೊರೆತಿರುತ್ತವೆ, ಇದರ ಕಾರ್ಯಕಲಾಪಗಳು ಯಾವ ರೀತಿ ಜರುಗುತ್ತಿವೆ ಎನ್ನತಕ್ಕವಿಚಾರಗಳಿಗೆಲ್ಲಾ ಈ ಇಲಾಖೆಯವರು ಕೂಡಲೆ ಒಂದುವರದಿಯನ್ನು ಒಪ್ಪಿಸುವಂತೆ ಸರ್ಕಾರದವರು ಈ ಇಲಾಖೆಗೆ ಒತ್ತಾಯ ಪಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಭಾರತ್ ಎಲೆಕ್ಟ್ರಾನಿಕ್ಸ್, ಹಿಂದೂಸ್ತಾನ್ ಮೆಷೀನ್ ಟೂಲ್ಸ್ ಫ್ಯಾಕ್ಟರಿ, ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಹೀಗೆ ಬೇಕಾದಷ್ಟು ಕೈಗಾರಿಕೆಗಳು ಇವೆ. ಅಲ್ಲಿ ಮೈಸೂರು ದೇಶದವರನ್ನು ಸೇರಿಸುವುದಿಲ್ಲ, ಬೇರೆಯವರನ್ನೇ ಸೇರಿಸಿಕೊಳ್ಳುತ್ತಾರೆ, ಮೈಸೂರು ದೇಶದವರು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮೂಲಕ ಹೋದರೆ ಕೆಲಸ ಸಿಕ್ಕುತ್ತದೆ ಎಂದು ಹೇಳಿ ಅವರ ಹೆಸರನ್ನು ರಿಜಿಸ್ಟರ್ ಮಾಡಿಸಿ ವರ್ಷಾನುಗಟ್ಟಲೆಯಿಂದ ಕಾದುಕೊಂಡಿದ್ದಾರೆ. ಆದ್ದರಿಂದ ಆ ಕೈಗಾರಿಕೆಗಳಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಿರುವವರನ್ನೇ ತೆಗೆದುಕೊಳ್ಳಬೇಕೆಂದು ಒತ್ತಾಯಮಾಡುತ್ತೇನೆ.

ಭಿಕ್ಷುಕರ ವಿಷಯ ಹೇಳುವುದಾದರೆ, ಬೆಂಗಳೂರಿನಲ್ಲಿ ಭಿಕ್ಷುಕರು ಪ್ರತಿದಿನ ಹೆಚ್ಚು ಹೆಚ್ಚಾಗಿ ಕಾಣುತ್ತಾ ಇದ್ದಾರೆ. ಬೆಂಗಳೂರು ಮೈಸೂರಿನಂಥ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಭಿಕ್ಷುಕರಿಗೆ ಏನೇನು ಅನುಕೂಲ ಮಾಡಿಕೊಡಬೇಕು, ಯಾವ ರೀತಿ ಮಾಡಿದರೆ ಭಿಕ್ಷುಕರು ಕಡಿಮೆಯಾಗುತ್ತಾರೆ ಎಂಬುದನ್ನು ಪರ್ಯಾಲೋಚನೆ ಮಾಡಲು ಒಂದು ಸಮಿತಿಯನ್ನು ಏರ್ಪಾಡು ಮಾಡಿದ್ದಾರೆ. ಈ ಸಮಿತಿಯಲ್ಲಿ ಭಿಕ್ಷುಕರ ಕಾಲೊನಿಯನ್ನು ವಿಸ್ತಾರ ಮಾಡಬೇಕು. ಅವರಿಂದ ವ್ಯವಸಾಯವನ್ನು ಮಾಡಿಸಬೇಕು, ತೋಟದ ಕೆಲಸ ಮಾಡಿಸಬೇಕು, ಅವರಿಗೆ ಬಟ್ಟೆ ನೇಯುವುದನ್ನು ಕಲಿಸಬೇಕು, ಬಟ್ಟೆ ಹೊಲಿಯುವುದನ್ನು ಕಲಿಸಬೇಕು, ಕೋಳಿಗಳನ್ನು ಸಾಕುವುದಕ್ಕೆ ಏರ್ಪಾಡು ಮಾಡಬೇಕು ಎಂಬ ಸ್ಕೀಂಗಳು ಇವೆ. ಆದರೆ ಇವನ್ನು ಜಾಗ್ರತೆ ಕಾರ್ಯಗತ ಮಾಡಿಲ್ಲ. ಬೆಂಗಳೂರಿನಲ್ಲಿರತಕ್ಕ ಭಿಕ್ಷುಕರನ್ನು, ಭಿಕ್ಷುಕರ ಮೋಟಾರಿನಲ್ಲಿ ಕರೆದುಕೊಂಡು ಹೋಗುತ್ತಾರೆ, ಹೋದ ಮೇಲೆ ಒಂದು ದಿವಸ ಅಥವಾ ಎರಡು ದಿವಸದೊಳಗೇ ಅವರನ್ನು ಬಿಟ್ಟುಬಿಡುತ್ತಾರೆ. ಅವರು ಪುನಃ ಬಂದು ಭಿಕ್ಷೆ ಮಾಡುತ್ತಾರೆ, ಪುನಃ ವ್ಯಾನ್ ಬರುತ್ತವೆ, ಪುನಃ ಕರೆದುಕೊಂಡು ಹೋಗುತ್ತಾರೆ ಬಿಟ್ಟುಬಿಡುತ್ತಾರೆ, ಹೀಗಾಗುತ್ತಿದೆ. ಇದಕ್ಕೆ ಸರಿಯಾದ ರೀತಿಯಲ್ಲಿ ಏರ್ಪಾಡು ಮಾಡದೇ ಹೋದಪಕ್ಷದಲ್ಲಿ ಭಿಕ್ಷುಕರನ್ನು ತಡೆಗಟ್ಟುವುದಕ್ಕೆ ಇಟ್ಟಂಥ ಸಿಬ್ಬಂದಿಗೆ ಕೊಟ್ಟ ಸಂಬಳ ವ್ಯರ್ಥವಾಗುವುದೂ ಅಲ್ಲದೆ ಭಿಕ್ಷುಕರೂ ಕಡಿಮೆ ಆಗುವುದಿಲ್ಲ. ಇದಕ್ಕೆ ಏನು ಮಾಡಬೇಕೆಂದರೆ, ಪ್ರತಿಯೊಂದು ವಾರ್ಡಿನಲ್ಲೂ ಕಾರ್ಪೊರೇಷನ್ ಮೆಂಬರುಗಳನ್ನು ಸೇರಿಸಿ ಹತ್ತು ಜನ ಮೆಂಬರುಗಳನ್ನೊಳಗೊಂಡ ಒಂದು ಸಮಿತಿಯನ್ನು ಏರ್ಪಾಡುಮಾಡಿ ಆ ಸಮಿತಿ, ಭಾರತ ಸೇವಾದಳ, ಸ್ಕೌಟ್ಸ್ ಮತ್ತು ಭಾರತ ಸೇವಕ ಸಮಾಜ ಇಂಥ ಸಂಸ್ಥೆಗಳ ಸಹಾಯವನ್ನು ಪಡೆದು ಭಿಕ್ಷುಕರು ಅಲ್ಲಿ ಸಂಚಾರ ಮಾಡದಂತೆ ತಡೆಯುವುದಕ್ಕೂ ಕಾಯುವುದಕ್ಕೂ ವ್ಯವಸ್ಥೆ ಮಾಡಬೇಕು. ಈ ರೀತಿ ನಾವು ಊರಿನಲ್ಲಿ ಭಿಕ್ಷುಕರು ತಿರುಗಾಡದಂತೆ ಮಾಡುವುದಕ್ಕೂ, ತಿರುಗಾಡುತ್ತಿರುವ ಭಿಕ್ಷುಕರನ್ನು ಸುಲಭವಾಗಿ ಹಿಂದಕ್ಕೆ ಕಳುಹಿಸುವುದಕ್ಕೂ ತಕ್ಕ ವ್ಯವಸ್ಥೆ ಮಾಡಬಹುದು ಎಂದು ಹೇಳುತ್ತೇನೆ.

ಇದು ಬರೀ ಪಟ್ಟಣಗಳಲ್ಲಿ ಅಷ್ಟೇ ಅಲ್ಲ ತಾಲ್ಲೂಕುಗಳಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ಈ ಹಳ್ಳಿಯಲ್ಲಿ ಬಿಟ್ಟರೆ ಪಕ್ಕದ ಹಳ್ಳಿಗೆ ಹೋಗುತ್ತಾರೆ. ಆದ್ದರಿಂದ ತಾಲ್ಲೂಕಿನಲ್ಲೂ ಸಹ ಒಂದೊಂದು ಭಿಕ್ಷುಕರ ಪರಿಹಾರ ಸಮಿತಿಯನ್ನು ಇಟ್ಟುಕೊಂಡು, ಆಯಾ ತಾಲ್ಲೂಕಿನ ಅಮಲ್ದಾರರನ್ನು ಚೇರ್ಮನ್‌ರಾಗಿ ಮಾಡಿ, ಹೋಬಳಿಗಳ ಸಮಿತಿಗಳನ್ನೂ ಮಾಡುವುದಲ್ಲದೆ ಮುನಿಸಿಪಲ್ ಕೌನ್ಸಿಲರ್‌ಗಳು ಮತ್ತು ಮುನಿಸಿಪಲ್ ಪ್ರೆಸಿಡೆಂಟರ ಒಂದೊಂದು ಸಮಿತಿಯನ್ನು ಮಾಡಿ ಭಿಕ್ಷುಕರು ಬರದಂತೆ ತಕ್ಕ ವ್ಯವಸ್ಥೆ ಮಾಡಬೇಕು. ಇದರಿಂದ ಸರ್ಕಾರದವರಿಗೆ ಹೆಚ್ಚು ವೆಚ್ಚವಿಲ್ಲದೆ ಭಿಕ್ಷುಕರನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಸಾಧಾರಣವಾಗಿ ಯಾರಾದರೂ ಒಬ್ಬ ಭಿಕ್ಷುಕನನ್ನು ಗಟ್ಟಿಮುಟ್ಟಾಗಿದ್ದೀಯೆ, ಏಕಯ್ಯಾ ಭಿಕ್ಷಕ್ಕೆ ಬರುತ್ತೀಯಾ ಎಂದರೆ ನೀವು ಕೊಡದಿದ್ದರೆ ಚಿಂತೆ ಇಲ್ಲ ಇನ್ನೊಬ್ಬರು ಕೊಡುತ್ತಾರೆ ಎಂದು ಹೇಳುತ್ತಾನೆ. ಯಾರೂ ಕೊಡದಿದ್ದರೆ ಏನುಮಾಡುತ್ತೀಯಾ ಎಂದರೆ ನನ್ನ ಅದೃಷ್ಟ ಎನ್ನುತ್ತಾನೆ. ಕೊನೆಗೆ ಎಲ್ಲೂ ಸಿಕ್ಕದೆ ಎಂಜಲು ಎಲೆಯಲ್ಲಿ ಸಿಕ್ಕಿದ ಆಹಾರವನ್ನು ತಿಂದು ಸಮಾಜದ ನೀತಿಯನ್ನೇ ಹಾಳುಮಾಡುತ್ತಾ ಇದ್ದಾರೆ. ಈ ಭಿಕ್ಷುಕರನ್ನು ತಡೆಯುವುದಕ್ಕೆ ಸರ್ಕಾರದವರು ಹೆಚ್ಚು ಭಾರವನ್ನು ಹೊತ್ತುಕೊಳ್ಳದೇ ಖಾಸಗೀ ಮನುಷ್ಯರಿಗೇ ಈ ಜವಾಬ್ದಾರಿಯನ್ನು ಹೆಚ್ಚಾಗಿ ವಹಿಸಬೇಕೆಂದು ಹೇಳುತ್ತೇನೆ.

ಈ ಭಿಕ್ಷುಕರೆಲ್ಲಾ ನಾವು ಲೆಕ್ಕಾಹಾಕಿ ನೋಡಿದರೆ ಲೆಕ್ಕಕ್ಕೆ ಸಿಕ್ಕದಹಾಗೆ ಹೆಚ್ಚುತ್ತಿದ್ದಾರೆ. ಈಚೆಗೆ ಸಿಕ್ಕ

ತಕ್ಕವರು ಆಂಧ್ರ ದೇಶದವರು ಅಥವಾ ತಮಿಳುನಾಡಿನವರು. ತಮಿಳುನಾಡಿನಿಂದ ಮತ್ತು ಆಂಧ್ರದಿಂದ ಪ್ರತಿ ದಿನವೂ ಬರುತ್ತಾ ಇರುವ ಹೊಸ ಭಿಕ್ಷುಕರನ್ನೂ ಕಾಣುತ್ತಾ ಇದ್ದೇವೆ. ಒಂದುವೇಳೆ ಈ ಭಿಕ್ಷುಕರನ್ನು ಹಿಡಿದುಕೊಂಡುಹೋಗಿ ದೂರ ಬಿಟ್ಟರೆ ಕೆಲವುಕಾಲದ ಮೇಲೆ ಅವರು ಪುನಃ ನಮ್ಮ ದೇಶಕ್ಕೆ ಬರುತ್ತಾರೆ. ಆದ್ದರಿಂದ ಸರ್ಕಾರದವರಿಗೆ ವೆಚ್ಚವಾಯಿತೇ ಹೊರತು ಅನುಕೂಲವಾಗಲಿಲ್ಲ. ಆದ್ದರಿಂದ ಅವರನ್ನು ಹಿಡಿದು ತಕ್ಷಣ ನಮ್ಮ ಮೈಸೂರು ದೇಶದ ಗಡಿಯಿಂದ ಆಚೆಗೆ ಸಾಗಿಸಿ ಆ ಸರ್ಕಾರಗಳ ವಶಕ್ಕೆ ಕೊಟ್ಟರೆ ಒಳ್ಳೆಯದಾಗುತ್ತದೆ ಪುನಃ ಬರುವುದಿಲ್ಲ ಎಂದು ಕಾಣುತ್ತದೆ. ಆ ಸರ್ಕಾರಗಳ ಸಂಗಡ ವ್ಯವಹಾರನಡೆಸಬೇಕೆಂದು ಕೋರುತ್ತೇನೆ. ಹೀಗೆ ಮಾಡುವುದರಿಂದ ಭಿಕ್ಷುಕರ ಕಾಲೊನಿಯಲ್ಲಿ ಅವರನ್ನಿಟ್ಟುಕೊಂಡು ಅವರಿಗೆ ಅನ್ನ ಆಹಾರಕೊಟ್ಟು, ಅದಕ್ಕೆ ಸಿಬ್ಬಂದಿ, ಮೋಟಾರು ಇವುಗಳಿಗೆಲ್ಲಾ ಖರ್ಚುಮಾಡುವುದೂ ಸಹ ಉಳಿಯುತ್ತದೆ. ಹೊರಗಡೆಗೇ ಅವರನ್ನು ಸಾಗಿಸುವುದು ಸೂಕ್ತವಾಗಿದೆ. ಅದಕ್ಕೆ ಸರ್ಕಾರದವರು ಯೋಚನೆಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri V. M. MASCARENHAS (St. John's Hill).—Mr. Speaker, a few friends have passed funny remarks on the Employment Exchange and on the mode of recruitment in some of the Central Government owned factories round about Bangalore. They have entirely forgotten the fact that these big industrial undertakings are owned and managed by the Government of India and over which the Government of Mysore have absolutely no kind of control. When this is the fundamental fact,—and this is forgotten,—it is not possible for this Government to exercise any kind of pressure or influence on them when the personnel is being taken or recruited.

There is another important factor which has been forgotten. These are highly technical undertakings and the men they recruit are invariably technical men who are not to be found generally in the Employment Exchange. These are all young men who have got a special mechanical training, who go to the spot for a test and then alone do the Electronics or the H.M.T. take them. Certainly therefore the men registered in the Employment Exchange are not the kind that can fit in either in the Electronics or the H.M.T. straightaway. Therefore to say that Mysoreans are neglected, that Mysore young men have no chance in those concerns would not be fair and just.

And as far as the Aircraft is concerned, records go to show that more than 30 per cent of the staff are Mysoreans and therefore there should be no cause for any kind of grievance.

Comments have also been made on the Stores Purchase Committee. My friend Sri Mulka Govinda Reddy made a few half—truths. Half—truths in my opinion are sometimes worse than untruths. He said that last year the cots supplied to the Medical Department were not of the right type, that in some hospitals they were accepted and in some not, because influence was used. I should like to bring to his notice that the entire consignment was rejected and that I had put in a short notice question in that connection. If he is now under the impression that these cots, in spite of being not according to the specifications, were accepted, I should like to correct him.

Sri Mulka GOVINDA REDDY.—On a point of personal explanation. What I said was that the cots supplied by a particular contractor were rejected and he was black-listed and the same type of cots supplied by another contractor were accepted and he has been okayed.

Sri V. M. MASCARENHAS.—Again fresh tender was called for. The Stores Purchase Committee examined the cots and then alone they were accepted. So, to say that the two sets of cots were identical is not correct from the standpoint of fact.

It has also been said that the Stores Purchase Committee is a very dilatory institution doing great harm to the various departments and thereby causing even lapse of grants to the departments. If my friend Sri Mulka Govinda Reddy had tried to ascertain the truth, the blame perhaps would lie at the doors of the departments concerned. It is not uncommon for the Stores Purchase Committee to see that indents are placed for articles as late as January or February of the year, the departments knowing very well that within the next two months the financial year ends. Innumerable reminders are given to the Departmental heads which are not heeded to. I would suggest that the Government should not blame so much the Stores Purchase Committee as the Departmental heads who, in spite of

(SRI V. M. MASCARENHAS.)

reminders issued to them, did not care either to see the specifications or to make their specific recommendations on the tenders and on the rates received. I do not know where my friend Sri Muniswamy has got those peculiar incidents of getting a pole for Rs. 25 by the Chief Electrical Engineer and Stores Purchase Committee getting the same poles at Rs. 28 each. I cannot understand how a contractor who could have given a pole for Rs. 25 could quote Rs 3 more to the Stores Purchase Committee. The Stores Purchase Committee is not a charitable institution to give Rs. 3 more to the contractor. I think there is something much more than what has been expressed. But in any case, I would like to mention that the Stores Purchase Committee now at least is trying its utmost to do the best service to the departments. And as far as I know it is doing it. If there are any flaws, the Departments are as much to be blamed as the Stores Purchase Committee.

(Sri U. M. Madappa rose).

Mr. DEPUTY SPEAKER.—The time fixed for this Demand is up to 4 o'clock and the Minister has to reply now. We have got less than 10 minutes. What can I do ? I have got to call upon the Minister to answer. I cannot help it. I know it is the most unpleasant duty to restrict the speakers. Since the time has already been fixed up, I cannot help it now. Now the Minister will answer.

*ಡಾ|| ಆರ್. ನಾಗನಗೌಡ (ವ್ಯವಸಾಯ ಇಲಾಖೆಯ ಮಂತ್ರಿಗಳು).—ಸ್ವಾಮಿ, ಭಿಕ್ಷುಕರ ವಿಷಯವಾಗಿ ಕೆಲವು ಅಂಶಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಹಾಲಿ ಅಲ್ಲಿ 160 ಜನರನ್ನು ಇಟ್ಟುಕೊಳ್ಳುವುದಕ್ಕೆ ಏರ್ಪಾಡಿದೆ. ಇದಕ್ಕೆ ಸಂಬಂಧಪಟ್ಟಂತೆ ನೇಮಕವಾಗಿದ್ದ ಸಬ್ ಕಮಿಟಿಯವರು ಒಂದು ವರದಿಯನ್ನು ಒಪ್ಪಿಸಿ 1,600 ಮಂದಿ ಭಿಕ್ಷುಕರನ್ನಿಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಇದರ ಬಗ್ಗೆ ನಾವೇನೂ ಇನ್ನೂ ತೀರ್ಮಾನಮಾಡಿಲ್ಲ. ಅವರ ವರದಿ ಈಗ ನಮ್ಮ ಮುಂದಿದೆ. ಕಳೆದ ನಾಲ್ಕೈದು ವರುಷಗಳಿಂದಲೂ ಇಷ್ಟೇ ಲಕ್ಷ ರೂಪಾಯಿಗಳನ್ನು ಸರ್ಕಾರದವರು ಒದಗಿಸಿಕೊಂಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. . . .

ಶ್ರೀ ಬಿ. ಟಿ. ಕೆಂಪರಾಜ್.—ಭಿಕ್ಷುಕರಿಗಾಗಿ ಕೆಲಸ ಮಾಡುವ ಈ ಇಲಾಖೆಯ ಜನ ಭಿಕ್ಷುಕರನ್ನು ಹಿಡಿದುಕೊಂಡು ಅವರು ಇಟ್ಟುಕೊಂಡಿರುವ ದುಡ್ಡನ್ನು ಕಿತ್ತುಕೊಂಡು ಓಡಿಸಿರುವ ಸಂದರ್ಭಗಳಿದ್ದರೆ ದಯವಿಟ್ಟು ತಿಳಿಸಬೇಕು.

*Sri H. M. CHANNABASAPPA (Minister for Industries).—I would like to submit one point to the Chair. You were pleased to say that the Government has got to reply within 4 o'clock; and the points raised by the Hon'ble Members are so many and the (Dr. R. Nagan Gowda) has got to answer some of the points made out by the Hon'ble Members and I will have to answer some of them. Well, is there any constitutional difficulty in extending the time limit ? If there is constitutional difficulty, I have no objection to stick up to the time limit. But if there is no difficulty, I wish, the Chair will kindly permit the Government to have a little more time for answering those points.

Mr. DEPUTY SPEAKER.—We could get over that constitutional difficulty if the House is prepared to revise that decision. But there is another Demand for which one hour is fixed *i.e.*, between 4 to 5, that has to be completed.

Sri H. M. CHANNABASAPPA.—Government would not propose to take much time. But anyway, the Government has a responsibility to answer the points raised by the Hon'ble Members.

Mr. DEPUTY SPEAKER.—If the House has no objection, I will allow the Hon'ble Minister to reply till 4-15 P.M. Would that be allright ?

MEMBERS.—Yes, Sir.

Mr. DEPUTY SPEAKER.—Till 4-15 P.M. the Minister will reply.

*ಡಾ|| ಆರ್. ನಾಗನಗೌಡ.—ಆ ಸಮಿತಿಯ ವರದಿಯ ಪ್ರಕಾರ ನಾವು ಖರ್ಚು ಮಾಡಬೇಕೆಂದರೆ non-recurring ಖರ್ಚೇ 5,70,000 ರೂಪಾಯಿಗಳಾಗುತ್ತದೆ. ಜೊತೆಗೆ recurring ಖರ್ಚು 3,69,000 ರೂಪಾಯಿಗಳವರೆಗೂ ಆಗುತ್ತದೆ. ಇದರಲ್ಲಿ ಇನ್ನೊಂದು ವಿಷಯ ಬೇರೆಯಿದೆ. ಈ ಬಗ್ಗೆ ಸ್ಥಳೀಯ ಸಂಸ್ಥೆಗಳಿಂದ ಬಹಳ ಮಟ್ಟಿಗೆ ಕಾಂಟ್ರಿಬ್ಯೂಷನ್ ಕೊಡಬೇಕಾಗಿ ಬರುತ್ತದೆ. ಒಂದು ವೇಳೆ ಆ ಹಣ ಬಂದರೂ ಕೂಡ ನಾವು ಮಾಡುವುದಕ್ಕಾಗುತ್ತದೆಯೋ ಎಂದು ಸರ್ಕಾರದವರು ಸಮಾಲೋಚನೆ ಮಾಡುತ್ತಿದ್ದಾರೆ.

ಮತ್ತೊಂದು ವಿಷಯ ಮಾನ್ಯ ಸದಸ್ಯರು ಹೇಳಿದರು. ಭಿಕ್ಷುಕರೆಲ್ಲರನ್ನೂ ತೆಗೆದುಕೊಂಡು ಹೋಗಿ ಗಡೀಪಾರು ಮಾಡಬೇಕೆಂದು ಹೇಳಿದರು. Constitution ಪ್ರಕಾರ ಅವರನ್ನು ನಮ್ಮ State ಹೊರಗೆ

ಕಳುಹಿಸುವುದಕ್ಕೆ ಸಾಧ್ಯವಿಲ್ಲವೆಂದು ತಮಗೆಲ್ಲಾ ಗೊತ್ತಿದೆ.

ಶ್ರೀ ರಾಮಯ್ಯನವರು ಮಾತನಾಡುತ್ತಾ ಈ ಸಮಸ್ಯೆಯಲ್ಲಿರುವ ಕಷ್ಟಗಳನ್ನೆಲ್ಲಾ ಹೇಳಿ, ಇದಕ್ಕೆ ಯಾವುದಾದರೊಂದು ಪರಿಣಾಮಕರವಾದ ಪದ್ಧತಿಯನ್ನೂ ಏರ್ಪಾಡನ್ನೂ ಮಾಡಬೇಕೆಂದು ಹೇಳಿದರು. ಅವರು ಹೇಳಿದ ಕಷ್ಟಗಳು ವಾಸ್ತವ. ಆದರೂ, ಈಗ ಸ್ವಲ್ಪ ಮಟ್ಟಿಗೆ ಭಿಕ್ಷುಕರ ಕಾಟ ಬೆಂಗಳೂರಿನಲ್ಲಿ ಕಡಮೆಯಾಗಿದೆಯೆನ್ನಬಹುದು. ಇತರ ಊರುಗಳಲ್ಲಿ ಇನ್ನೂ ಹೆಚ್ಚಿಗೆ ಇದೆ. ಭಿಕ್ಷುಕರಿಗೆ ಇಲ್ಲಿಗೆ ಬರುವುದಕ್ಕೆ ಭಯವಂತೂ ಇದೆ. ಇಲ್ಲಿಗೆ ಬಂದು ಭಿಕ್ಷವನ್ನು ಬೇಡಿದರೆ ಹಿಡಿದುಕೊಳ್ಳುತ್ತಾರೆ ಎಂಬ ಭಯವಿದೆ. ಈ ಕಾಲೊನಿಗೆ ಅವರನ್ನು ಕರೆದುಕೊಂಡು ಹೋದರೆ, ಅಲ್ಲಿ ಅವರಿಗೆ ಸ್ವಲ್ಪಮಟ್ಟಿಗೆ ವಿದ್ಯೆ, ಟೈಲರಿಂಗ್ ಮತ್ತಿತರ ವಿಷಯಗಳನ್ನು ಬೋಧನೆ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಶ್ರೀ ಬಿ. ಟಿ. ಕೆಂಪರಾಜ್‌ರವರು ಹೇಳಿದ ವಿಷಯದಲ್ಲಿ ನಾನು ಅಲ್ಲಿನ ವಾರ್ಡರುಗಳು ಮತ್ತು ಇತರ ಸೇವಕರುಗಳಿಗೆ strict instruction ಕೊಟ್ಟು ಭಿಕ್ಷುಕರಿಂದ ದುಡ್ಡು ಮುಂತಾದುವುಗಳನ್ನು ತೆಗೆದುಕೊಳ್ಳಕೂಡದು, ಬಂದಿದ್ದನ್ನೆಲ್ಲಾ ಕೂಡಲೆ ತಿಳಿಸಬೇಕು ಎಂದು ಸೂಚನೆ ಕೊಟ್ಟಿದ್ದೇವೆ. ಶ್ರೀ ರಾಮಯ್ಯನವರು ಕೆಲವು ಆಶ್ರಮಗಳಿಗೆ ಸಹಾಯ ಮಾಡಬೇಕೆಂದು ಹೇಳಿದರು. ಅದು ಯೋಚನೆ ಮಾಡಬೇಕಾದ ವಿಷಯ. ಶ್ರೀ ಮಾಧವಾಚಾರ್‌ಅವರು ವಾರ್ಡ್‌ಗಳ ವಿಷಯದಲ್ಲಿ ಹೇಳಿದ್ದನ್ನು ಪರ್ಯಾಲೋಚನೆ ಮಾಡಬೇಕೆಂದಿದ್ದೇವೆ. ಶ್ರೀ ಮುಲ್ಕ ಗೋವಿಂದರೆಡ್ಡಿಯವರು Land Colonisation ವಿಚಾರವಾಗಿ ಮಾತನಾಡುತ್ತಾ ವಿಶ್ವೇಶ್ವರಯ್ಯ ನಾಲಾ ಕೆಳಗೆ 16 ವರ್ಷಗಳ ಹಿಂದೆ colonisation ಮಾಡಿದ್ದರೂ ಅದರಲ್ಲಿ ಇನ್ನೂ ಪರಿಣಾಮಕರವಾದ ಏರ್ಪಾಡನ್ನು ಮಾಡಿಲ್ಲವೆಂದು ಹೇಳಿದರು ನನಗೆ ತಿಳಿದ ಮಟ್ಟಿಗೆ ಯಾವ ಯಾವ ಅನುಕೂಲಗಳು ಬೇಕೋ ಅದನ್ನೆಲ್ಲಾ ಮಾಡಿದ್ದೇವೆ. ಯಾರು ಅಲ್ಲಿಯೇ ಇದ್ದುಕೊಂಡು ವ್ಯವಸಾಯ ಮಾಡುವುದಕ್ಕೆ ಸಿದ್ಧವಾಗಿದ್ದಾರೋ ಅವರಿಗೆ ಕಾಲೊನಿಯಿಂದ ಲಾಭವಾಗಿದೆ. ಯಾರು ಅಲ್ಲಿರುವುದಕ್ಕೆ ಏರ್ಪಾಡು ಮಾಡಿಕೊಂಡಿಲ್ಲವೊ ಅವರಿಗೆ ಅನುಕೂಲವಾಗಿಲ್ಲ ಅಷ್ಟೆ. ಈಗ ಎರಡು ವರ್ಷಗಳ ಹಿಂದೆ ಒಂದು ಕಮಿಟಿ ಮಾಡಿ ಅಲ್ಲಿನ ವ್ಯವಸಾಯಗಾರರಿಗೆ ಪಟ್ಟೆಗಳನ್ನು ಮಾಡಿಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಆದ್ದರಿಂದ ಅವರಿಗೆ ಎಲ್ಲಾ ವಿಧವಾದ ಏರ್ಪಾಡುಗಳನ್ನು ಮಾಡಿದ್ದಾರೆಂಬುದೇ ಸರ್ಕಾರದವರ ಅಭಿಪ್ರಾಯ.

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಸ್ಟೋರ್ಸ್ ಪರ್ಚೇಸು ಕಮಿಟಿಯ ಕೆಲಸ ಕಾರ್ಯಗಳನ್ನೂ ಮತ್ತು Employment Exchange ನ ಕೆಲಸ ಕಾರ್ಯಗಳನ್ನೂ ಮಾನ್ಯ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. Employment Exchange ನ ವಿಷಯದಲ್ಲಿ ಎತ್ತಿದಂಥ ಆಕ್ಷೇಪಣೆಗಳಿಗೆ ಶ್ರೀ ಮ್ಯಾಸ್ಕರ್ಹಾನ್ಸ್‌ಅವರು ಆಗಲೇ ಉತ್ತರಕೊಟ್ಟಿದ್ದಾರೆ. ಇದು ಇಂಡಿಯಾ ಸರ್ಕಾರದಿಂದ ನಡೆಸಲ್ಪಡುತ್ತಿರತಕ್ಕಂಥಾದ್ದು. ಮೈಸೂರು ಸರ್ಕಾರದವರೇನಿದ್ದರೂ ಶೇಕಡ 40ರಷ್ಟು Establishment charges ಮಾತ್ರ ಕೊಡುತ್ತೇವೆ. ಅಷ್ಟೆ.

4 P.M.

ಈಗ ಅವರು ಹೇಳಿದಂಥ Employment Exchange ನಲ್ಲಿ ಸುಮಾರು 20,917 ಜನರು ಅರ್ಜಿ ಹಾಕಿದರು. 1,243 ಜನರಿಗೆ ಕೆಲಸ ಕೊಟ್ಟರು. I.T.I. ಮತ್ತು ಹಿಂದೂಸ್ತಾನ್ ಏರ್‌ಕ್ರಾಫ್ಟ್‌ನಲ್ಲಿ ಕೆಲಸ ದೊರಕುವುದಿಲ್ಲ ಎನ್ನುವ ಆಕ್ಷೇಪಣೆ ಎತ್ತಿದರು. ಮತ್ತು ಮೈಸೂರು ಸರ್ಕಾರದವರು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ಹೇಳಿದರು. Bharat Electronics, Hindustan Aircraft, Telephone Industries, Machine Tools, ಇವೆಲ್ಲಾ ಭಾರತ ಸರ್ಕಾರದವರು ಸ್ಥಾಪನೆ ಮಾಡಿದಂಥವು. ಇಲ್ಲಿ ಬೇಕಾದಂಥವರು ಎರಡು ತರಹ ಜನಗಳು. ಒಂದು Technical Personnel, ಎರಡನೆಯದು Unskilled labourers. Unskilled labourers ಮೈಸೂರು ಸಂಸ್ಥಾನದಿಂದ supply ಆಗುತ್ತಿದ್ದಾರೆ. Skilled labourers ಎಲ್ಲಿ ಇದ್ದರೆ ಅಲ್ಲಿಂದ ಕರೆಸಿಕೊಂಡು ಕೆಲಸ ಮಾಡದೆ ಹೋದರೆ ಅವರಿಗೆ ತೊಂದರೆಯಾಗುತ್ತದೆ. ಈ ವಿಷಯದಲ್ಲಿ ಭಾರತ ಸರ್ಕಾರದವರೊಡನೆ ಮತ್ತು ಕೈಗಾರಿಕೆಗಳ ಮ್ಯಾನೇಜ್‌ಮೆಂಟಿನವರೊಡನೆ ಪ್ರಸ್ತಾಪ ಮಾಡಿ, ಸಾಧ್ಯವಾದಷ್ಟು ಪ್ರಯತ್ನ ಮಾಡಿ, ಮೈಸೂರು ಸಂಸ್ಥಾನದ ಜನಗಳಿಗೆ ಕೆಲಸ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಅದರ ಬಗ್ಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಪುರಸ್ಕಾರ ಕೊಡಬೇಕೆಂದು ಹೆಚ್ಚಿನ ಪ್ರಮಾಣದಲ್ಲಿ ಒತ್ತಾಯ ಮಾಡುತ್ತಿದ್ದೇವೆ. ಈ ಬಗ್ಗೆ ಆ ಸರ್ಕಾರಕ್ಕೂ ನಮಗೂ ಭಿನ್ನಾಭಿಪ್ರಾಯವಿಲ್ಲ. ಸಾಧ್ಯವಾದಷ್ಟು ಪ್ರಯತ್ನಮಾಡಿ ನಮ್ಮ ಜನಗಳಿಗೆ ಕೆಲಸಗಳನ್ನು ಒದಗಿಸಿಕೊಟ್ಟಿದ್ದೇವೆ. ಇನ್ನೂ ಹೆಚ್ಚಿಗೆ ಕೆಲಸಗಳನ್ನು ಒದಗಿಸುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಪಿ. ಆರ್. ರಾಮಯ್ಯ.—Apprentice ಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಏರ್ಪಾಡು ಇದೆಯೇ ? ಹಾಗಿದ್ದರೆ ಮೈಸೂರಿನವರನ್ನು apprentice ಗಳನ್ನಾಗಿ ಏತಕ್ಕೆ ತೆಗೆದುಕೊಳ್ಳಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—Apprentice ಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಯಾವ ರೀತಿ ಪ್ರೊಬೇಷನರುಗಳನ್ನು ತೆಗೆದುಕೊಳ್ಳಬೇಕಾದರೆ ಕಮಿಟಿ ಏರ್ಪಾಡುಮಾಡಿ interview ಮಾಡಿ ಯಾರು ಸೂಕ್ತವೆಂದು ಕಂಡುಬರುತ್ತಾರೋ, ಅದೇ ರೀತಿ ಅವರು ತೆಗೆದುಕೊಳ್ಳುತ್ತಾರೆ.\ ಹೀಗೆಯೇ ಮಾಡಬೇಕು ಎಂದು ಆಜ್ಞೆ ಮಾಡುವ ಸ್ಥಿತಿಯಲ್ಲಿಲ್ಲ. ಸಾಧ್ಯವಾದಷ್ಟು ಅವರೂ ನಾವೂ ಹೊಂದಿಕೊಂಡು ಉಭಯತ್ರರ ಹಿತವನ್ನೂ ಸಾಧಿಸುವ ಸ್ಥಿತಿಯಲ್ಲಿ ಕೆಲಸ ಮಾಡಿಕೊಂಡು ಹೋಗಬೇಕಾಗಿದೆಯೇ ಹೊರತು ಈ ರೀತಿ ಮಾಡಬೇಕು ಎಂದು ಹೇಳುವುದು ಕಷ್ಟವಾಗುತ್ತದೆ.

Sri V. M. MASCARENHAS.—May I say a few words ? With this very object, the Government of India are running a Training Institute in the High Grounds and they are opening new courses of study so that young men trained there may fit themselves into these various factories. We have already selected two batches of young men with the distinct understanding that these boys who undergo training there should automatically get into either Bharat Electronics or Aircraft or some other Central Government concern. Most of

(SRI V. M. MASCARENHAS.)

these young men are Mysoreans and there is a distinct understanding that during the next three years 300 young men who are trained here would be taken to these various factories. That is done according to a scheduled plan.

ಶ್ರೀ ಎಚ್. ಎಂ. ಚನ್ನಬಸಪ್ಪ.—ಶ್ರೀ ವಿ. ಆರ್. ನಾಯ್ಡುರವರು ಕೆಲವು ಸಂಸ್ಥೆಗಳಿಗೆ ಹೆಚ್ಚಿನ ಸಹಾಯವಾಗಬೇಕೆಂದು ಒತ್ತಾಯಪಡಿಸಿದರು. ಅದರಲ್ಲೂ, ವಿಲ್ಸನ್‌ಗಾರ್ಡನ್‌ನಲ್ಲಿರುವ ಅನಾಥ ಶಿಶು ಸೇವಾಶ್ರಮಕ್ಕೆ ಸಹಾಯವಾಗಬೇಕು ಎಂದು ಹೇಳಿದರು. ನನಗೆ ತಿಳಿದಿರುವ ಹಾಗೆ ಈ ಆಶ್ರಮದಲ್ಲಿರುವ ಪ್ರತಿಯೊಬ್ಬ ಅನಾಥನಿಗೂ ತಿಂಗಳಿಗೆ ಐದು ರೂಪಾಯಿ ನಂತೆ 132 ರೂಪಾಯಿ ಗ್ರ್ಯಾಂಟು ಸಹ ಕೊಡುತ್ತಿದ್ದೇವೆ. ಅದಕ್ಕಿಂತ ಹೆಚ್ಚಿಗೆ ಬೇಕು ಎಂದರೆ ಮಾನ್ಯ ಸದಸ್ಯರು Director of Public Instruction ಅವರನ್ನು ಕಂಡು ಮಾತನಾಡಿದರೆ ಹೆಚ್ಚಿನ ಸಹಾಯಕ್ಕೆ ರೂಲ್ಸಿಗೆ ಒಳಪಟ್ಟು ಅವಕಾಶವಿದ್ದರೆ, ಅವರು ಕೊಡುತ್ತಾರೆ. ಇತರ ಸಂಸ್ಥೆಗಳಿಗೆ ಸಹಾಯ ಬೇಕು ಎಂದು ಹೇಳಿದ್ದಾರೆ. ಸಹಾಯದ್ರವ್ಯವನ್ನು ಕೊಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಿದ್ದೇವೆ. ರೂಲ್ಸ್‌ಗಳನ್ನೂ ವಿಧಾಯಕ ಮಾಡಿದ್ದೇವೆ. ಇದರಿಂದ ಸಹಾಯವನ್ನು ಪಡೆಯುವುದಕ್ಕೆ ಅಭ್ಯಂತರವಿಲ್ಲ.

Stores Purchase Committee ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಸ್ವಲ್ಪ ಮಟ್ಟಿಗೆ ಪ್ರಸ್ತಾಪ ಮಾಡಿದರು. ಆದರೆ ಕೆಲಸ ಬಹಳ ಹೆಚ್ಚಿನ ಪ್ರಮಾಣದಲ್ಲಿ ಈಗ ನಡೆಯುತ್ತಿದೆ. ಅದರಲ್ಲೂ ಇತ್ತೀಚೆಗೆ ನಮ್ಮ ಕೈಗಾರಿಕೋದ್ಯಮಗಳು ಹೆಚ್ಚಿದಂತೆಲ್ಲಾ Stores Purchase Committeeಯ ಕೆಲಸ ಕಾರ್ಯಗಳು ಹೆಚ್ಚಾಗುತ್ತಿವೆ. 1953-54ನೇ ಸಾಲಿನಲ್ಲಿ ಎರಡು ಕೋಟಿ 58 ಲಕ್ಷ ರೂಪಾಯಿಗಳಷ್ಟು ಸಾಮಾನುಗಳನ್ನು ಅವರ ಮುಖೇನ ಸರ್ಕಾರ ತರಿಸಬೇಕಾಯಿತು. ಅದೇ 1954-55ನೇ ಸಾಲಿನಲ್ಲಿ ಮೂರು ಕೋಟಿ 21 ಲಕ್ಷ ರೂಪಾಯಿಗಳಷ್ಟು ಸಾಮಾನುಗಳನ್ನು ತರಿಸಬೇಕಾಯಿತು. ಮತ್ತೆ ಈ ವರ್ಷ ಈಗಾಗಲೇ ಎರಡು ಕೋಟಿ 87 ಲಕ್ಷದಷ್ಟು ಸಾಮಾನುಗಳನ್ನು 28-2-1956ರವರೆಗೆ ತರಿಸಿದೆ. ಏತಕ್ಕೋಸ್ಕರ ಅಂಕಿ ಅಂಶವನ್ನು ಕೊಟ್ಟೆ ಎಂದರೆ, ಇಷ್ಟು ಭಾರಿ ಪ್ರಮಾಣದಲ್ಲಿ ಸಾಮಾನುಗಳು ಸರಬರಾಜು ಆಗಬೇಕು. ಭರತಖಂಡದಲ್ಲಿ ಸರಬರಾಜು ಆಗುವುದು ಕೆಲವು, ಇತರ ನಾನಾ ದೇಶಗಳಿಂದ ಸರಬರಾಜು ಆಗತಕ್ಕವು ಕೆಲವು ಇವೆ. ಇಲ್ಲಿಂದ indent ಹೋದ ಮೇಲೆ ಎಲ್ಲೆಲ್ಲಿ ಯಾವಯಾವ specifications ಇವೆ ಎಂಬುದನ್ನು ಪರಿಶೀಲನೆ ಮಾಡಿ, ಹೊರಗಡೆ firms ನಿಂದ quotations ತರಿಸಿ, comparative statement ಹಾಕಿ ಯಾವುದು ಅದರಲ್ಲಿ quality ಉತ್ತಮವಾಗಿದೆ ಮತ್ತು ಕಡಮೆ ಖರ್ಚಿನಲ್ಲಿ ಆಗುತ್ತದೆ ಎಂಬುದನ್ನು ನಿರ್ಧಾರ ಮಾಡಬೇಕು. ಅಕಸ್ಮಾತ್ತಾಗಿ ಕಳುಹಿಸುವ specification ಸಿಕ್ಕದೆ ಹೋದ ಪಕ್ಷದಲ್ಲಿ ಆಗ್ಗೆ ಇಲಾಖೆಯನ್ನು ಪುನಃ ಕೇಳಬೇಕಾಗಿ ಬರುತ್ತದೆ. ಕಾಗದ ಪತ್ರಗಳು S.P.C. Department ನಿಂದ ಪುನಃ ಹೋಗಿ specification ನಿರ್ಧಾರವಾಗುವುದಕ್ಕೆ ಒಂದೊಂದು ಸಲ ಹೆಚ್ಚು ಕಾಲ ತೆಗೆದುಕೊಳ್ಳುತ್ತದೆ. ಇಂಡಿಯಾ ದೇಶದ ಹೊರಗಡೆಯಿಂದ ತರಿಸತಕ್ಕ ಸಾಮಾನುಗಳ ವಿಷಯದಲ್ಲಿ ಸ್ವಲ್ಪ ಹೆಚ್ಚಿಗೆ ಕಾಲವನ್ನು ತೆಗೆದುಕೊಳ್ಳುವುದು ಅನಿವಾರ್ಯ. ಒಟ್ಟಿನಲ್ಲಿ Stores Purchase Committee ಸರ್ವಪ್ರಯತ್ನ ಮಾಡುತ್ತಿದೆ. ಅದರಲ್ಲೂ ನಮಗೆ ಅವಶ್ಯಕವಾದ ಪದಾರ್ಥಗಳನ್ನು ಬಹಳ ಕಡಮೆ ಬೆಲೆಯಲ್ಲಿ ತರಿಸಿಕೊಟ್ಟಿದ್ದಾರೆ. ಒಂದೊಂದು ವೇಳೆ ನಿಧಾನವಾಗತಕ್ಕ ಪ್ರಸಂಗ ಬರುತ್ತದೆ. ನನಗೆ ತಿಳಿದ ಮಟ್ಟಿಗೆ ನಿಧಾನವಾಗುವುದು ಅನಿವಾರ್ಯ. ಏತಕ್ಕೋಸ್ಕರ ನಿಧಾನವಾಯಿತು ಎಂದು ಸರ್ಕಾರದವರೂ ಕೂಡ ಕೇಳಿದ್ದಾರೆ. ನನಗೆ ಗೊತ್ತಿರುವ ಮಟ್ಟಿಗೆ Stores Purchase Committee ಯಲ್ಲಿ ನಿಧಾನವಾಗಿಲ್ಲ. Indent ಕಳುಹಿಸುವುದು ತಡ ಆಗುತ್ತದೆ. ತಡ ಏತಕ್ಕೆ ಆಗುತ್ತದೆ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಹೆಚ್ಚಿಗೆ ಹಣ ಒದಗಿಸುವುದು ಮತ್ತು ಅದು ಮಂಜೂರು ಆಗುವುದು— ಇವಕ್ಕೆ ಕಾಲ ಬೇಕಾಗುತ್ತದೆ, ಒಟ್ಟಿನಲ್ಲಿ Stores Purchase Committeeಯ ಕೆಲಸ ಕಾರ್ಯಗಳು ಹೆಚ್ಚಿನ ದಕ್ಷತೆಯಿಂದ, ದೇಶದ ಹಿತದೃಷ್ಟಿಯಿಂದ ನಡೆಯಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಶ್ರೀ ಮುನಿಸ್ವಾಮಯ್ಯನವರು ಒಂದು ವಿಷಯ ಹೇಳಿದರು. ಬಹುಶಃ ಅದು ಸರಿಯಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀ ಆರ್. ಮುನಿಸ್ವಾಮಯ್ಯ.—ಪರೀಕ್ಷೆ ಮಾಡಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿದ್ಯುಚ್ಛಕ್ತಿ ಸಂಬಂಧದಲ್ಲಿ charcoal ಬೇಕಾಗಿತ್ತು. ಅದು ನಮಗೆ ದೊರಕಲಿಲ್ಲ, ಅದನ್ನು ನಾವು ತರಿಸಲೂ ಇಲ್ಲ, quotations call for ಮಾಡಿರಬಹುದು. ಆದರೆ ಪದಾರ್ಥವೇ ನಮಗೆ ಸಿಕ್ಕಲಿಲ್ಲ. ನಾವು ಅದನ್ನು ತರಿಸಲಿಲ್ಲ. ಈ ಬಗ್ಗೆ Stores Purchase Committee ಅಥವಾ ಇನ್ನು ಯಾರೇ ಆಗಲಿ ಆಪಾದನೆಗೆ ಕಾರಣರಲ್ಲ. Stores Purchase Committeeಯ ಕೆಲಸಕಾರ್ಯಗಳು ಇನ್ನೂ ಹೆಚ್ಚಿನ ದಕ್ಷತೆಯಿಂದ ನಡೆಯಬೇಕು, ಅವಶ್ಯಕವಾದ ಪದಾರ್ಥಗಳು ಕಡಿಮೆ ಬೆಲೆಯಲ್ಲಿ ದೊರಕುವುದಕ್ಕೆ ಯಾವ ರೀತಿ ಉತ್ತಮಪಡಿಸಬೇಕು ಎಂಬುದನ್ನು ಯೋಚನೆ ಮಾಡಿ ಅದನ್ನು ಕೂಡ ಉತ್ತಮಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

MR. DEPUTY SPEAKER.—The question is :

"That a sum not exceeding Rs. 27,25,500 be granted to the Government to defray the charges which will come in course of payment during the year ending 31st day of March 1957 in respect of Miscellaneous."

The motion was adopted.

DEMAND No. 44—SCHEMES CONNECTED WITH STATE TRADING.

85—A. CAPITAL OUTLAY ON STATE SCHEMES OF GOVERNMENT TRADING.

MR. DEPUTY SPEAKER.—Motion moved :

"That a sum not exceeding Rs. 64,75,100 be granted to the

Government to defray the charges which will come in course of payment during the year ending 31st day of March 1957, in respect of "Capital Outlay on State Schemes of Government Trading'."

*Sri Mulka GOVINDA REDDY (Chitaldrug).—Sir, I oppose the demand under the head "Capital Outlay on State Schemes of Government Trading for Rs. 64,75,100." Sir, after the controls were introduced in Mysore State, much of the trading in foodgrains was undertaken by the Government of Mysore. It is nearly three or four years since the controls have been abolished. Food Assistants working in districts have been replaced and they have been entrusted with some other work. But a skeleton food department is still going on. To what extent Government have incurred loss in this State trading and to what extent they have been able to fix up the guilt on the culprits and to what extent they have settled the claims is still a mystery. There are instances where claims have not been settled for having transported foodgrains from depot to depot. There are instances where there were many misappropriations and defalcations. There were instances where food articles had disappeared from godowns. I would like to know from the Government what action they have taken and when they are going to finally settle the accounts of this department and close it down. I therefore oppose this demand.

*ಶ್ರೀ ಯು.ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಆಹಾರಾಭಾವದ ಕಾಲದಲ್ಲಿ ಈ ಉದ್ಯಮವನ್ನು ಸರ್ಕಾರ ಕೈಗೊಂಡಿತು. ಆಹಾರಾಭಾವವಿಲ್ಲದೇಯಿರುವ ಕಾಲದಲ್ಲಿ ಈ ಇಲಾಖೆಯನ್ನು ಮುಚ್ಚುತ್ತೇವೆಂದು ನಾಲ್ಕು ವರ್ಷಗಳಿಂದ ಘೋಷಣೆ ಮಾಡುತ್ತಿದ್ದಾರೆ. ನಾಲ್ಕು ವರ್ಷಗಳಿಂದ ಈ ಲೆಕ್ಕಾಚಾರದ ಸಮಸ್ಯೆ ಇವರ ತಲೆಗೆ ಹಿಡಿದಿಲ್ಲವೆ? ಪ್ರತಿ ಜಿಲ್ಲಾ ಹೆಡ್ ಕ್ವಾರ್ಟರಿನಲ್ಲಿಯೂ ಲೆಕ್ಕದ ಪರಿಶೀಲನೆ ನಡೆಯುತ್ತಿದೆ. ನನಗೆ ಇದರ ಚರಿತ್ರೆ ಗೊತ್ತಿದೆ. ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಆದಷ್ಟು ದಿವಸ ಈ ಇಲಾಖೆ ಇರಲೆಂಬ ದೃಷ್ಟಿಯಿಂದ ಸರಿಯಾಗಿ ಲೆಕ್ಕಪತ್ರಗಳನ್ನು ಒದಗಿಸುತ್ತಿಲ್ಲ, ಸರಿಯಾಗಿ ಲೆಕ್ಕದಲ್ಲಿ ಅಂಕಿಗಳನ್ನು ಕೂಡುವುದಕ್ಕೂ ಕಷ್ಟಪಡದೆ, ಪುನಃ remarks ಆಗಿ ಬರಲಿ ನೋಡೋಣ ಎಂದು ತಡಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ನನಗೆ ತಿಳಿದುಬಂದಿದೆ. ಈ ಲೆಕ್ಕ ಪತ್ರವನ್ನು ಸರಿಮಾಡಬೇಕೆಂಬ ಪ್ರಯತ್ನಕ್ಕೇ ಖರ್ಚು ಜಾಸ್ತಿಯಾಗುತ್ತಿದೆ. ಈ ರೀತಿ ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನಪಡುವ ಬದಲು, ಮೊದಲು ಅಲ್ಲಿರತಕ್ಕ ಲೆಕ್ಕ ಪತ್ರಗಳನ್ನು ಸೆಕ್ರೆಟೇರಿಯಟ್ಟಿಗೇ ತರಿಸಿಕೊಂಡು, ಇಲ್ಲೇ ಒಬ್ಬ ಅಧಿಕಾರಿಯನ್ನಿಟ್ಟುಕೊಂಡು ಕೆಲಸ ಮಾಡುವುದು ಉತ್ತಮ. ಈಗಲೂ ಫುಡ್ ಅಸಿಸ್ಟೆಂಟ್‌ಗಳು ಜಿಲ್ಲೆಗಳಲ್ಲಿದ್ದಾರೆ. ಹೀಗೆಯೇ ಕೆಲಸ ಮಾಡಿದರೆ ಇನ್ನೂ ಹತ್ತು ವರ್ಷಗಳಾದರೂ ಇದು ಮುಗಿಯುವುದಿಲ್ಲ. ಇಲ್ಲೇ ಒಬ್ಬ ಫುಡ್ ಅಸಿಸ್ಟೆಂಟನ್ನಿಟ್ಟುಕೊಂಡು, ಸೆಕ್ರೆಟೇರಿಯಟ್ಟಿಗೇ ಸೇರಿಸಿ, ಆದಷ್ಟು ಬೇಗ ಈ ಇಲಾಖೆಯನ್ನು ಮುಚ್ಚಬೇಕೆಂದು ಸರ್ಕಾರ ಶಪಥ ಮಾಡದೇಯಿದ್ದರೆ, ಈ ಕೆಲಸವಾಗುವುದಿಲ್ಲ. ಜಾಗ್ರತೆ ಮಾಡಬೇಕು. ಇಲ್ಲದಿದ್ದರೆ ಬಡ್ಜೆಟ್ಟಿನಲ್ಲಿ ಸರಿಯಾಗಿ ಲೆಕ್ಕ ಸಿಕ್ಕುವುದಿಲ್ಲ. ಪ್ರತಿವರ್ಷವೂ 64,75,100 ರೂಪಾಯಿ ತೋರಿಸುತ್ತಿದ್ದಾರೆ. ಇದು ಯಾವ ಲೆಕ್ಕ ಎಂದು ಕಂಡುಹಿಡಿಯುವುದಕ್ಕೆ ಶ್ರಮಪಡುವ ಬದಲು, ಸರಿಯಾಗಿ ಲೆಕ್ಕ ಸಿಕ್ಕುವ ದೃಷ್ಟಿಯಿಂದ ನಾನು ಹೇಳಿದ ರೀತಿ ಮಾಡಿ, ಜಾಗ್ರತೆ ಲೆಕ್ಕವನ್ನೊದಗಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಈ 44ನೆಯ ಡಿಮ್ಯಾಂಡಿನಲ್ಲಿ ಕೇಳಿರುವ ಹಣದ ಸಂಬಂಧವಾಗಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಶ್ರೀ ಮಾದಪ್ಪನವರು ಹೇಳಿದ ಹಾಗೆ, ಆಹಾರ ಅಭಾವವಿದ್ದ ಕಾಲದಲ್ಲಿ ಪ್ರಾರಂಭವಾದ ಈ ಇಲಾಖೆಗೆ ಈ ಕಾಲದಲ್ಲಿಯೂ ಹಣವನ್ನೊದಗಿಸಿರುವುದನ್ನು ನೋಡಿದರೆ, ದೇಶದಲ್ಲಿ ಇನ್ನೂ ಆಹಾರಾಭಾವವಿದೆಯೋ ಏನೋ, ಇನ್ನೂ ಹತ್ತಾರು ವರ್ಷಕಾಲ ಇದನ್ನು ನಡೆಸಿಕೊಂಡುಬರಬೇಕೋ ಏನೋ ಎಂದು ಅಲ್ಲಿನ ಅಧಿಕಾರಿಗಳೂ ನೌಕರರೂ ಯೋಚನೆಮಾಡುತ್ತಿರುವ ಹಾಗೆ ಕಾಣುತ್ತದೆ. ಯಾವುದೋ ಒಂದು ಲೆಕ್ಕವನ್ನಿಟ್ಟುಕೊಂಡು, ಏನೋ ಒಂದು ರೀತಿಯಲ್ಲಿ ಅವರು ಕಾಲ ಕಳೆಯುತ್ತಿದ್ದಾರೆಂದು ಕಾಣುತ್ತದೆ. ನಿಜವಾಗಿಯೂ ಅವರು ತಮ್ಮ ಮನಸ್ಸನ್ನು ಈ ಲೆಕ್ಕಪತ್ರಗಳ ಮೇಲಿಟ್ಟು ಕೆಲಸವನ್ನು ನಡೆಸುತ್ತಿಲ್ಲವೆಂಬುದು ವ್ಯಕ್ತವಾಗುತ್ತದೆ. ನಾವು ಈ ಇಲಾಖೆಯನ್ನು ಜಾಗ್ರತೆ ಮುಚ್ಚಬೇಕು, ಲೆಕ್ಕಪತ್ರಗಳನ್ನು ಜಾಗ್ರತೆ ಕೊಡಬೇಕು ಎಂದು ಅವರು ಮನಸ್ಸು ಮಾಡಿದ್ದರೆ, ಈ ಕೆಲಸ ಕಾರ್ಯಗಳು ಮುಗಿದು ಆರು ತಿಂಗಳಾಗಿರಬೇಕಾಗಿತ್ತು. ಆದರೆ ಆ ನೌಕರರಿಗೆ ಇನ್ನೂ ಕೆಲವು ಕಾಲ ಸಂಬಳಗಳನ್ನು ಕೊಟ್ಟು ಇಟ್ಟುಕೊಳ್ಳಬೇಕೆಂದಿದ್ದರೆ ಹೀಗೆ ಮಾಡಬಹುದು. ಹೀಗೆ ಮಾಡಿದರೆ, ದೇಶದ ಹಣ ವ್ಯರ್ಥವಾಗುವುದಕ್ಕವಕಾಶವಾಗುತ್ತದೆಂದು ಸಂಬಂಧಪಟ್ಟ ಮಂತ್ರಿಗಳಿಗೆ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಮಂತ್ರಿಗಳು ತಾವೇ ಆಸಕ್ತಿ ವಹಿಸಿ ಲೆಕ್ಕಗಳನ್ನು ಮುಗಿಸಿ ಈ ಇಲಾಖೆಯನ್ನು ಜಾಗ್ರತೆ ಮುಚ್ಚಬೇಕು. ಮುಂದಿನ ಬಡ್ಜೆಟ್ಟಿನಲ್ಲಾದರೂ ಈ ಇಲಾಖೆಯ ಲೆಕ್ಕಗಳು ಬರಬಾರದೆಂದು ಹೇಳುತ್ತೇನೆ.

1951ನೆಯ ಇಸವಿ ನವೆಂಬರ್‌ನಿಂದ 1952ನೇ ಇಸವಿಯವರೆಗೆ ರೆಡ್‌ಕ್ರಾಸ್ ಸಂಸ್ಥೆಯವರು ಸಾವಿರಾರು ಪಲ್ಲ ಗೋಧಿಯನ್ನು ರಷ್ಯಾ ದೇಶದಿಂದ ತರಿಸಿ, ತಾವು ಇಟ್ಟುಕೊಳ್ಳುವುದಕ್ಕೆ ಸ್ಥಳವಿಲ್ಲದೆ ಸರ್ಕಾರದ ಸೆಂಟ್ರಲ್ ಗೋಡೌನಿನಲ್ಲಿಟ್ಟರು. ಮಳೆಯಿಲ್ಲದ ಕಾಲದಲ್ಲಿ ರಿಲೀಫ್ ಕಾರ್ಯಗಳನ್ನು ಕೊಟ್ಟು ಬಡವರಿಗೆ ದವಸ ಕೊಡುತ್ತಿದ್ದರು. ಕೆಲವು ಸಾವಿರ ಪಲ್ಲಗಳನ್ನು ಇದೇ ಗೋಡೌನಿನಿಂದ ತೆಗೆದುಕೊಂಡುಹೋಗಿ ಕೆಲಸ ಮಾಡುವವರಿಗೆ ಕೂಲಿಯ ರೂಪದಲ್ಲಿ ಒದಗಿಸಿದರು. ಇನ್ನೂ ಸಾವಿರಾರು ಪಲ್ಲ ಈ ಗೋಡೌನಿನಲ್ಲಿದೆ. ಆ ಸಂಸ್ಥೆ

(ಶ್ರೀ ಆರ್. ಮುನಿಸ್ವಾಮಯ್ಯ)

ಯವರು ಇನ್ನುಳಿದಿರುವ ಗೋಧಿಯನ್ನು ನಮಗೆ ಕೊಟ್ಟುಬಿಡಿ, ಬಡವರಿಗೆ ಮತ್ತು ರಿಲೀಫ್ ಕೆಲಸ ಮಾಡಿರುವವರಿಗೆ ಕೊಡಬೇಕು, ಇನ್ನೂ ಅನೇಕ ಕೆಲಸಗಳನ್ನು ಮಾಡಿಸಬೇಕಾಗಿದೆ, ಕೂಲಿಯನ್ನು ದವಸದ ರೂಪದಲ್ಲಿ ಕೊಡುವುದರಿಂದ ಹೆಚ್ಚಿನ ಸೇವೆ ಸಲ್ಲಿಸಬಹುದೆಂದು ಹೇಳಿ ಪತ್ರ ವ್ಯವಹಾರ ನಡೆಸುತ್ತಿದ್ದಾರೆ. ಆದರೆ ಆಹಾರ ಇಲಾಖೆ ಸರಿಯಾದ ಉತ್ತರ ಕೊಡಲಿಲ್ಲ. ನೋಡುತ್ತೇವೆ, ಲೆಕ್ಕ ಸರಿಯಾಗಿ ನೋಡಲು ಸಾಕಷ್ಟು ಸಿಬ್ಬಂದಿಯಿಲ್ಲವೆಂದು ಹೇಳುತ್ತಿದ್ದಾರೆ. ಸಾವಿರಾರು ಪಲ್ಲ ಗೋಧಿಯ ಲೆಕ್ಕ ಸಿಕ್ಕದೇ ಹೋದರೆ, ಇನ್ನು ಸರ್ಕಾರದಿಂದ ನೇರವಾಗಿ ವ್ಯವಹಾರ ಮಾಡಿರತಕ್ಕ ಎಷ್ಟೋ ದವಸ ಧಾನ್ಯ ಹೀಗೆ ಪೋಲಾಗಿರಬಹುದೆಂದು ಊಹೆ ಮಾಡಬೇಕಾಗಿದೆ. ಇಂಥ ವಿಷಯದಲ್ಲಿ ಯಾರೊಬ್ಬರಮೇಲೂ ಜವಾಬ್ದಾರಿಯನ್ನು ಹಾಕದೇಯಿದ್ದರೆ, ಸಂಬಂಧಪಟ್ಟ ಅಧಿಕಾರಿಗಳನ್ನು ಜವಾಬ್ದಾರಿಗೆ ಸಿಕ್ಕಿಸಿ ನಷ್ಟವಾಗಿರುವ ಹಣವನ್ನೂ ದವಸವನ್ನೂ ಪುನಃ ಪಡೆಯುವುದಕ್ಕೆ ಪ್ರಯತ್ನಮಾಡದೇ ಹೋದರೆ ಸರ್ಕಾರ ತಾತ್ಸಾರವಾಗಿ ನಡೆದುಕೊಂಡಿದ್ದಾರೆಂದು ಯೋಚನೆ ಮಾಡಬೇಕಾಗುತ್ತದೆ. ಹೀಗೆಯೇ ಕೆಲವು ಕಾಲ ಕಳೆದರೆ ಈ ಹಣ write off ಆಗಿ ಹಣವೂ ದವಸವೂ ಹೋದಂತಾಗುತ್ತದೆ. ಈ ಇಲಾಖೆಯಲ್ಲಿರುವವರು ಇನ್ನೂ ಬಲವಾಗಿ ದೊಡ್ಡ ದೊಡ್ಡ ಅಧಿಕಾರಿಗಳಾಗಿ ರಿಟೈರ್ ಆಗಿ ಸುಖವಾಗಿರುತ್ತಾರೆ. ಹೀಗೆ ನಡೆಯುವುದಕ್ಕೆ ಬಿಡಬಾರದು. ಜಾಗ್ರತೆ ರೆಡ್‌ಕ್ರಾಸ್ ಸಂಸ್ಥೆಯಿಂದ ಬಂದಿರುವ ಗೋಧಿ ಎಷ್ಟಿದೆಯೋ ಅದನ್ನಾದರೂ ಒಂದು ತಿಂಗಳೊಳಗೆ ಲೆಕ್ಕ ಕೊಡುವಂತೆ ಮಂತ್ರಿಗಳು ಏರ್ಪಾಡು ಮಾಡಬೇಕು. ದವಸವಿಲ್ಲದೇ ಹೋದರೆ ಎಷ್ಟು ರೂಪಾಯಿನ ಗೋಧಿಯನ್ನಿಟ್ಟಿದ್ದರು, ಎಷ್ಟಿದೆ ಎಂಬುದನ್ನು ಲೆಕ್ಕ ಮಾಡಿಸಿ ಆ ಸಂಸ್ಥೆಗೆ ಕೊಟ್ಟು ಜನರಿಗೆ ಆ ಸಂಸ್ಥೆಯಿಂದ ಸಹಾಯವಾಗುವ ಹಾಗೆ ಮಾಡಬೇಕೆಂದು ಹೇಳುತ್ತೇನೆ. ಆ ಇಲಾಖೆಯಲ್ಲಿ ನಡೆಯತಕ್ಕ ಕೆಲಸವನ್ನು ಇನ್ನೂ ಹೆಚ್ಚು ಶ್ರದ್ಧೆಯಿಂದ ನಡೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈಗ ಆಗಿರುವ ನಷ್ಟಕ್ಕೆ ಯಾರು ಯಾರು ಜವಾಬ್ದಾರರೆಂಬುದನ್ನು ಗೊತ್ತುಮಾಡಬೇಕು. ಹಿಂದೆ ಇದ್ದ ಅಧಿಕಾರಿಗಳು ಕಾರಣರಾಗಿರಬಹುದು, ಅವರಿಗಿಂತ ಹಿಂದಿದ್ದವರು ಜವಾಬ್ದಾರರಾಗಿರಬಹುದು. ಯಾವ ಯಾವ ಕಾಲದಲ್ಲಿ ನಷ್ಟವಾಗಿದೆ, ಎಷ್ಟೆಷ್ಟು ನಷ್ಟವಾಗಿದೆ ಎಂಬುದನ್ನೆಲ್ಲಾ ತಿಳಿದು ಆಯಾ ಅಧಿಕಾರಿಗಳಮೇಲೆ ಹಾಕಿ, ಉಂಟಾಗಿರುವ ನಷ್ಟವನ್ನು ಅವರಿಂದ ವಸೂಲು ಮಾಡಬೇಕೆಂದು ಹೇಳಿ ಈ ಡಿಮ್ಯಾಂಡನ್ನು ಸಮರ್ಥನೆ ಮಾಡುತ್ತೇನೆ.

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಆಹಾರದ ಇಲಾಖೆಯನ್ನು ಇನ್ನೂ ಉಳಿಸಿಕೊಂಡು ಹೋಗುವುದನ್ನು ನಾನು ಒಪ್ಪುವುದಿಲ್ಲ. ಈ ಇಲಾಖೆಯಲ್ಲಿ ಈಗ ಲೆಕ್ಕ ತನಿಖೆ ಮಾಡುವ ಕೆಲಸವೊಂದು ಉಳಿದಿದೆಯೇ ಹೊರತು ಈ ಇಲಾಖೆಯ ಅಗತ್ಯ ಉಳಿದಿಲ್ಲ. ಆದುದರಿಂದ ಲೆಕ್ಕಗಳನ್ನು ತನಿಖೆ ಮಾಡುವ ಕೆಲಸವನ್ನು ಆಡಿಟ್ ಇಲಾಖೆಗೆ ವಹಿಸಲಿ. ಈ ಇಲಾಖೆಗೆ ಸಂಬಂಧಿಸಿದ ಕಾರ್ಯಗಳೇನಾದರೂ ಇದ್ದಲ್ಲಿ ಜಿಲ್ಲಾಧಿಕಾರಿಗಳು ಸಬ್‌ಡಿವಿಜನ್ ಅಧಿಕಾರಿಗಳು ಮತ್ತು ಅಮಲ್ದಾರರುಗಳು ಇವರಿಗೆಲ್ಲ ಹಂಚಿ ಈ ಆಹಾರ ಇಲಾಖೆಯನ್ನು ಸಂಪೂರ್ಣವಾಗಿ ಮುಚ್ಚುವುದು ಒಳ್ಳೆಯದು. ಲೆಕ್ಕ ಕೊಡಬೇಕು'ಎನ್ನುವುದರಲ್ಲಿ ಎರಡು ಭಾಗವಿದೆ. ಕೆಲವರನ್ನು ಹೊಸದಾಗಿ ಈ ಇಲಾಖೆಗೆ ನೇಮಿಸಿಕೊಂಡರು. ಅವರನ್ನೆಲ್ಲ ಈಗ ಕೆಲಸದಿಂದ ತೆಗೆದು ಹಾಕಿದ್ದಾರೆ. ಅಂಥವರುಗಳಿಂದ ಹಣ ವಸೂಲಾಗಬೇಕಾಗಿದೆ ಎಂದು ಹೇಳಿದ್ದಾರೆ. ಆದರೆ ಅವರನ್ನೆಲ್ಲ ಯಾವಾಗ ಕೆಲಸದಿಂದ ಹೊಡೆದೋಡಿಸಿದರೋ, ಆಗ ಅವರೆಲ್ಲ 'ತಾವು ಏನು ತಿಂದುಹಾಕಿದ್ದೇವೆಯೋ ಅಷ್ಟೇ ಆಯಿತು' ಎಂದು ಹೊರಟುಹೋಗಿದ್ದಾರೆಯೇ ಹೊರತು ಅವರಿಂದ recover ಆಗುತ್ತದೆಂದು ನನಗೆ ನಂಬಿಕೆ ಇಲ್ಲ. ಅವರಿಂದ ಹಣ ಬರುತ್ತದೆ ಎಂದು ಲೆಕ್ಕದಲ್ಲಿ ತೋರಿಸುವುದಕ್ಕಿಂತ ಇನ್ನೇನೂ ಬರುವುದಿಲ್ಲವೆಂದು ಹೇಳುವುದು ಒಳ್ಳೆಯದು ಎಂದು ಭಾವಿಸುತ್ತೇನೆ. ಇನ್ನೊಂದು ವಿಷಯವೆಂದರೆ, ಸರ್ಕಾರಿ ನೌಕರರನ್ನು ಬೇರೆ ಬೇರೆ ಇಲಾಖೆಗಳಿಂದ ಈ ಆಹಾರ ಇಲಾಖೆಗೆ depute ಮಾಡಿಕೊಂಡು ಅವರಿಂದ ಕೆಲಸ ಕಾರ್ಯಗಳನ್ನು ನಡೆಸುತ್ತಿದ್ದರು. ಅದರಲ್ಲಿ ಕೆಲವರು ನಿಜವಾಗಿ ನ್ಯಾಯಾನ್ಯಾಯಗಳನ್ನು ನೋಡಿಕೊಂಡು ವರ್ತಿಸುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಇಂಥವರು ದಕ್ಷತೆಯಿಂದಲೂ ಮತ್ತು ನ್ಯಾಯದಿಂದಲೂ ಕೆಲಸ ಮಾಡುತ್ತಿದ್ದರು. ಆದರೆ ಹೆಗ್ಗಣಗಳು ಕೆಲವು ಇದ್ದುವು. ಅವು ಬಹಳಮಟ್ಟಿಗೆ ಮ ಗಿಸಿವೆ. ರೈಲ್ವೆ ಸ್ಟೇಷನ್‌ನಲ್ಲಿ ಹೆಗ್ಗಣಗಳು, ಗೋಡೌನಿನಲ್ಲಿ ಹೆಗ್ಗಣಗಳು ಮತ್ತು ಅಧಿಕಾರಿಗಳೂ ಸಹ ಹೆಗ್ಗಣಗಳಾಗಿ ಪರಿಣಮಿಸಿದ್ದರು. ಅಕ್ಕಿಯ ಕೊರತೆ ಇದ್ದು, ಅಕ್ಕಿ ಸಿಕ್ಕದೆ ಇದ್ದಾಗ ಆಹಾರ ಇಲಾಖೆಯಲ್ಲಿ ಹೋಗಿ ಕೆಲವರು ಸೇರಿಕೊಂಡರು. ಅವರಲ್ಲಿ ಕೆಲವರು ಸಾಹೇಬರಿಗೆ ಎಂದು ಐವತ್ತು ಸೇರು ಅಕ್ಕಿ ಕಳುಹಿಸಿಕೊಟ್ಟು ಅದರ ಪ್ರತಿಫಲವನ್ನು ತಾವೇ ಅನುಭವಿಸಿದವರೂ ಇದ್ದಾರೆ. ಕೆಲವು ಕಡೆ ಅನೇಕರು ತಿಂದೂ ಇದ್ದಾರೆ. ಯಾಕೆಂದರೆ ಆ ಕಾಲ ಹಾಗಿತ್ತು. ಈ ರೀತಿ ತಿಂದು ಹಾಕಿರುವವರಿಂದ ಏನಾದರೂ ಬರುತ್ತದೆಯೇ ? ಬರುವ ಹಾಗಿದ್ದರೆ ಎಷ್ಟು ಬರುತ್ತದೆ? ಎಂದು ನೋಡಬೇಕು. ಹಾಗೆ ಮಾಡದೆ ಈ ಇಲಾಖೆಯನ್ನು ಮುಂದುವರಿಸಿಕೊಂಡು ಹೋದರೆ ಈಗ ಆಗಿರತಕ್ಕ ಲುಕ್ಸಾನು ಜೊತೆಗೆ ಇನ್ನೂ ಸ್ವಲ್ಪ ಲುಕ್ಸಾನು ಮಾಡದಹಾಗಾಗುತ್ತದೆಯೇ ಹೊರತು ಬಾಕಿ ಇರುವುದನ್ನು ವಸೂಲ್ಮಾಡಿಕೊಳ್ಳುತ್ತೇವೆ ಎಂದರೆ ಅದು ಆಗದ ವಿಷಯವೆಂದು ನನ್ನ ಭಾವನೆ. Recover ಮಾಡುವುದರಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನೂ recover ಮಾಡುವುದಕ್ಕೆ ಆಡಿಟ್ ಇಲಾಖೆಗೇ ವಹಿಸಿ ಅಥವಾ ಬೇರೆ ಇಲಾಖೆಗೆ ವಹಿಸಿ. ಆ ರೀತಿ ಮಾಡದೆ ಈ ಇಲಾಖೆಯನ್ನು ಯಾಕೆ ಉಳಿಸಿಕೊಂಡು ಹೋಗಬೇಕು ? ಆದುದರಿಂದ ಈ ಇಲಾಖೆಯನ್ನು ತಕ್ಷಣ ನಿಲ್ಲಿಸಬೇಕು. 1956ನೇ ಏಪ್ರಿಲ್ ಒಂದನೇ ತಾರೀಖಿನಿಂದಲಾದರೂ ನಿಲ್ಲಿಸಿದರೆ ಒಂದು ವಿಧದಲ್ಲಿ ದೇಶಕ್ಕೆ ಉಳಿತಾಯವಾಗುತ್ತದೆ. ಇಲಾಖೆಗೆ ಬರಬೇಕಾಗಿರುವ ಹಣದಲ್ಲಿ ವಸೂಲ್ಮಾಡಬಹುದಾದದಷ್ಟು ವಸೂಲ್ಮಾಡಲು ರಹವಿಲ್ಲದ್ದೆಷ್ಟು ಎಂಬುದನ್ನು ತಿಳಿಯಲು ಬೇಕಾದರೆ ಅಧಿಕಾರಿಗಳನ್ನೊಳಗೊಂಡ ಒಂದು ಸಮಿತಿಯನ್ನು ಮಾಡಿ ಅವರ ಸಲಹೆಗಳನ್ನು ಮುಂದಿನ ವರ್ಷ ಈ ಸಭೆಯ ಮುಂದೆ ಇಡಿ. ಹೀಗೆ ಮಾಡಿ ಖರ್ಚುವೆಚ್ಚಗಳನ್ನು ಕಡಿಮೆ ಮಾಡಿದರೆ ದೇಶಕ್ಕೆ ಉಪಕಾರವಾಗುತ್ತದೆಂದು ನನ್ನ ಭಾವನೆ.

ಶ್ರೀ. ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಶ್ರೀಮಾನ್ ಭೀಮಪ್ಪನಾಯಕರು ಮಾತನಾಡುತ್ತ ಆಹಾರ ಇಲಾಖೆಯನ್ನು ಮುಂದುವರಿಸುವುದರಿಂದ ಪ್ರಯೋಜನವಿಲ್ಲ ಸರ್ಕಾರಕ್ಕೆ ಬಹಳ ನಷ್ಟವಾಗುತ್ತದೆಂದು ಅಪ್ಪಣೆ ಕೊಡಿಸಿದರು. ನಾನು ಕೂಡ ಅದನ್ನು ಸಮರ್ಥನೆ ಮಾಡುತ್ತ ಕೆಲವು ವಿಷಯಗಳನ್ನು ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. ಆಹಾರದ ಇಲಾಖೆ

ಯಲ್ಲಿ 1945ನೆ ಇಸವಿಯಿಂದ 1955ನೆ ಇಸವಿಯವರೆಗೂ ಅಧಿಕಾರಿಗಳು ಏನೇನು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ, ಯಾರ ಯಾರ ಕಾಲದಲ್ಲಿ ಏನೇನು ಅನ್ಯಾಯಗಳು ನಡೆದಿವೆ ಇದನ್ನೆಲ್ಲ ಸರ್ಕಾರದವರು ಕಂಡುಹಿಡಿದು ಅಂಥವರುಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಂಡರೆ ಒಂದು ಭದ್ರತೆ ಇರುತ್ತದೆ. ಸರ್ಕಾರದವರು ತಿಳಿದೂ ತಿಳಿಯದವರಂತೆ ಕೈಬಿಟ್ಟರೆ ಇಂಥ ಅನ್ಯಾಯಗಳು ಪ್ರತಿಯೊಂದು ಸಂದರ್ಭದಲ್ಲಿಯೂ ನಡೆಯುವುದಕ್ಕೆ ಅವಕಾಶವಾಗುತ್ತದೆ. ಮೈಸೂರು ಸಂಸ್ಥಾನದಲ್ಲಿರತಕ್ಕ ಎಲ್ಲ ಜಿಲ್ಲೆಗಳಲ್ಲಿಯೂ ಆಹಾರದ ಇಲಾಖೆ ಇದೆ. ಇದರ ವಿಚಾರದಲ್ಲಿ ನನಗೆ ತಿಳಿದ ಮಟ್ಟಿಗೆ, ಸರ್ಕಾರದವರು ತೊಂದರೆ ಮಾಡಿದ್ದಾರೆಂದು ಭಾವಿಸುತ್ತೇನೆ. ಸಂಸ್ಥಾನದಲ್ಲಿ ಉತ್ಪತ್ತಿಯಾಗಿರತಕ್ಕ ಆಹಾರ ಪದಾರ್ಥಗಳಲ್ಲಿ ಬಹುಮಟ್ಟಿಗೆ ಸಂಸ್ಥಾನದಿಂದ ಹೊರಗಡೆ ಹೋಯಿತು. ಭತ್ತ ಮತ್ತು ರಾಗಿ ಧಾರಣೆ ಕಳೆದ ವರ್ಷಕ್ಕಿಂತ ಜಾಸ್ತಿಯಾಗುತ್ತಿದೆ. ರಾಗಿ ಮತ್ತು ಭತ್ತ ನಮ್ಮ ಸಂಸ್ಥಾನಕ್ಕೆ ಆಗಬೇಕಾದಷ್ಟನ್ನೂ ನಮ್ಮಲ್ಲಿ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು. ಯಾವಕಾರಣದಿಂದಲೋ ಆದರ ಕಡೆ ಹೆಚ್ಚಾಗಿ ಗಮನಕೊಡಲಿಲ್ಲವೆಂದು ಭಾವಿಸುತ್ತೇನೆ. ಆದುದರಿಂದ ಪ್ರತಿನಿತ್ಯ ಬೇಕಾಗುವ ಆಹಾರದ ಬೆಲೆ ಜಾಸ್ತಿಯಾಗಿ ಜನರಿಗೆ ಬಹಳ ತೊಂದರೆಯಾಗಿದೆ. ಹೊಸ ಬೆಳೆಗಳು ಬರಬೇಕಾದರೆ ಇನ್ನೂ ಒಂಭತ್ತು ತಿಂಗಳಾಗಬೇಕು. ಇಂಥದರಲ್ಲಿ ಈಗಾಗಲೇ ರಾಗಿ ಬೆಲೆ 22-23ರೂಪಾಯಿಗಳಿದೆ ಮತ್ತು ಭತ್ತದ ಧಾರಣೆ 25-26ರೂಪಾಯಿಗಳಾಗಿದೆ. ಆದುದರಿಂದ ನಮ್ಮ ಸಂಸ್ಥಾನದಲ್ಲಿ ಉತ್ಪತ್ತಿಯಾದ ಆಹಾರ ಪದಾರ್ಥಗಳು ಹೊರಗಡೆಗೆ ಹೋಗುವುದಕ್ಕೆ ಅವಕಾಶ ಕೊಡಬಾರದಾಗಿತ್ತು ಎಂದು ಹೇಳುತ್ತೇನೆ. ಸರ್ಕಾರದವರು ಈಗಲಾದರೂ ಮೈಸೂರು ಸಂಸ್ಥಾನಕ್ಕೆ ಆಗುವಷ್ಟು ಆಹಾರ ಧಾನ್ಯವನ್ನು ಭದ್ರತೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಸಂಸ್ಥಾನವು ಇನ್ನೂ ವಿಶಾಲವಾಗುವ ಸನ್ನಿವೇಶ ವಿರುವುದರಿಂದ ಸುಮಾರು ಎರಡೂವರೆ ಕೋಟಿ ಪ್ರಜಾಸಂಖ್ಯೆಗೆ ಆಹಾರ ಧಾನ್ಯಗಳನ್ನು ಒದಗಿಸತಕ್ಕ ಜವಾಬ್ದಾರಿ ನಮ್ಮ ಸರ್ಕಾರದ ಮೇಲೆ ಇದೆ. ಅದಕ್ಕಾಗಿ ಸರ್ಕಾರದವರು ಆಹಾರ ಧಾನ್ಯಗಳನ್ನು ಸ್ವಲ್ಪ ವ್ಯವಸ್ಥಿತ ರೀತಿಯಲ್ಲಿ ಸಂಸ್ಥಾನಕ್ಕಾಗುವಷ್ಟನ್ನು ಮೀಸಲಾಗಿಡುವುದಕ್ಕೆ ಪ್ರಯತ್ನ ಮಾಡಬೇಕು.

ಕಂಟ್ರೋಲು ಜಾರಿಯಲ್ಲಿದ್ದ ಕಾಲದಲ್ಲಿ ಆಹಾರದ ಹಂಚಿಕೆ ವ್ಯವಸ್ಥೆಗೋಸ್ಕರ ಡಿಪೋಗಳನ್ನು ಮಾಡಿದ್ದರು. ಆ ಡಿಪೋಗಳಲ್ಲಿ ನಡೆದಿರತಕ್ಕ ಅನ್ಯಾಯ ಮತ್ತು ಅಕ್ರಮಗಳನ್ನು ಚೆನ್ನಾಗಿ ಪರಿಶೀಲನೆ ಮಾಡಿ, ಯಾರು ಯಾರು ಈರೀತಿ ಮಾಡಿದ್ದಾರೆಯೋ ಅವರುಗಳ ಮೇಲೆ, ಖಾಸಗಿಯವರಾಗಲಿ ಅಧಿಕಾರ ವರ್ಗದವರಾಗಲಿ, ಅವರ ಮೇಲೆ ಸೂಕ್ತ ಕ್ರಮಗಳನ್ನು ಕೈಗೊಂಡು ಸರ್ಕಾರದಲ್ಲಿ ಭದ್ರತೆ ನೆಲಸುವಂತೆ ಮಾಡಬೇಕು ಎಂದು ಈ ಡಿಮ್ಯಾಂಡನ್ನು ಸಮರ್ಥನೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ ಶಾಖೆಯ ಮಂತ್ರಿಗಳು).—ಸ್ವಾಮಿ, ಕಂಟ್ರೋಲು ಜಾರಿಯಲ್ಲಿದ್ದ ಕಾಲದ ಆಹಾರ ಇಲಾಖೆಯ ಲೆಕ್ಕ ಪತ್ರಗಳ ವಿಷಯವನ್ನು ಈಗ ಪ್ರಸ್ತಾಪ ಮಾಡುತ್ತ ಶ್ರೀಮಾನ್ ಭೀಮಪ್ಪನಾಯಕರು ಆದಷ್ಟು ಬೇಗ ಇಲಾಖೆಯನ್ನು ಮುಚ್ಚಿಬಿಡಿ ಎಂದು ಸಲಹೆ ಮಾಡಿದ್ದಾರೆ. ಅದಕ್ಕಿಂತ ಉತ್ತಮವಾದ ಸಲಹೆಯನ್ನು ನಾನು ಮಾಡುವುದಕ್ಕೆ ಶಕ್ತನಾಗಿಲ್ಲ. ಆದಷ್ಟು ಬೇಗ ಈ ಇಲಾಖೆಯನ್ನು ಮುಚ್ಚಿಬಿಡಬೇಕೆನ್ನುವುದು ವಾಸ್ತವವಾಗಿಯೂ ನಿಜ. ಸುಮಾರು 12ವರ್ಷಗಳ ಕಾಲದ ಕಂಟ್ರೋಲ್ ಲೆಕ್ಕ ಪತ್ರಗಳಿಂದ ನಮಗೆ ಸುಮಾರು 11,15,00,000 ರೂಪಾಯಿಗಳ ನಷ್ಟವಾಗಿದೆ. ಅಂದಮೇಲೆ ಇನ್ನೂ ವ್ಯವಹಾರಗಳು ಎಷ್ಟು ನಡೆದಿರಬೇಕು ಎಂಬುದನ್ನು ತಾವೇ ಯೋಚನೆ ಮಾಡಬೇಕು. ಇದರಲ್ಲಿ 2,28,00,000 ರೂಪಾಯಿಗಳನ್ನು ಭಾರತ ಸರ್ಕಾರದವರು ಕೊಟ್ಟರೆ ಉಳಿಕೆಯಾದ 8,87,00,000 ರೂಪಾಯಿಗಳು ಮೈಸೂರು ಸಂಸ್ಥಾನಕ್ಕೆ ಅನ್ವಯಿಸುವ ನಷ್ಟವಾಗಿದೆ. ಆದುದರಿಂದ ಬಹಳ ಭಾರಿ ಪ್ರಮಾಣದಲ್ಲಿ ಈ ವ್ಯವಹಾರಗಳು ನಡೆದಿವೆ. ಅದು ಯಾವರೀತಿ ನಡೆಯಿತೆಂದರೆ ಈಗ ಯಾವರೀತಿ ಪರಿಶೀಲನೆ ಮಾಡಿ ಕೆಲಸ ಕಾರ್ಯಗಳು ನಡೆಯುತ್ತವೆಯೋ ಆರೀತಿ ನಡೆಯುತ್ತಿರಲಿಲ್ಲ. ಆಹಾರ ದವಸಗಳನ್ನು ಜನಗಳಿಗೆ ಒದಗಿಸಿ ಅವರ ಪ್ರಾಣಗಳನ್ನು ಕಾಪಾಡಬೇಕು ಎಂಬ ಒಂದೇ ಒಂದು ತತ್ವದ ಮೇಲೆ ನಡೆಯುತ್ತಿತ್ತು. ಆಗ ಇಟ್ಟಿದ್ದ ಲೆಕ್ಕ ಪತ್ರಗಳೆಲ್ಲವನ್ನು ಪರಿಶೋಧನೆ ಮಾಡಿ ಯಾವುದ ಸರಿ, ಯಾವುದು ಸರಿಯಿಲ್ಲ, ಎಂಬುದಬ್ನು ನಿರ್ಧರಿಸಿ the matter of setting right. ಕಾರ್ಯ ಮಾತ್ರ ಈಗ ಉಳಿದಿದೆ. ನನಗೆ ಈಗ ತಿಳಿದಿರುವಂತೆ 1-2-1956ರಲ್ಲಿ ಇನ್ನು audit objection ನಲ್ಲಿರತಕ್ಕದ್ದು 98,88,881 ರೂಪಾಯಿಗಳು. ಈಗ ತಾವುಗಳು ಯಾರು ಯಾರು ಇದಕ್ಕೆ ಜವಾಬ್ದಾರರೆಂದು ಪತ್ತೆ ಹಚ್ಚಿ ಅವರಿಗೆ ಶಿಕ್ಷೆಮಾಡಬೇಕೆಂದು ಹೇಳಿದಿರಿ. ಅದನ್ನು ಆವಾಗಲೇ ಮಾಡಿದೆ. ಎಷ್ಟೋ ಜನರ ಮೇಲೆ ಕಾರ್ಯಕ್ರಮಗಳನ್ನು ತೆಗೆದುಕೊಂಡು ರುಜುವಾತಾಗಿರತಕ್ಕ ಕೇಸುಗಳನ್ನು ಕಳುಹಿಸಿದ್ದಾರೆ. ಅದರ ಮೇಲೆ ಸರ್ಕಾರದವರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಈಗ ಸರ್ಕಾರದವರ ಮುಂದೆ ಕೆಲವರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕ ಕೇಸುಗಳಿದ್ದು ಅವು ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಹೋಗಿ ಅಲ್ಲಿ pending ನಲ್ಲಿವೆ. ಅವುಗಳ ಬಗ್ಗೆಕೂಡ ಕಾರ್ಯ ಕ್ರಮ ತೆಗೆದು ಕೊಳ್ಳುತ್ತೇವೆ. ಆದರೆ audit objection ಗಳಿಗೆ ಸರಿಯಾಗಿ ಉತ್ತರ ಕೊಟ್ಟು ಲೆಕ್ಕ ಪತ್ರಗಳನ್ನು ಸರಿಪಡಿಸತಕ್ಕ ಕೆಲಸ ಮಾತ್ರವೇ ಉಳಿದಿರತಕ್ಕದ್ದು.

4-30 P.M.

ಈ ಲೆಕ್ಕ ಪತ್ರಗಳನ್ನು ಸರಿಪಡಿಸದೆ ಈ ಇಲಾಖೆಯನ್ನು ತೆಗೆಯುವುದಕ್ಕಾಗುವುದಿಲ್ಲ. ಲೆಕ್ಕ ಪತ್ರ ಸರಿಪಡಿಸುವುದಕ್ಕೆ ಬೇಕಾಗುವಷ್ಟು ಸಿಬ್ಬಂದಿಯನ್ನಾದರೂ ಇಟ್ಟಿರಬೇಕು. ಅವರು ಯಾವ ಹೆಡ್ಡಿಗೆ ಛಾರ್ಜ್ ಆಗಬೇಕೆಂಬುದನ್ನು ನೋಡಿ ಪೂರ್ಣವಾಗಿ ಲೆಕ್ಕ ಪತ್ರ ಸರಿಪಡಿಸಿದ ಮೇಲೆ ಈ ಇಲಾಖೆಯನ್ನು ತೆಗೆಯಬೇಕಾಗುತ್ತದೆ. ಅನಾವಶ್ಯಕವಾಗಿ ಈ ಬಗ್ಗೆ ಹಣವನ್ನು ಖರ್ಚು ಮಾಡಬೇಕೆಂಬ ಆಶೆಯಿಲ್ಲ. ಅದರಲ್ಲೂ ವೈಯಕ್ತಿಕವಾಗಿ ನಾನು ಈ ಸಭೆಯಲ್ಲಿ ಎಷ್ಟೋಸಲ ಆಹಾರ ಇಲಾಖೆ ಲೆಕ್ಕ ಪತ್ರ ಆದಷ್ಟು ಬೇಗ ಸರಿಪಡಿಸಬೇಕು. ಫುಡ್ ಕಂಟ್ರೋಲ್ ಹೋಗಬೇಕು ಎಂದು ಪ್ರತಿಪಾದನೆ ಮಾಡಿದ್ದೇನೆ.

ಶ್ರೀ ಯು. ಎಂ. ಮಾದಪ್ಪ.—ಎಲ್ಲಾಜಿಲ್ಲೆಗಳ ಲೆಕ್ಕವನ್ನೂ ಕ್ರೋಡೀಕರಿಸಿ ಒಂದು ಕಡೆ ಸರಿಪಡಿಸುವುದಕ್ಕೆ ಸಾಧ್ಯವಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗಾಗಬೇಕೆಂದು ಹೇಳುವುದಕ್ಕೆ ನಾವು ಆಶೆಪಡುತ್ತೇವೆ. ಈ ಇಲಾಖೆಯನ್ನು ತೆಗೆಯಬೇಕು, ಲೆಕ್ಕ ಪತ್ರ ಸರಿಪಡಿಸಬೇಕು, ಮುಂದೆ ಇದು ಇರಬಾರದು ಎಂದು ಹೇಳುವುದನ್ನು ಒಪ್ಪುತ್ತೇವೆ. ಈ ವಿಷಯದಲ್ಲಿ ನನಗೂ ತಮಗೂ ಭಿನ್ನಾಭಿಪ್ರಾಯವಿಲ್ಲ. ಆದರೆ ಈ ಕಾರ್ಯಕ್ರಮ ಹೇಗೆ ಮಾಡಬೇಕೆಂಬುದನ್ನು ಪರಿಣತರನ್ನು ಕೇಳಿ ಅವರು ಸೂಚಿಸುವುದಕ್ಕೆ ಅನುಗುಣವಾಗಿ ವ್ಯವಸ್ಥೆಮಾಡಬೇಕು. ಅನಿವಾರ್ಯವಾಗಿ ಎಷ್ಟು ಬೇಕೋ ಅಷ್ಟು ಮಾತ್ರ ಖರ್ಚುಮಾಡುತ್ತೇವೆಯೇ ವಿನಾ ಅದಕ್ಕಿಂತ ಒಂದು ಕಾಸು ಕೂಡ ಹೆಚ್ಚಾಗಿ ಖರ್ಚುಮಾಡುವುದಿಲ್ಲ.

Sri K. PATTABHIRAMAN (Kolar).—I want one information from the Hon'ble Minister. Is it not true that even from the taluk level you are maintaining a staff and is it really necessary that from the taluk level onwards you must maintain the entire staff to answer, perhaps, one audit objection in thirty days?

Sri H. M. CHANNABASAPPA.—I quite appreciate the spirit in which the suggestion has been made. Offhand I cannot tell the Hon'ble member as to how many officers have been appointed in District Headquarters, in Taluk Headquarters and at the State level. But, I am one with him to see that the staff is minimised and I assure that only such staff as is absolutely necessary will be appointed and to see that this Head is wiped off from the Budget. With these remarks, I request the House to kindly approve this Demand.

Mr. DEPUTY SPEAKER.—The question is:

"That a sum not exceeding Rs. 64,75,100 be granted to the Government to defray the charges which will come in course of payment during the year ending 31st day of March 1957, in respect of 'Capital Outlay on State Schemes of Government Trading'."

The motion was adopted.

Mr. DEPUTY SPEAKER.—the House will now adjourn and meet tomorrow at 12 o'clock.

The House adjourned at Thirty-two Minutes past Four of the Clock to meet at Twelve of the Clock on Thursday, 29th March 1956.

WD 2896—GPB—550—19-7-56

KSA LIBRARY, B'lore
B004725
328.32402 548 LAD,1956
JJ32